ಮಾನವಿಕ ಕರ್ಣಾಟಕ

ಸಂಪುಟ ೧೧ ಸಂಚಿಕೆ ೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೧

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸ ಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕ ಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೧ ಸಂಚಿಕೆ ೨

೪೨

ಫೆಬ್ರವರಿ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೮೧

MANAVIKA KARNATAKA, Kannada quarterly of the University of Mysore. Volume 11, Number 2, February 1981. Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧.	ಎನ್. ಬಸವಾರಾಧ್ಯ	ಉಪ ನಿರ್ದೇಶಕರು, ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬
೨.	ಎಚ್. ಎಸ್. ಹರಿಶಂಕರ್	ಅಧ್ಯಾಪಕ, ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
೩.	ಎಚ್. ಎಸ್. ಸುಜಾತ	ಅಧ್ಯಾಪಕಿ, ಡಿ. ಬನುಮಯ್ಯ ಕಾಲೇಜು, ಮೈಸೂರು
೪.	ಜ್ಯೋತಿಬಾಯಿ	ಸಂಶೋಧನ ವಿಧ್ಯಾರ್ಥಿನಿ (FIP), ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು
೫.	ಜಿ. ಆರ್. ಕುಪ್ಪುಸ್ವಾಮಿ	ಅಧ್ಯಾಪಕ, ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ–೫೮೦ ೦೦೩
೬.	ಟಿ. ಆರ್. ನಾಗಪ್ಪ	೨೯೦೪, ಚಾಮುಂಡೀಪುರಂ, ಮೈಸೂರು–೫೭೦ ೦೦೪

ಎನ್. ಬಸವಾರಾಧ್ಯ

ಚಿಂತನ ೧೦

ವಿದ್ಯೆ

ಮಾನವನ ಜ್ಞಾನವಿಕಾಸಕ್ಕೆ ವಿದ್ಯೆ ಒಂದು ಪ್ರಮುಖವಾದ ಸಾಧನವಾಗಿದೆ. ಪ್ರಾಣಿವರ್ಗದಿಂದ ಮಾನವನನ್ನು ಬೇರ್ಪಡಿಸಿ ಮೇಲೆತ್ತಿರುವುದು ವಿದ್ಯೆ. ವಿದ್ಯಾವಿಹೀನನಾದವನು ಪಶುಸಮಾನನೆಂದು ಪರಿಗಣಿಸಲಾಗಿದೆ. ಪ್ರಾಚೀನ ಆರ್ಯೋಕ್ತಿಯೊಂದು ಇದನ್ನೇ ಸಾರುತ್ತಿದೆ:

> ವಿದ್ಯಾನಾಮ ನರಸ್ಯರೂಪಮಧಿಕಂ ಪ್ರಚ್ಛನ್ನ ಗುಪ್ತಂಧನಂ
> ವಿದ್ಯಾ ಭೋಗಕರೀ ಯಶಸ್ಸುಖಕರೀ ವಿದ್ಯಾಗುರುಣಾಂ ಗುರುಃ
> ವಿದ್ಯಾ ಬಂಧುಜನೋ ವಿದೇಶಗಮನೇ ವಿದ್ಯಾ ಪರಾದೇವತಾ
> ವಿದ್ಯಾರಾಜ ಸುಪೂಜ್ಯತೇ ನಹಿಧನಂ ವಿದ್ಯಾವಿಹೀನಃ ಪಶುಃ

ಮಾನವನಿಗೆ ವಿದ್ಯೆಯೇ ಉತ್ತಮ ಸೌಂದರ್ಯ. ಈ ವಿದ್ಯೆ ಎಂಬುದು ರಹಸ್ಯವಾಗಿ ಬಚ್ಚಿಟ್ಟ ಹಣ. ವಿದ್ಯೆಯು ಭೋಗಗಳನ್ನೂ ಕೀರ್ತಿಯನ್ನೂ ತಂದುಕೊಡುತ್ತದೆ. ಈ ವಿದ್ಯೆ ಗುರುಗಳಿಗೆ ಗುರು. ಎಂದರೆ ಉತ್ತಮವಾದ ವಿಷಯಸ್ಫೂರ್ತಿಯಿಂದ ಗುರೂಪದೇಶವನ್ನೂ ವಿಚಾರಿಸುತ್ತದೆ. ಇದು ಪರದೇಶದಲ್ಲಿ ಬಂಧುವಿನಂತೆ ಆದರಿಸುತ್ತದೆ. ಆದ್ದರಿಂದ ವಿದ್ಯೆಯನ್ನು ಪರಾದೇವತೆಯಂತೆ ಆರಾಧಿಸಬೇಕು. ವಿದ್ಯೆ ರಾಜರಿಂದ ಗೌರವವನ್ನೂ ತಂದುಕೊಡುತ್ತದೆ. ಹಣವಾದರೋ ವಿದ್ಯೆಯಂತಲ್ಲ. ಆದ್ದರಿಂದ ವಿದ್ಯೆಯಿಲ್ಲದವನು ಪಶುವಿಗೆ ಸಮಾನನಾದವನು. ಒಟ್ಟಿನಲ್ಲಿ ವಿದ್ಯಾರ್ಜನೆಯಿಂದ ವಿಹಿತಾರ್ಥ ಪ್ರಾಪ್ತವಾಗುತ್ತದೆ.

ವಿದ್ಯೆಗೆ ಸಮಾನವಾದ ಕಣ್ಣಿಲ್ಲ. ಸತ್ಯಕ್ಕೆ ಸಮಾನವಾದ ತಪಸ್ಸಿಲ್ಲ. ಮಮತೆಗೆ ಸಮಾನವಾದ ದುಃಖವಿಲ್ಲ. ಮಮಕಾರವಿಲ್ಲದಿರುವುದಕ್ಕೆ ಸಮಾನವಾದ ಸುಖವಿಲ್ಲ. ಕಣ್ಣಿನಿಂದ ಲೋಕವ್ಯಾಪಾರಗಳನ್ನು ನೆರವೇರಿಸಿ ಸುಖಪಡುವಂತೆ ಜ್ಞಾನಚಕ್ಷು ಎನಿಸುವ ವಿದ್ಯೆಯಿಂದ ಎಲ್ಲವನ್ನೂ ತಿಳಿದುಕೊಂಡು ಸಂತೋಷಿಸಬಹುದಾಗಿದೆ.

ಲೋಕದಲ್ಲಿ ಎಲ್ಲ ವಿಧವಾದ ಧನಗಳಲ್ಲಿ ವಿದ್ಯೆಯೆಂಬ ಧನವೇ ಅತ್ಯಂತ ಶ್ರೇಷ್ಠವಾದುದು. ಏಕೆಂದರೆ ಈ ವಿದ್ಯೆಯನ್ನು ಪರರಿಗೆ ಕೊಡುತ್ತ ಬಂದಷ್ಟು ಅದು ವೃದ್ಧಿಯನ್ನೇ ಹೊಂದುತ್ತದೆ. ಧನವಾದರೋ ನಾಶವಾಗುವಂತಹುದು. ಆದರೆ ವಿದ್ಯೆ ಎಂದೆಂದೂ ನಾಶವಾಗದಂತಹುದು. ಕೊಳ್ಳೆ ಲೂಟಿ ದಂಡ ಅಪರಾಧಗಳಿಂದ ಒಡವೆ ವಸ್ತುಗಳನ್ನು ಪರರು ಅಪಹರಿಸುವಂತೆ ಈ ವಿದ್ಯಾಧನವನ್ನು ಯಾರೂ ಅಪಹರಿಸಲಾರರು. ಆದ್ದರಿಂದ ಯಾವುದಕ್ಕೆ ಚ್ಯುತಿಯುಂಟಾದರೂ ವಿದ್ಯೆಗೆ ಮಾತ್ರ ಎಂದೆಂದಿಗೂ ಚ್ಯುತಿಯಿಲ್ಲ.

ಒಂದು ಪ್ರಾಚೀನ ಶ್ಲೋಕ ಹೀಗಿದೆ :

ವಿದ್ಯಯಾ ದ್ಯೋತತೇ ರಾಜ್ಯಂ
ವಿದ್ಯಯಾ ಜೀಯತೇ ರಿಪುಃ
ವಿದ್ಯಯಾ ಜ್ಞಾಯತೇ ಕೃತ್ಯಂ
ವಿದ್ಯಯಾ ಲಭತೇ ಯಶಃ

ವಿದ್ಯೆಯಿಂದ ರಾಜ್ಯವೆಲ್ಲವೂ ಬೆಳಗುತ್ತದೆ. ವಿದ್ಯೆಯಿಂದ ಶತ್ರುಗಳನ್ನು ಜಯಿಸಬಹುದು. ವಿದ್ಯೆಯಿಂದ ಮಾಡಬೇಕಾದ ಕೆಲಸಗಳ ಪರಿವೆಯುಂಟಾಗುವುದು. ವಿದ್ಯೆಯಿಂದ ಕೀರ್ತಿ ಲಭಿಸುವುದು.

ವಿದ್ಯೆಯಿಂದ ಧರ್ಮಾಧರ್ಮಜ್ಞಾನ ಪ್ರಾಪ್ತಿಯಾಗುವುದು. ಇದರಿಂದ ಧರ್ಮಾರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥ ಸಿದ್ಧಿಯಾಗುವುದು. ಆದ್ದರಿಂದ ವಿದ್ಯೆಯೇ ಸಕಲ ಸುಖಸಾಧನ.

ಮತ್ತೊಂದು ಪ್ರಾಚೀನೋಕ್ತಿ ಹೀಗೆ ಹೇಳುತ್ತದೆ :

ವಿದ್ಯಾ ಪಿತೇವ ಹಿತಕೃತ್
ವಿದ್ಯಾ ಮಾತೇವ ರಕ್ಷಿತಾ
ವಿದ್ಯಾ ಪ್ರಿಯೇವ ಸುಖದಾ
ವಿದ್ಯಾ ಕಲ್ಪತರೂಪಮಾ

ಇದರ ಅರ್ಥ ಇಷ್ಟು: ವಿದ್ಯೆ ತಂದೆಯಂತೆ ಹಿತವನ್ನುಂಟುಮಾಡುತ್ತದೆ. ತಂದೆ ಮಕ್ಕಳಿಗೆ ಯಾವಾಗಲೂ ಒಳ್ಳೆಯದೇ ಆಗಬೇಕೆಂದು ಸದಾ ಚಿಂತಿಸುತ್ತ ಅವರಿಗೆ ಸದ್ವಿಷಯಗಳನ್ನು ಬೋಧಿಸುತ್ತಿರುವಂತೆ ವಿದ್ಯೆ ಯಾವಾಗಲೂ ತನಗೆ ಹಿತೋಪದೇಶಕವಾಗಿರುತ್ತದೆ. ತಾಯಿ ಮಕ್ಕಳನ್ನು ಸಾಕಿ ಸಲಹಿ ಪೋಷಿಸುವಂತೆ ವಿದ್ಯೆ ಜೀವನಕ್ಕೆ ಸಹಾಯಕವಾಗಿರುತ್ತದೆ. ಪ್ರಿಯೆ ಸುಖವನ್ನುಂಟುಮಾಡುವಂತೆ ವಿದ್ಯೆ ಮನೋಲ್ಲಾಸಕ ವಿಷಯಪರಿಜ್ಞಾನವನ್ನುಂಟುಮಾಡುತ್ತದೆ. ಆದ್ದರಿಂದಲೇ ವಿದ್ಯೆ ಬೇಡಿದ್ದನ್ನು ನೀಡುವ ಕಲ್ಪವೃಕ್ಷಕ್ಕೆ ಸಮಾನವಾದುದು.

ನಕ್ಷತ್ರಗಳಿಗೆ ಚಂದ್ರ ಹೇಗೆ ಭೂಷಣಪ್ರಾಯನೋ ಸ್ತ್ರೀಯರಿಗೆ ಪುರುಷರು ಹೇಗೆ ಭೂಷಣಪ್ರಾಯರೋ ಭೂಮಿಗೆ ಧರ್ಮಾತ್ಮನಾದ ರಾಜನು ಹೇಗೆ ಭೂಷಣಪ್ರಾಯನೋ ಹಾಗೆ ಸರ್ವಕ್ಕೂ ವಿದ್ಯೆಯೇ ಭೂಷಣಪ್ರಾಯವು. ಅದನ್ನೇ ಈ ಶ್ಲೋಕ ಸಾರುತ್ತಿದೆ :

ನಕ್ಷತ್ರ ಭೂಷಣಂ ಚಂದ್ರೋ
ನಾರೀಣಾಂ ಭೂಷಣಂ ಪತಿ ಃ
ಪೃಥಿವೀ ಭೂಷಣಂ ರಾಜಾ
ವಿದ್ಯಾ ಸರ್ವಸ್ಯ ಭೂಷಣಂ

ಪಾನನಿರೋಧ

ಸಪ್ತವ್ಯಸನಗಳಲ್ಲಿ ಮದ್ಯಪಾನವೂ ಒಂದು. ಆರ್ಷೇಯ ಕಾಲದಿಂದಲೂ ಮದ್ಯಪಾನ ಜಗತ್ತಿನಾದ್ಯಂತ ರೂಢಿಯಲ್ಲಿದೆ. ಪಾಶ್ಚಾತ್ಯ ದೇಶಗಳಲ್ಲಂತೂ ಇದು ತುಂಬ ಬಳಕೆಯಲ್ಲಿದೆ. ಭರತಖಂಡದಲ್ಲಿ ಬಹಳ ಹಿಂದಿನಿಂದಲೂ ಇದು ಪ್ರಚಲಿತವಾಗಿತ್ತು. ಇದಕ್ಕೆ ಮದ್ಯಪಾನ, ಮಧುಪಾನ, ಸುರಾಪಾನ, ಮದಿರಾಪಾನ ಎಂಬ ಹೆಸರುಗಳಿದ್ದವು. ದೇವಾಧಿದೇವತೆಗಳೂ ಋಷಿಗಳೂ ಮದ್ಯಪಾನ ಮಾಡುತ್ತಿದ್ದುದಕ್ಕೆ ನಿದರ್ಶನಗಳಿವೆ. ಅವರು ಸೇವಿಸುತ್ತಿದ್ದ ಪಾನೀಯಗಳಿಗೆ ಬೇರೆಬೇರೆ ಹೆಸರುಗಳಿದ್ದುವು. ಈ ಚಟಕ್ಕೆ ಒಮ್ಮೆ ಬಲಿಯಾದರೆ ಇದರಿಂದ ಬಿಡುಗಡೆ ಹೊಂದುವುದು ಕಷ್ಟಸಾಧ್ಯವಾದುದು.

ಪ್ರಾಚೀನ ಕಾವ್ಯಗಳಲ್ಲಿ ಮಧುಪಾನಕ್ಕೆ ಬಹಳ ಮಹತ್ವವನ್ನು ಕೊಡಲಾಗಿದೆ. ಅಷ್ಟಾದಶ ವರ್ಣನೆಗಳಲ್ಲಿ ಮಧುಪಾನ ಪ್ರಕರಣವೂ ಒಂದು. ನಮ್ಮ ಕವಿಗಳು ಈ ಪ್ರಕರಣವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಇದಕ್ಕೆ ದೃಷ್ಟಾಂತವಾದ ಒಂದು ಪದ್ಯವನ್ನು ನೋಡಬಹುದು.

ಗಾಳಿಗೆ ಮಾತನಾಡುವರು ಹಾರುವ ಹಕ್ಕಿಗೆ ಜೋಹರೆಂಬರೆ
ಳ್ದೂಳುವ ನಾಯ್ಗೆ ಮುದ್ದುಗೊಡಲೀಕ್ಷಿಸುವರ್ ಮರುಳಿಂಗೆ ಬುದ್ಧಿಯಂ
ಹೇಳುವರುಟ್ಟದಂ ಕಳೆದು ನೆತ್ತಿಗೆ ಸುತ್ತುವರಟ್ಟಿಯಿಂದೆ ಕಾ
ಟಿಘ್ಳೋಟಿಗಳಾಗಿ ಕೂಗುವರದೇಂ ಮಧುಪಾನದ ಸೊರ್ಕು ಸಾಲದೇ

ಗಾಳಿಯೊಡನೆ ಮಾತನಾಡುವರು, ಆಕಾಶದಲ್ಲಿ ಹಾರುತ್ತಿರುವ ಹಕ್ಕಿಗೆ ನಮಸ್ಕಾರ ಮಾಡುವರು, ಬೊಗಳುವ ನಾಯಿಗೆ ಮುದ್ದು ಕೊಡುವುದಕ್ಕೆ ಹೋಗುವರು, ಹುಚ್ಚನಿಗೆ ಬುದ್ಧಿವಾದ ಹೇಳುವರು, ಉಟ್ಟ ಬಟ್ಟೆಯನ್ನು ಬಿಚ್ಚಿ ತಲೆಗೆ ಸುತ್ತಿಕೊಳ್ಳುವರು, ಕಾಡು ಕೋಳಿಗಳಂತೆ ಕೂಗುವರು, ಕುಡಿದು ಸೊಕ್ಕು ನೆತ್ತಿಗೇರಿದವರು ಮಾಡುವ ಕೆಲವು ಕ್ರಿಯೆಗಳನ್ನು ಇಲ್ಲಿ ಬಣ್ಣಿಸಲಾಗಿದೆ. ಗಂಡಸರೂ ಹೆಂಗಸರೂ ಮಧುಪಾನ ಮಾಡುತ್ತಿದ್ದುದಕ್ಕೆ ಕಾವ್ಯಗಳಲ್ಲಿ ಆಧಾರಗಳಿವೆ, ನಿದರ್ಶನಗಳಿವೆ.

ಮದ್ಯಪಾನದಿಂದ ಅನರ್ಥಗಳಾಗುತ್ತವೆ, ಅನಾಹುತಗಳಾಗುತ್ತವೆ ಎಂಬುದನ್ನು ಎಲ್ಲರೂ ಬಲ್ಲರು. ಆದರೂ ಈ ಚಟಕ್ಕೆ ಬಲಿಯಾಗುತ್ತಾರೆ. ಮಹಾಭಾರತದಲ್ಲಿ ಯಾದವರು ಮದ್ಯಪಾನಮಾಡಿ ಒಬ್ಬರೊಡನೊಬ್ಬರು ಹೊಡೆದಾಡಿ ಸತ್ತ ಪ್ರಸಂಗವನ್ನು ಕೇಳಿದ್ದೇವೆ.

ಮದ್ಯಪಾನದಿಂದ ಜಠರ ಕೆರಳುತ್ತದೆ. ಪಿತ್ತಕೋಶ ಮೂತ್ರಪಿಂಡಗಳಿಗೆ ತೊಂದರೆಯಾಗುತ್ತದೆ. ನರಗಳ ದೌರ್ಬಲ್ಯವುಂಟಾಗುತ್ತದೆ. ಇದು ಕರ್ತವ್ಯದಕ್ಷತೆಯನ್ನು ನಾಶಪಡಿಸುವುದರ ಜೊತೆಗೆ ಸಿಡುಕತನ ಮುಂಗೋಪ ದುರ್ಬುದ್ಧಿಯನ್ನು ಅಧಿಕಗೊಳಿಸುತ್ತದೆ. ಇಷ್ಟಾದರೂ ಇಂದು ಮದ್ಯಪಾನ ಪ್ರತಿಷ್ಠಿತ ಸಮಾಜದಲ್ಲಿ ಒಂದು ಅಪರಿಹಾರ್ಯ ಕ್ರಿಯೆಯಾಗಿದೆ.

ಮದ್ಯಪಾನ ನಿರೋಧಕ್ಕಾಗಿ ಹಲವಾರು ಮಂದಿ ಶ್ರಮಿಸಿದ್ದಾರೆ. ಮಹಾತ್ಮಗಾಂಧಿ ಅವರು ಹೀಗೆ ಹೇಳಿದ್ದಾರೆ: "ನನ್ನನ್ನು ಒಂದು ಗಂಟೆಯ ಕಾಲ ಭಾರತದ ಸರ್ವಾಧಿಕಾರಿಯನ್ನಾಗಿ ಮಾಡಿದರೆ ರಾಷ್ಟ್ರದಲ್ಲಿರುವ ಎಲ್ಲಾ ಮಾದಕ ಪದಾರ್ಥಗಳ ಅಂಗಡಿಗಳನ್ನೂ ಮೊದಲು ಮುಚ್ಚಿಸುತ್ತೇನೆ. ಕಾರ್ಖಾನೆಯ ಮಾಲೀಕರು ತಮ್ಮ ಕೂಲಿಕಾರರ ಸ್ಥಿತಿಗತಿಯನ್ನು ಉತ್ತಮಪಡಿಸುವಂತೆ ಮಾಡುತ್ತೇನೆ. ಈ ಕೂಲಿಕಾರರಿಗೆ ಮಾದಕ ವಸ್ತುಗಳಿಲ್ಲದ ಉತ್ತಮ ಪಾನೀಯಗಳನ್ನು ಒದಗಿಸುವಂತೆ ಏರ್ಪಡಿಸುತ್ತೇನೆ. ಇದಕ್ಕೆ ಆ ಕಾರ್ಖಾನೆಯ ಮಾಲೀಕರೇನಾದರೂ ಹಣದ ಅಭಾವವನ್ನು ಮುಂದೊಡ್ಡಿದರೆ ಆ ಕಾರ್ಖಾನೆಗಳನ್ನೇ ಮುಚ್ಚಿಸಿ ಬಿಡುತ್ತೇನೆ. ಪಾಶ್ಚಾತ್ಯರಿಗೂ ರೋಗಿಗಳಿಗೂ ವೈದ್ಯಕೀಯ ಕಾರಣಕ್ಕಾಗಿ ಬ್ರಾಂದಿ ಮೊದಲಾದ ಪಾನೀಯಗಳು ಬೇಕಾದರೆ ವೈದ್ಯರಿಂದ ಅವರ ಪರೀಕ್ಷೆಯನ್ನು ಮಾಡಿಸಿ ಸರಕಾರದ ವೆಚ್ಚದಿಂದಲೇ ಅವನ್ನು ಒದಗಿಸುವಂತೆ ಮಾಡುತ್ತೇನೆ."

ಭಾರತ ಸಂವಿಧಾನದ ೪೭ನೆಯ ಪರಿಚ್ಛೇದದಲ್ಲಿ "ಸರ್ಕಾರ ಪ್ರಜೆಗಳ ಆಹಾರದ ಮಟ್ಟವನ್ನೂ ಜೀವನದ ಮಟ್ಟವನ್ನೂ ಏರಿಸಬೇಕು. ಇದು ಅದರ ಆದ್ಯಕರ್ತವ್ಯವೆಂದು ಪರಿಗಣಿಸಬೇಕು. ಆರೋಗ್ಯಕ್ಕೆ ಕೆಡುಕನ್ನುಂಟುಮಾಡುವ ಮಾದಕ ಪದಾರ್ಥಗಳನ್ನೂ ಪಾನೀಯಗಳನ್ನೂ ಔಷಧಕ್ಕೆ ಬಿಟ್ಟು ಬೇರೆ ಯಾವ ವಿಧದಲ್ಲೂ ಉಪಯೋಗಿಸದಂತೆ ಪ್ರತಿಬಂಧಿಸಬೇಕು" ಎಂದು ಹೇಳಿದೆ.

ವಿಲಿಯಂ ಆಸ್ಲರ್ ಎಂಬುವರು ಮದ್ಯಪಾನ ನಿರೋಧಕ್ಕೆ ಈ ರೀತಿ ಸಲಹೆ ನೀಡಿದ್ದಾರೆ. ಬೀರು ಮೊದಲಾದ ಎಲ್ಲ ಮಾದಕ ಪದಾರ್ಥಗಳನ್ನು ಐರಿಷ್ ಕಡಲುಗಾಲವೆಗೂ ಇಂಗ್ಲೀಷ್ ಕಡಲುಗಾಲವೆಗೂ ಉತ್ತರ ಸಮುದ್ರಕ್ಕೂ ಒಂದು ವರ್ಷದ ಕಾಲ ಸುರಿದು ಬಿಟ್ಟರೆ ಇಂಗ್ಲೆಂಡ್ ದೇಶದ ಜನರು ಬಹುಮಟ್ಟಿಗೆ ಸುಧಾರಿಸಿಕೊಳ್ಳುತ್ತಾರೆ. ಧಾರ್ಮಿಕರ ವೈದ್ಯರ ಮತ್ತು ರಾಜಕಾರಿಣಿಗಳ ಎಲ್ಲ ಸಮಸ್ಯೆಗಳೂ ಇದರಿಂದ ಪರಿಹಾರವಾಗುತ್ತವೆ.

ಒಂದು ಸುಭಾಷಿತ ಹೀಗೆ ಹೇಳುತ್ತದೆ :

ದೋಷಾಣಾಂ ಕಾರಣಂ ಮದ್ಯಂ
ಮದ್ಯಂ ಕಾರಣಮಾಪದಾಂ
ಅಜ್ಞಾನ ಕೃದಪಥ್ಯಂಚ
ತಸ್ಮಾದ್ ಮದ್ಯಂ ವಿವರ್ಜಯೇತ್

ದೋಷಗಳಿಗೆ ಕಾರಣ ಮದ್ಯ. ಮದ್ಯ ಆಪತ್ತಿಗೆ ಕಾರಣ. ಇದು ಅಜ್ಞಾನವನ್ನುಂಟು ಮಾಡಿ ಅಪಾರ್ಥಕ್ಕೂ ಕಾರಣವಾಗುತ್ತದೆ. ಆದ್ದರಿಂದ ಮದ್ಯವನ್ನು ಬಿಟ್ಟುಬಿಡಬೇಕು.

ಮನುಷ್ಯ ಮೊದಲು ಮದ್ಯವನ್ನು ತೆಗೆದುಕೊಳ್ಳುತಾನೆ. ಆಮೇಲೆ ಮದ್ಯವೇ ಮದ್ಯವನ್ನು ತೆಗೆದುಕೊಳ್ಳುತ್ತದೆ. ಕೊನೆಗೆ ಮದ್ಯವು ಮನುಷ್ಯನನ್ನು ಆಹುತಿ ತೆಗೆದು ಕೊಳ್ಳುತ್ತದೆ.

ಸಮಾಜ ಸುಧಾರಕರೂ ಸರ್ವೋದಯ ಸಾಧಕರೂ ಮದ್ಯಪಾನ ನಿರೋಧದ ಬಗೆಗೆ ತಿಳುವಳಿಕೆ ನೀಡುತ್ತಲೇ ಬಂದಿದ್ದಾರೆ. ಇದರಿಂದಾಗುವ ದುಷ್ಪರಿಣಾಮಗಳನ್ನು ಸಾರುತ್ತಲೇ ಇದ್ದಾರೆ.

ಸರ್ವಜ್ಞ ಕವಿ ಹೇಳಿರುವ ಮಾತುಗಳು ಈ ಪ್ರಕರಣಕ್ಕೆ ತುಂಬಾ ಸಮಯೋಚಿತ ವಾಗಿವೆ.

ಮದ್ಯಪಾನವ ಮಾಡಿ ಇದ್ದುದೆಲ್ಲವ ನೀಡಿ
ಬಿದ್ದು ಬರುವವನ ಸದ್ದಡಗಿ ಸಂತಾನ
ಮೆದ್ದು ಹೋಗುವದು ಸರ್ವಜ್ಞ

ಆಸೆ

ಆಸೆಯೇ ದುಃಖಕ್ಕೆ ಮೂಲ ಎಂದು ಭಗವಾನ್ ಬುದ್ಧ ಸಾರಿದ್ದಾನೆ. ನಮ್ಮ ಪ್ರಾಚೀನರು ಆಸೆಯನ್ನು ಪಾಶ ಎಂದು ಕರೆದಿದ್ದಾರೆ. ಈ ಆಶಾ ಪಾಶದಿಂದ ಮುಕ್ತ ರಾಗಬೇಕು ಎಂದು ತಿಳಿವಳಿಕೆಯನ್ನು ನೀಡಿದ್ದಾರೆ. ಆಸೆಗೆ ಅಂತ್ಯವಿಲ್ಲ, ಪಾಶಕ್ಕೆ ಕಡೆಯಿಲ್ಲ. ಆಸೆ ಅತಿ ಆಯುಷ್ಯಮಿತಿ ಎಂಬ ನಾಣ್ಣುಡಿಗಳು ಇವೆ. ಜಗತ್ತಿನ ಜೀವ ರಾಶಿಗಳೆಲ್ಲ ಈ ಆಸೆಗೆ ಒಳಗಾಗಿವೆ. ಆಸೆ ಮಾನವ ಸಹಜವಾದುದ್ದು. ಆದರೆ ಈ ಆಸೆ ಯಿಂದ ಅನರ್ಥಗಳು ಸಂಭವಿಸುತ್ತವೆ, ಇದನ್ನು ನಿರೋಧಿಸುವುದು ಕಷ್ಟಕರವಾದುದು.

ಮಾನವನ ಜೀವಿತದ ಉದ್ದೇಶವಾದರೂ ಏನು ? ಜೀವಿತದ ಯಾವುದಾದರೂ ಆಸೆಯನ್ನು ಈಡೇರಿಸಿಕೊಳ್ಳುವುದಕ್ಕಲ್ಲವೆ ? ಹಾಗಾದರೆ ಈ ಆಸೆಯನ್ನು ಪ್ರತಿಬಂಧಿಸ ಬೇಕಾದುದಾದರೂ ಏಕೆ? ಎಂಬ ಸಮಸ್ಯೆ ಎದುರಾಗುತ್ತದೆ. ವಚನಕಾರರು ಆಸೆಯ ಹತ್ತಾರು ಮುಖಗಳನ್ನು ಬಿಡಿಸಿ ತೋರಿಸಿದ್ದಾರೆ. ಅಲ್ಲಮ ಪ್ರಭುದೇವರು :

ಆಸೆಗೆ ಸತ್ತುದು ಕೋಟಿ ಆಮಿಷಕ್ಕೆ ಸತ್ತುದು ಕೋಟಿ
ಹೊನ್ನು ಹೆಣ್ಣು ಮಣ್ಣಿಗೆ ಸತ್ತುದು ಕೋಟಿ | ಗೊಹೇಶ್ವರಾ
ನಿಮಗಾಗಿ ಸತ್ತವರನಾರನೂ ಕಾಣೆ

ಎಂದಿದ್ದಾರೆ. ಲೌಕಿಕದ ಆಸೆಗಾಗಿ ಒವಣೆಪಡುವವರನ್ನು ಕಂಡು ಈ ವಚನವನ್ನು ಹಾಡಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಆಯ್ದಕ್ಕಿ ಮಾರಯ್ಯನೆಂಬ ಶಿವಶರಣನಿದ್ದನು. ಆತನು ಪ್ರತಿನಿತ್ಯ ಅಲ್ಲಲ್ಲಿ ಚೆಲ್ಲಿದ ಅಕ್ಕಿಯನ್ನು ಆಯ್ದು ತಂದು ಅಡಿಗೆ ಮಾಡಿಸಿ ಮೊದಲು ಜಂಗಮಕ್ಕೆ ನೀಡಿ ತರುವಾಯ ತಾನೂ ತನ್ನ ಮಡದಿಯೂ ಉಳಿದುದನ್ನು ಊಟಮಾಡುತ್ತಿದ್ದರು. ಆಯ್ದಕ್ಕಿ ಮಾರಯ್ಯ ಆಯಾ ದಿನಕ್ಕೆ ಬೇಕಾದುದಷ್ಟನ್ನು ಮಾತ್ರ ಆಯ್ದು ತರುತ್ತಿದ್ದನು. ನಾಳೆಗಾಗಿ ಧಾನ್ಯವನ್ನು ಸಂಗ್ರಹಿಸಿ ಇಟ್ಟುಕೊಳ್ಳ ಬೇಕೆಂಬ ಆಸೆ ಆತನಿಗಿರಲಿಲ್ಲ. ಆತನನ್ನು ಪರೀಕ್ಷಿಸಬೇಕೆಂದು ಒಮ್ಮೆ ಬಸವಣ್ಣ ದಾರಿ ಯಲ್ಲಿ ಹೆಚ್ಚು ಅಕ್ಕಿಯನ್ನು ಚೆಲ್ಲಿಸುವನು. ಮಾರಯ್ಯ ಅಂದು ಎಂದಿಗಿಂತ ಹೆಚ್ಚು ಅಕ್ಕಿಯನ್ನು ಆಯ್ದು ತಂದದ್ದನ್ನು ನೋಡಿದ ಆತನ ಹೆಂಡತಿ ಪರಮಶಿವಭಕ್ತೆಯಾದ ಲಕ್ಕವ್ವ ಹೀಗೆ ಹೇಳುವಳು :

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ
ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ

ಆಸೆಯುಳ್ಳವನು ಮತ್ತೊಬ್ಬರನ್ನು ಆಶ್ರಯಿಸಬೇಕು, ಅವರ ಅಧೀನದಲ್ಲಿರಬೇಕು. ಆಸೆಯನ್ನು ಗೆದ್ದವನು ಈಶತ್ವವನ್ನು ಪಡೆಯುವನು. ಉರಿಲಿಂಗಪೆದ್ದಿ ಅವರ ಒಂದು ವಚನ ಇದನ್ನೇ ಸಾರುತ್ತಿದೆ:

ಆಸೆಯುಳ್ಳನ್ನಕ್ಕ ಒಬ್ಬರ ಆಶ್ರಯಿಸುವ
ಆಶ್ರಯದಾಸೆ ಕರಕಷ್ಟ ಕಾಣಿರೋ ಅಯ್ಯ
ಆಸೆಯೇ ದಾಸ ಕಾಣಿರೋ ನಿರಾಶೆಯೇ ಈಶ ಕಾಣಿರಣ್ಣ
ದಾಸತ್ವದ ಈಶತ್ವದ ಅಸುವ ವಿಚಾರಿಸಿ
ಆಸೆಯುಡಗಿದರೆ ಅದೇ ಈಶಪದವು
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ

ಅಂಬಿಗರ ಚೌಡಯ್ಯನೆಂಬ ಶಿವಭಕ್ತ ಇದೇ ಅಭಿಪ್ರಾಯವನ್ನು ಪುಷ್ಟೀಕರಿಸಿ ದ್ದಾನೆ. :

ಆಸೆಯುಳ್ಳಾತ ಒಬ್ಬರ ಅಧೀನದಲ್ಲಿಪ್ಪನು
ಆಸೆಯ ಮನದ ಕೊನೆಯನರಿದಾತ
ಕೈಲಾಸದಾಚೆಯಲ್ಲಿಪ್ಪನೆಂದಾತ ಅಂಬಿಗರ ಚೌಡಯ್ಯ

ಆಸೆಗೆ ಒಳಗಾದವನು ಮತ್ತೊಬ್ಬರನ್ನು ಆಶ್ರಯಿಸಬೇಕು ಅನುಸರಿಸಬೇಕು ಎಂದು ಮೇಲಿನ ವಚನಗಳು ಸಾರುತ್ತಿವೆ. ಆಸೆ ಲೌಕಿಕ ಭೋಗ ಭಾಗ್ಯಗಳನ್ನು ಮಾತ್ರ ತಂದು ಕೊಡಬಲ್ಲದು. ಮಾನವ ಈ ಆಸೆಯನ್ನು ಗೆದ್ದು ಲೌಕಿಕದಿಂದ ಪಾರಮಾರ್ಥಿಕದ ಕಡೆ ಹರಿಯಬಿಟ್ಟರೆ ಅದರಿಂದ ಇಹಪರಗಳೆರಡಲ್ಲೂ ಸದ್ಗತಿ ಪ್ರಾಪ್ತಿಯಾಗುತ್ತದೆ. ವಚನಕಾರರು ಆಸೆಯನ್ನು ವ್ಯಾಖ್ಯಾನಿಸಿರುವುದು ಈ ಅರ್ಥದಲ್ಲೇ.

ಆಸೆಗೆ ಒಳಗಾಗಿ ಅನರ್ಥಗಳನ್ನು ಅನುಭವಿಸಿದ ಹಲವಾರು ವ್ಯಕ್ತಿಗಳನ್ನು ನಾವು ಪ್ರಾಚೀನ ಸಾಹಿತ್ಯದಲ್ಲಿ ಕಂಡುಕೊಂಡಿದ್ದೇವೆ.

ಲೋಕದಲ್ಲಿ ಹಲವಾರು ಪ್ರಕಾರದ ಆಸೆಬುರುಕ ವ್ಯಕ್ತಿಗಳಿದ್ದಾರೆ. ತಮಗೆ ಶಕ್ಯವಲ್ಲದ ತಾವು ಅರ್ಹರಲ್ಲದ ಆಸೆಗಳಿಗೆ ಅವರು ಪ್ರಯತ್ನಿಸಿ ಅನೇಕ ಕಷ್ಟ ನಷ್ಟಗಳಿಗೆ ಗುರಿಯಾಗಿದ್ದಾರೆ. ಆದ್ದರಿಂದ ಮನುಷ್ಯ ಆಸೆಯನ್ನು ಸಂಪೂರ್ಣವಾಗಿ ಬಿಟ್ಟರಲು ಸಾಧ್ಯವಿಲ್ಲ. ಆದರೆ ದುರಾಶೆಯನ್ನೂ ಅತಿಯಾಶೆಯನ್ನೂ ಬಿಟ್ಟರೆ ಸುರಕ್ಷಿತವಾಗಿರುವುದು ಸಾಧ್ಯ. ಸರ್ವಜ್ಞ ಕವಿ ಆಸೆಯ ಬಗೆಗೆ ಹೇಳಿರುವುದು ತುಂಬಾ ಮಾರ್ಮಿಕವಾಗಿದೆ :

ಆಸೆಯೆಲ್ಲವ ಬಿಟ್ಟು ರಾಶಿ ಕರ್ಮವ ಸುಟ್ಟು
ದೋಷವ ಕಳೆದು ನಿಂದವನು ಆವಗಂ
ಲೇಸಾಗಿ ಇರುವ ಸರ್ವಜ್ಞ

ಆಸೆಯತಿ ಕೇಡೆಂದು ಹೇಸಿ ನಾಚುತಲಿಕ್ಕು
ಆಸೆಯ ಬಿಡದೆ ಅಭಿಮಾನಕೆ ಹೋರಿದರೆ
ಘಾಸಿಯಾಗಿಕ್ಕು ಸರ್ವಜ್ಞ

ಆಸೆ ರೋಷವ ಬಿಟ್ಟು ಈಶಧ್ಯಾನದೊಳಿರಲು
ಮೋಸವ ಮಾಡಿ ಪತಿ ಬಂದು ಪಿಡಿದರೆ
ಹೇಸಿ ತೊಲಗುವದು ಸರ್ವಜ್ಞ

ಕೆಟ್ಟ ಆಸೆಯನ್ನು ಬಿಡಬೇಕು. ಮನಸ್ಸನ್ನು ದೇವರತ್ತ ನಿಲಿಸಬೇಕು ಎಂಬುದನ್ನು ಬಸವಣ್ಣನವರ ಈ ವಚನ ಸಾರುತ್ತಿದೆ :

ಎಲೆ ಎಲೆ ಮಾನವಾ ಅಳಿಯಾಸೆ ಬೇಡವೋ
ಕಾಳು ಬೆಳುದಿಂಗಳ ಸಿರಿ ಸ್ಥಿರವಲ್ಲ
ಕೇಡಿಲ್ಲದ ಪದವಿ ಕೂಡಲ ಸಂಗಮದೇವನ ಮರೆಯದೆ ಪೂಜಿಸೊ

ಅಲ್ಲಮಪ್ರಭುದೇವರು ಆಸೆಯನ್ನು ಮಾಯೆಗೆ ಹೋಲಿಸಿದ್ದಾರೆ :

ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ

ಕೆಟ್ಟ ಆಸೆಯನ್ನು ಬಿಡುವಂತೆ ದುರಾಶೆಯನ್ನು ಬಿಡಬೇಕು. ಅಕ್ಕಮಹಾದೇವಿಯ ಒಂದು ವಚನ ಹೀಗಿದೆ :

ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
ತನ್ನ ನೂಲು ತನ್ನನೆ ಸುತ್ತಿ ಸಾವಂತೆ
ಮನಬಂದುದನು ಬಯಸಿ ಬೇವುತ್ತಿದ್ದೇನಯ್ಯಾ
ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋರಾ ಚನ್ನಮಲ್ಲಿಕಾರ್ಜುನಾ

ಎಚ್. ಎಸ್. ಹರಿಶಂಕರ್

ಏಕಕಾಲಿಕ ಭಾಷಾಂತರ

ಏಕಕಾಲಿಕ ಭಾಷಾಂತರ ಮತ್ತು ಅದರ ಇತಿಹಾಸ

ಆರನೆಯ ಕಮ್ಯೂನಿಸ್ಟ್ ಅಂತರರಾಷ್ಟ್ರೀಯ ಕಾಂಗ್ರೆಸ್‌ನ (1928ರಲ್ಲಿ, ಸೋವಿಯತ್ ಒಕ್ಕೂಟದಲ್ಲಿ) ಸಭೆಯಲ್ಲಿ ಮೊದಲಿಗೆ ಏಕಕಾಲಿಕ ಭಾಷಾಂತರ ವ್ಯವಸ್ಥೆಯನ್ನು ಒದಗಿಸಲಾಗಿತ್ತೆಂದು ಗೋಫ್‌ಮನ್ ಅಭಿಪ್ರಾಯಪಡುತ್ತಾರೆ.[1] ಹಾಗೆಯೇ ಲಾಂಗ್‌ಲಿ ಎನ್ನುವರು "ಇಂದು........ನಮ್ಮ ಪಶ್ಚಿಮ ರಾಷ್ಟ್ರಗಳಲ್ಲಿರುವಂತೆಯೆ ರಷ್ಯನ್ ದುಭಾಷಿಗಳೂ ಕೂಡ ಅತ್ಯಂತ ಸಮರ್ಥರಾಗಿದ್ದಾರೆ. ವಿಶ್ವಸಂಸ್ಥೆಯ ರಷ್ಯನ್ ವಿಭಾಗಕ್ಕೆ ದುಭಾಷಿಗಳನ್ನು ತರಪೇತಿ ನೀಡುವ ಸಲುವಾಗಿ ಮಾಸ್ಕೊದಲ್ಲಿ ಒಂದು ಶಿಕ್ಷಣ ಸಂಸ್ಥೆಯೂ ಇದೆ"[2] ಎಂದು ಹೇಳುತ್ತಾರೆ.

ಇಂದಿನ ವಿಶ್ವದಲ್ಲಿ ಯಾವುದೇ ಒಂದು ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಾಗಲಿ ಇಲ್ಲವೆ ಭೇಟಿಯ ಕಾಲದಲ್ಲಾಗಲಿ ಏಕಕಾಲಿಕ ಭಾಷಾಂತರವಿಲ್ಲದೆ ಕಾರ್ಯಸಾಗುವಂತಿಲ್ಲ. ವಿಶೇಷವಾಗಿ ನಿರ್ಮಿತವಾದ ಶಬ್ದನಿರೋಧಿ ಕೋಣೆಯಲ್ಲಿ ದುಭಾಷಿ ಅಥವಾ ಏಕಕಾಲದಲ್ಲಿ ಭಾಷಾಂತರ ಕಾರ್ಯ ನಿರ್ವಹಿಸಬಲ್ಲ ಭಾಷಾಂತರಕಾರ ಕುಳಿತಿರುತ್ತಾನೆ. ಭಾಷಣಕಾರರ ಭಾಷಣವನ್ನು ಕಿವಿಗೆ ಹಾಕಿಕೊಂಡಿರುವ ನಿಸ್ತಂತುವಿನ ಮೂಲಕ (ಕರ್ಣವಾಣಿ) ಈತ ಕೇಳುತ್ತಾನೆ ಹಾಗೂ ತಕ್ಷಣವೇ ಮೈಕ್ರೊಫೋನ್ ಮೂಲಕ ಬೇರೊಂದು ಭಾಷೆಯಲ್ಲಿ, ಅಂದರೆ ಉದ್ದಿಷ್ಟ ಭಾಷೆಯಲ್ಲಿ, ಅನುವಾದಿಸುತ್ತಾನೆ. ಇಂತಹ ಕೋಣೆಗಳು ಆಯಾ ಸಮ್ಮೇಳನ ಅಥವಾ ಗೋಷ್ಠಿಗಳ ಅಗತ್ಯಗಳಿಗನುಗುಣವಾಗಿ ರೂಪಿತಗೊಳ್ಳುತ್ತವೆ. ಒಂದೊಂದು ವೇಳೆ ಇಂಥ ಸೌಕರ್ಯಗಳಿಲ್ಲದೆಯೆ ಎಷ್ಟೋ ಬಾರಿ ದುಭಾಷಿ ಅಥವಾ ಏಕಕಾಲಿಕ ಭಾಷಾಂತರಕಾರ ನಿಯೋಗದ ಮುಂದಾಗಲೀ ಇಲ್ಲವೆ ಸಭೆ, ಗೋಷ್ಠಿಗಳ ಮುಂದಾಗಲಿ ನಿಂತು ಈ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ಬಳಸುವ ಸಾಧನಗಳು ಅತ್ಯಂತ ಸೂಕ್ಷ್ಮತರದ್ದಾಗಿರಬೇಕು ಹಾಗೂ ತಾಂತ್ರಿಕ ಪರಿಪೂರ್ಣತೆಯಿಂದ ಕೂಡಿರಬೇಕು. ಹಲವಾರು ಸಂದರ್ಭಗಳಲ್ಲಿ ಏಕಕಾಲಿಕ ಭಾಷಾಂತರವನ್ನು ಕೇಳುವಾಗ ಆಯಾ ಸಂದರ್ಭಗಳಿಗನುಗುಣವಾಗಿ ಮೂರು ನಾಲ್ಕು ಭಾಷೆಗಳನ್ನು

ಬಳಸುವುದುಂಟು. ಇಂಥ ಸಂದರ್ಭದಲ್ಲಿ ಸಭೆ ಅಥವಾ ಗೋಷ್ಠಿಗಳಲ್ಲಿ ಭಾಗವಹಿಸುವವರು ತಮಗೆ ಆಗತ್ಯವಾದ ಭಾಷೆಯನ್ನು ಕೇಳುವ ಸಲುವಾಗಿ ಸೂಚಿಸಲಾಗಿರುವ ಗುಂಡಿಯನ್ನು ಒತ್ತಿದಾಗ ಆ ಭಾಷೆಯಲ್ಲಿ ದುಭಾಷಿಯ ಅಥವಾ ಏಕಕಾಲಿಕ ಭಾಷಾಂತರಕಾರನ ಮಾತುಗಳನ್ನು ಕೇಳಬಹುದು.

ಉದಾಹರಣೆಗೆ ನ್ಯೂಯಾರ್ಕ್ ಮತ್ತು ಜಿನಿವಾಗಳಲ್ಲಿರುವ ವಿಶ್ವಸಂಸ್ಥೆಯ ಸಭಾಂಗಣದಲ್ಲಿ ಪ್ರತಿನಿಧಿಗಳು ಕುಳಿತುಕೊಂಡು ಭಾಷಣವನ್ನು ಐದಾರು ಭಾಷೆಗಳಲ್ಲಿ ಕೇಳಬಹುದು. ಇನ್ನು ಕೆಲವು ಸಭಾಂಗಣದಲ್ಲಿ ಎಂಟರಿಂದ ಹದಿಮೂರು ಭಾಷೆಗಳವರೆಗೆ ಏಕಕಾಲದಲ್ಲಿ ಭಾಷಣಗಳನ್ನು ಕೇಳಬಹುದು. ಮಾಸ್ಕೋದಲ್ಲಿನ ಕ್ರೆಮ್ಲಿನ್ ಕಾಂಗ್ರೆಸ್ ಭವನದಲ್ಲಿ (ಪ್ಯಾಲೇಸ್ ಆಫ್ ಕಾಂಗ್ರೆಸ್) 29 ಭಾಷೆಗಳಲ್ಲಿ ಏಕಕಾಲದಲ್ಲಿ ಭಾಷಾಂತರ ಕಾರ್ಯವನ್ನು ನಿರ್ವಹಿಸುವ ವ್ಯವಸ್ಥೆಯಿದೆ. ಇತ್ತೀಚಿನ ವರ್ಷಗಳಲ್ಲಿ ಏಕಕಾಲಿಕ ಭಾಷಾಂತರ ವ್ಯಾಪಕವಾಗಿ ಹರಡಲು ಸಾಧ್ಯವಾದದ್ದು ರೇಡಿಯೋ ಮತ್ತಿತರ ತಾಂತ್ರಿಕ ಉಪಕರಣಗಳಿಂದ. ರೇಡಿಯೋ ಅಲೆಗಳ ಮೂಲಕ ಭಾಷಣವನ್ನಾಗಲೀ ಅಥವಾ ಇನ್ನಾವ ಕಾರ್ಯಕ್ರಮವನ್ನಾಗಲೀ ಪ್ರಸಾರಮಾಡುತ್ತಿರುವಾಗಲೇ, ಪ್ರತಿನಿಧಿಗಳಾಗಲಿ ಅಥವಾ ಶ್ರೋತೃಗಳಾಗಲೀ ಸಭಾಂಗಣದಲ್ಲಿ ಕುಳಿತು ತಮ್ಮ ಕಿವಿಗೆ ಕರ್ಣವಾಣಿ (ಇಯರ್‌ಫೋನ್) ತಗುಲಿಸಿಕೊಂಡು ತಮಗಿಷ್ಟವಾದಂಥ ಭಾಷೆಯಲ್ಲಿ ಆ ಭಾಷಣವನ್ನಾಗಲೀ ಅಥವಾ ಕಾರ್ಯಕ್ರಮವನ್ನಾಗಲೀ ಕೇಳುವುದು ಸಾಧ್ಯ. ಏಕಕಾಲಿಕ ಭಾಷಾಂತರಕಾರ ಇಲ್ಲವೆ ದುಭಾಷಿಯು ಮೂಲ ಭಾಷಣಕಾರ ಹಾಗೂ ಸಭಿಕರ ನಡುವೆ ಸೇತುವಾಗಿ ಪರಿಣಮಿಸುತ್ತಾನೆ. ಏಕಕಾಲಿಕ ಭಾಷಾಂತರಕಾರ ಇಲ್ಲವೆ ದುಭಾಷಿ ತನ್ನ ಕೋಣೆಯಲ್ಲಿ ಕುಳಿತುಕೊಂಡೇ ಟೆಲಿವಿಷನ್ ಪರದೆಯ ಮೇಲೆ ಭಾಷಣಕಾರನ ಭಾಷಣ ಕೇಳುತ್ತ ಹಾಗೆಯೇ ಆ ಭಾಷಣವನ್ನು ಭಾಷಾಂತರಿಸುತ್ತ ಹೋಗುತ್ತಾನೆ. ದುಭಾಷಿಯನ್ನು ಗಮನಿಸದಿದ್ದಾಗಲೇ ಆತನ ಭಾಷಾಂತರ ಯಶಸ್ವಿಯಾಗುವುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅದೇನೇ ಇರಲಿ ಈತ ತನ್ನ 'ವ್ಯಕ್ತಿಪ್ರಜ್ಞೆ'ಯನ್ನು ಬದಿಗಿಟ್ಟು ಭಾಷಾಂತರ ಕಾರ್ಯ ಕೈಗೊಂಡಾಗಲೇ ಆತನ ಭಾಷಾಂತರ ನಿಸ್ಪಷ್ಟತೆ ಪಡೆಯುತ್ತದೆ. ಅವನತ್ತ ದೃಷ್ಟಿಹರಿಸದಿದ್ದಾಗಲೇ ಆತನ ಮಾತು (ಭಾಷಾಂತರ) ಶಾಂತವಾಗಿ ಹರಿದು ಬರುತ್ತದೆ.

ಸಭೆ ಸಮ್ಮೇಳನಗಳ ವ್ಯವಸ್ಥಾಪಕರ ದೃಷ್ಟಿಯಿಂದ ಏಕಕಾಲಿಕ ಭಾಷಾಂತರ ವೇಳೆಯ ದುರುಪಯೋಗವನ್ನು ತಡೆಗಟ್ಟುತ್ತದೆ. 1919ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಸಮ್ಮೇಳನದಲ್ಲಿ ಈ ಏಕಕಾಲಿಕ ಭಾಷಾಂತರದ ಉಗಮವಾಯಿತೆನ್ನಬಹುದು. ವಾನ್‌ಹೂಪ್ ಅವರು 1962ರಲ್ಲಿ ಪ್ರಕಟಿಸಿದ 'Theorie et pratique de l'inter*Pretation*' ಎಂಬ ಪುಸ್ತಕದಲ್ಲಿ 'ಈ ಏಕಕಾಲಿಕ ಭಾಷಾಂತರ 19ನೆಯ ಶತಮಾನದ ಆರಂಭದಿಂದಲೇ ಬಳಕೆಗೆ ಬರತೊಡಗಿತು' ಎಂದು ಬರೆಯುತ್ತಾರೆ.[3] "ಅಧ್ಯಕ್ಷ ವಿಲ್ಸನ್ ಮತ್ತು ಲಾಯ್ಡ್ ಜಾರ್ಜರು ಭಾಷಾ ತಜ್ಞರಾಗಿರಲಿಲ್ಲ.

ಹಾಗಾಗಿ ಅವರು ತಮ್ಮ ಮಾತೃಭಾಷೆಯಲ್ಲೇ (ಇಂಗ್ಲಿಷ್) ಮಾತನಾಡುತ್ತಿದ್ದರು. ದುಭಾಷಿಗಳು ಅವರ ಹೇಳಿಕೆಗಳನ್ನು ಇತರ ಭಾಷೆಗಳಿಗೆ ಅನುವಾದಿಸುತ್ತಿದ್ದರು. ಬಹು ಜನರು ತಿಳಿದಿರುವಂತೆ ಇದೇನೂ ಸುಲಭವಾದ ಕಾರ್ಯವೇನಲ್ಲ. ಸಮರ್ಥ ಭಾಷಾಂತರಕಾರನೂ ಭಾಷಣದ ಎಲ್ಲ ಅಂಶಗಳನ್ನು ಬಿಡದೆ ಒಂದೇ ಕಾಲದಲ್ಲಿ ಹೇಳುವುದು ಕಷ್ಟವಾಗುತ್ತದೆ."

ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಸಮ್ಮೇಳನದಲ್ಲಿ ಭಾಗವಹಿಸಿದ್ದ ಸಮರ್ಥ ದುಭಾಷಿಗಳಲ್ಲಿ ಕೆಲವರನ್ನು ಹೆಸರಿಸಬಹುದು. ಈ ದುಭಾಷಿಗಳ ನಾಯಕತ್ವವನ್ನು ಲಂಡನ್ ವಿಶ್ವವಿದ್ಯಾನಿಲಯದ ಇತಿಹಾಸಜ್ಞ ಮತ್ತು ಪ್ರಾಧ್ಯಾಪಕರಾಗಿದ್ದ ಪಾಲ್‌ಮಂಟೂ ಅವರು ವಹಿಸಿದ್ದರು. ಅನಂತರ ಲೀಗ್ ಆಫ್ ನೇಷನ್ಸ್ ಸಭೆಯಲ್ಲಿ ಈ ಮುಂದೆ ಹೆಸರಿಸಿರುವ ದುಭಾಷಿಗಳು ಭಾಗವಹಿಸಿದ್ದರು: ಲ್ಯಾಂಟನ್, ಬೆಲ್‌ಮನ್, ಜಾನ್‌ಎರ್ಬೆರ್, ರೋಬರ್ಟ್ ಕಾನ್‌ಫಿನೊ, ಬ್ರದರ್ ಆಂಡ್ರೇ, ಜಾರ್ಜ್ ಕಮಿನ್‌ಕೆರ್ ಮತ್ತು ಜಾರ್ಜ್ ಮಾಚ್ಯೆ (ಫ್ರೆಂಚ್‌ಭಾಷೆ), ಎವಾನ್ ಮತ್ತು ಲಾಯ್ಡ್ (ಇಂಗ್ಲಿಷ್‌ಭಾಷೆ). ಭಾಷಣಕಾರರು ಮಾತನಾಡುತ್ತಿದ್ದಂತೆಯೇ ಇವರೂ ಏಕಕಾಲದಲ್ಲೇ ಉದ್ದಿಷ್ಟ ಭಾಷೆಯಲ್ಲಿ ಭಾಷಣವನ್ನು ತರ್ಜುಮೆ ಮಾಡುತ್ತಿದ್ದರು. ಉದಾಹರಣೆಗೆ ಫ್ರಾನ್ಸ್‌ದೇಶದ ರಾಯಭಾರಿ ಅಂಪ್ರೇಯ್ ಫ್ರಾನ್ಸ್ವಾ ಪೋನ್ಸೆ ಮಾಡಿದ ಎರಡೂವರೆ ತಾಸಿನ ಭಾಷಣವನ್ನು ಅಷ್ಟೇ ನಿರರ್ಗಳವಾಗಿ ಎಡ್ಮಂಡ್ ಕರಿ ಅನುವಾದಿಸಿದ.

ಈ ಪ್ರಕಾರ ಹೆಚ್ಚಾಗಿ ಬೆಳೆಯಲಾರಂಭಿಸಿದ್ದು ಎರಡು ಮಹಾಯುದ್ಧಗಳ ಅವಧಿಯಲ್ಲಿ ಎಂದು ಹೇಳಬೇಕು. ಅನೇಕ ರಾಷ್ಟ್ರಗಳ ರಾಯಭಾರಿಗಳು ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳನ್ನು ಲೀಗ್ ಆಫ್‌ನೇಷನ್ಸ್ ಸಭೆಯಲ್ಲಿ ವಿಶೇಷವಾಗಿ ಬಳಸಲಾರಂಭಿಸಿದರು. ಮಹಾಯುದ್ಧದ ತರುವಾಯ ವಿಶ್ವಸಂಸ್ಥೆಯ ಜನನವಾದ ಮೇಲೆ ಐದು ಭಾಷೆಗಳನ್ನು ಅಧಿಕೃತ ಭಾಷೆಗಳೆಂದು ಮಾನ್ಯ ಮಾಡಲಾಯಿತು. ಆದರೆ ಕೆಲಕಾಲ ಕಳೆದ ಮೇಲೆ ಮತ್ತೆ ನಾಲ್ಕು ಭಾಷೆಗಳನ್ನು ಅಧಿಕವಾಗಿ ಈ ಪಟ್ಟಿಗೆ ಸೇರಿಸಲಾಯಿತು. ಹಾಗಾಗಿ 1950ರಿಂದ ಏಕಕಾಲಿಕ ಭಾಷಾಂತರ ವಿಶ್ವಸಂಸ್ಥೆಯಲ್ಲಿ ಪ್ರಧಾನ ಅಂಗವಾಗಿ ಬಳಕೆಗೆ ಬಂದಿತು. ಇದಕ್ಕೆ ಬೇಕಾದ ಉಪಕರಣಗಳನ್ನು ಅಲ್ಲಿ ಒದಗಿಸಲಾಯಿತು.

1935ರಷ್ಟು ಹಿಂದೆಯೇ ಅಮೆರಿಕನ್ ಉದ್ಯೋಗ ಸಂಸ್ಥೆ ಐ.ಬಿ.ಎಂ.(International Business Machines) ಎಡ್ವರ್ಡ್ ಫಿಲೆನ್ ಎಂಬುವನಿಂದ ಆರಂಭವಾಯಿತು. ಈ ಹಿಂದೆಯೇ ತಿಳಿಸಿದಂತೆ 1928ರಲ್ಲಿ ಸೋವಿಯತ್ ಒಕ್ಕೂಟದಲ್ಲಿ ನಡೆದ ಆರನೆಯ ಅಧಿವೇಶನದಲ್ಲಿ ಏಕಕಾಲಿಕ ಭಾಷಾಂತರವನ್ನು ಪ್ರಾಯೋಗಿಕವಾಗಿ ಕೈಗೊಳ್ಳಲಾಯಿತು. ಇದೇ ವರ್ಷದ 'ಕ್ರಾಸ್ನಯ ನೀವಾ' ಎಂಬ ನಿಯತಕಾಲಿಕದಲ್ಲಿ ದುಂಡುಮೇಜಿನ ಸುತ್ತಲೂ ಕುಳಿತಿರುವ ಭಾಷಾಂತರಕಾರರ ಚಿತ್ರವನ್ನು ನೋಡಬಹುದು. ಅವರ ಎದುರಿಗೆ ಮೈಕ್ರೋಫೋನ್ ಮೊದಲಾದ ಸಲಕರಣೆಗಳಿರುವುದನ್ನು ನೋಡಬಹುದು. ಅವರ ದೂರವಾಣಿಗಳಿರಲಿಲ್ಲ. ಮುಂದೆ 1933ರಲ್ಲಿ ಹದಿಮೂರನೆಯ ಅಧಿ

ವೇಶನದ ವೇಳೆಗಾಗಲೇ ದೂರವಾಣಿ ಲಭ್ಯಗಳನ್ನೂ ಒದಗಿಸಲಾಗಿತ್ತು. 1935ರಲ್ಲಿ ಲೆನಿನ್‌ಗ್ರಾಡ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಅಧಿವೇಶನದಲ್ಲಿ ಏಕಕಾಲಿಕ ಭಾಷಾಂತರಕ್ಕೆ ಸಕಲ ಸೌಲಭ್ಯಗಳನ್ನು ಒದಗಿಸಿಕೊಡಲಾಗಿತ್ತು. ಇದು 15ನೆಯ ಅಂತರ ರಾಷ್ಟ್ರೀಯ ಶರೀರ ವಿಜ್ಞಾನದ ಸಮ್ಮೇಳನವಾಗಿತ್ತು. ಪ್ರಸಿದ್ಧ ವಿಜ್ಞಾನಿ ಮತ್ತು ಅಕೆಡೆಮಿಶಿಯನ್ ಇ. ಪಿ ಪಾವ್ಲೊವನ ಭಾಷಣವನ್ನು ಏಕಕಾಲದಲ್ಲಿ ಫ್ರೆಂಚ್, ಇಂಗ್ಲಿಷ್ ಮತ್ತು ಜರ್ಮನ್ ಭಾಷೆಗಳಲ್ಲಿ ಅನುವಾದಿಸಲಾಯಿತು. 1939ರಲ್ಲಿ ಬೆಲ್ಜಿಯಂನ ಸಂಸತ್ತಿನಲ್ಲಿ ಎರಡು ಭಾಷೆಗಳಲ್ಲಿ ಏಕಕಾಲಿಕ ಭಾಷಾಂತರವನ್ನು ಕೈಗೊಳ್ಳಲಾಯಿತು. ಇಷ್ಟಾದರೂ ಎರಡನೆಯ ಮಹಾಯುದ್ಧ ಮುಗಿಯುವವರೆಗೂ ಏಕಕಾಲಿಕ ಭಾಷಾಂತರ ವೃತ್ತಿಪರ ಹವ್ಯಾಸವಾಗಿ ಬೆಳೆದಿರಲಿಲ್ಲ.

ನ್ಯೂರೆನ್‌ಬರ್ಗನಲ್ಲಿ ರಷ್ಯನ್ನರ ಮತ್ತು ಅಮೆರಿಕನ್ನರ ಎರಡು ಭಾಷಾಂತರ ಕಾರರ ತಂಡಗಳಿದ್ದವೆಂದು ಇ. ಎ. ಗೋಫ್‌ಮನ್ ಉಲ್ಲೇಖಿಸುತ್ತಾನೆ. ಏಕಕಾಲಿಕ ಭಾಷಾಂತರಕಾರರ ನೇತೃತ್ವವನ್ನು ಅಮೆರಿಕನ್ ದಂಡಾಧಿಪತಿ ಲಿಯೋನ್ ದಸ್ತೆರ್ಟ್‌ನು ವಹಿಸಿದನು. ಆತನು ಈ ಮುಂಚೆ ಐ. ಬಿ. ಎಂ. ಸಂಸ್ಥೆಯಲ್ಲಿ ಕೆಲಸಕ್ಕಿದ್ದನು. ಮುಂದೆ ಈತನ ಹೆಸರು ಜಾರ್ಜ್‌ಟೌನಿನ ವಿಶ್ವವಿದ್ಯಾನಿಲಯದಲ್ಲಿನ ಯಂತ್ರಾನುವಾದ ವಿಭಾಗ ದಲ್ಲಿ ಪ್ರಮುಖವಾಗಿ ಕೇಳಿಬಂತು. 1946ರಲ್ಲಿ ಈತನು ವಿಶ್ವಸಂಸ್ಥೆಯಲ್ಲಿ ಏಕಕಾಲಿಕ ಭಾಷಾಂತರದ ವ್ಯವಸ್ಥೆಯನ್ನು ಕೈಗೊಂಡನು. 1947ರಲ್ಲಿ ವಿಶ್ವಸಂಸ್ಥೆಯಲ್ಲಿ ಏಕ ಕಾಲಿಕ ಭಾಷಾಂತರ ವ್ಯವಸ್ಥೆಗೆ ಸಂಬಂಧಿಸಿದಂತೆ ಯಾಂತ್ರಿಕ ಉಪಕರಣಗಳನ್ನು ಜೋಡಿಸಲಾಯಿತು. 1948 ಮತ್ತು 1951ರ ನಡುವಣ ವರ್ಷಗಳಲ್ಲಿ ಏಕಕಾಲಿಕ ಭಾಷಾಂತರವಾದಿಗಳ ಮತ್ತು ಸಾಮಾನ್ಯ ಭಾಷಾಂತರಕಾರರ ವಾದಿಗಳ ನಡುವೆ ಕೋಲಾಹಲವೇ ಜರುಗಿತು. ಆದರೆ ಅಂತಿಮವಾಗಿ ಏಕಕಾಲಿಕ ಭಾಷಾಂತರಕಾರರಿಗೇ ಜಯ ಲಭಿಸಿತು. ಇದರಿಂದ ಕಾಲಹರಣ ತಪ್ಪಿತು. ಜೊತೆಗೆ ಆ ಕೂಡಲೇ ಸದಸ್ಯರಿಗೆ ಬೇಕಾದ ಮಾಹಿತಿಗಳು ಲಭ್ಯವಾಗತೊಡಗಿದವು.

ಈ ಮೊದಲು ಬೃಹತ್ ಪ್ರಮಾಣದಲ್ಲಿ ಅಂತರ ರಾಷ್ಟ್ರೀಯ ಸಭೆ ಸಮ್ಮೇಳನಗಳು ನಡೆದಿರಲಿಲ್ಲವಾದ್ದರಿಂದ ಏಕಕಾಲಿಕ ಭಾಷಾಂತರದ ಅಗತ್ಯತೆಗಳು ಕಂಡು ಬಂದಿರಲಿಲ್ಲ. 1974 ರ ಫೆಬ್ರುವರಿ 20ರ ಸಂಚಿಕೆಯಲ್ಲಿ ರಷ್ಯಾದ 'ಪ್ರಾವ್ಡಾ' ಪತ್ರಿಕೆ ಹೀಗೆ ಬರೆದಿದೆ. "ಇಪ್ಪತ್ತನೆಯ ಶತಮಾನವನ್ನು 'ಸಮ್ಮೇಳನಗಳ ಯುಗ' ವೆಂದು ಹೆಸರಿಸಬಹುದು: 1829 ರಿಂದ 1930ರ ಅವಧಿಯಲ್ಲಿ 1000 ದಿಂದ 3000ದವರೆಗೆ ಅಂತರರಾಷ್ಟ್ರೀಯ ಸಮ್ಮೇಳನಗಳು ಮತ್ತು ಭೇಟಿಗಳು ನಡೆದವು. 1930ರಿಂದ 1940ರ ಅವಧಿಯಲ್ಲಿ ಸುಮಾರು 4000, 1940 ರಿಂದ 1950ರ ಅವಧಿಯಲ್ಲಿ ಸುಮಾರು 6000 ದಿಂದ 10,000, 1950 ರಿಂದ 1960ರ ಅವಧಿಯಲ್ಲಿ ಸುಮಾರು 14,000 ಇಂತಹ ಸಮ್ಮೇಳನಗಳು, ಭೇಟಿಗಳು ನಡೆದವು".

ಈ ಅವಧಿಗಳಲ್ಲಿ ಬಳಸಲಾದ ಭಾಷೆಗಳೆಂದರೆ; ಇಂಗ್ಲಿಷ್, ಫ್ರೆಂಚ್, ರಷ್ಯನ್, ಜರ್ಮನ್, ಸ್ಪ್ಯಾನಿಷ್, ಚೀನೀ, ಅರ‍್ಯಾಬಿಕ್ ಮತ್ತು ಇತರ ಭಾಷೆಗಳು.

ಸೋವಿಯತ್ ಒಕ್ಕೂಟದಲ್ಲಿ ಏಕಕಾಲಿಕ ಭಾಷಾಂತರಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿದೆ ಎಂದು ಹೇಳಲಾಗಿದೆ. ನೂರೆನ್‌ಬರ್ಗ್ ಮತ್ತು ಟೋಕಿಯೋಗಳಲ್ಲಿ ಭಾಗವಹಿಸಿದ್ದ ಸೋವಿಯತ್ ಏಕಕಾಲಿಕ ಭಾಷಾಂತರಕಾರರು ಆನಂತರ ಮಾಸ್ಕೊದ 'ಹೌಸ್ ಆಫ್ ಸೋವಿಯಟ್ಸ್'ನಲ್ಲಿ 1952ರಲ್ಲಿ ನಡೆದ ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಏಕಕಾಲಿಕ ಭಾಷಾಂತರವನ್ನು ಮೂರು ದೊಡ್ಡ ಸಭಾಭವನದಲ್ಲಿ ಏರ್ಪಡಿಸಲಾಗಿತ್ತು. ಸುಮಾರು 50 ಮಂದಿ ಏಕಕಾಲಿಕ ಭಾಷಾಂತರ ಕಾರರಿದ್ದರು. ರಷ್ಯನ್, ಇಂಗ್ಲಿಷ್, ಫ್ರೆಂಚ್, ಜರ್ಮನ್, ಸ್ಪಾನಿಷ್ ಮತ್ತು ಚೀನೀ ಭಾಷೆಗಳಲ್ಲಿ ಏಕಕಾಲಿಕ ಭಾಷಾಂತರ ವ್ಯವಸ್ಥೆ ಮಾಡಲಾಗಿತ್ತು.

ಏಕಕಾಲಿಕ ಭಾಷಾಂತರದ ಮುಂದಿನ ಪ್ರಮುಖ ಘಟ್ಟವನ್ನು 1957 ರಲ್ಲಿ ಮಾಸ್ಕೊದಲ್ಲಿ ನಡೆದ ಯುವಕ ಸಮ್ಮೇಳನದಲ್ಲಿ ಗುರುತಿಸಬಹುದಾಗಿದೆ. ಕೇವಲ ವಿದ್ಯಾರ್ಥಿಗಳ ಕಾರ್ಯಕ್ರಮವೊಂದರಲ್ಲೇ ಸುಮಾರು 80 ಮಂದಿ ಏಕಕಾಲಿಕ ಭಾಷಾಂತರಕಾರರು ಬಿಡುವಿಲ್ಲದೆ ಭಾಷಾಂತರ ಕಾರ್ಯದಲ್ಲಿ ತೊಡಗಿದ್ದರು. ಇತರ ಕಾರ್ಯಕ್ರಮಗಳ ಬಗ್ಗೆ ಇನ್ನು ಹೇಳುವಂತೆಯೇ ಇಲ್ಲ. ಏಕಕಾಲಿಕ ಭಾಷಾಂತರಕ್ಕೆ ಇಂದು ಏನಾದರೂ ಕೀರ್ತಿ ಬಂದಿದ್ದರೆ ಆ ಕೀರ್ತಿ ನಿಸ್ಸಂದೇಹವಾಗಿಯೂ ಮಾಸ್ಕೊದಲ್ಲಿ ನಡೆದ ಆ ಸಮ್ಮೇಳನಕ್ಕೇ ಸಲ್ಲಬೇಕು.

ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷವು 19ನೆಯ ಅಧಿವೇಶನದಲ್ಲಿ ಏಕ ಕಾಲಿಕ ಭಾಷಾಂತರವನ್ನು ವಿದೇಶೀ ಪ್ರತಿನಿಧಿಗಳಿಗೆ ನಾನಾ ವಿದೇಶೀ ಭಾಷೆಗಳ ಮೂಲಕ ಒದಗಿಸಿತು. 20ನೆಯ ಅಧಿವೇಶನದಲ್ಲಿ ರಷ್ಯನ್ ಭಾಷೆಯಿಂದ ವಿದೇಶೀ ಭಾಷೆಗಳಿಗೂ ವಿದೇಶೀ ಭಾಷೆಗಳಿಂದ ರಷ್ಯನ್ ಭಾಷೆಗೂ ಏಕಕಾಲಿಕ ಭಾಷಾಂತರವನ್ನು ಕೈಗೊಳ್ಳ ಲಾಯಿತು. ಈ ಅಧಿವೇಶನದಲ್ಲಿ ಇಂಗ್ಲಿಷ್, ಫ್ರೆಂಚ್, ಜರ್ಮನ್, ಸ್ಪಾನಿಷ್, ಚೀನಿ, ರಷ್ಯನ್ ಮತ್ತು ಇಟಾಲಿಯನ್ ಭಾಷೆಗಳನ್ನು ಬಳಸಲಾಯಿತು. 21ನೆಯ ಅಧಿವೇಶನದ ವೇಳೆಗಾಗಲೇ ಈ ಭಾಷೆಗಳ ಸಂಖ್ಯೆ ಹದಿನೆಂಟನ್ನು ಮುಟ್ಟಿದ್ದವು. ಈಗ ಕ್ರೆಮ್ಲಿನ್ನಿನ 'ಪ್ಯಾಲೇಸ್ ಆಫ್ ಕಾಂಗ್ರೆಸ್'ನಲ್ಲಿ ಮೂವತ್ತು ಭಾಷೆಗಳಲ್ಲಿ ಏಕಕಾಲಿಕ ಭಾಷಾಂತರ ಗಳು ನಡೆಯುತ್ತವೆ !

1961ರಲ್ಲಿ ಸೋವಿಯತ್ ಒಕ್ಕೂಟದ ಏಕಕಾಲಿಕ ಭಾಷಾಂತರಕಾರರು ನ್ಯೂಯಾರ್ಕಿನ ವಿಶ್ವಸಂಸ್ಥೆಯಲ್ಲೂ ಆನಂತರ ಜಿನೀವಾದಲ್ಲಿನ ಯೂರೋಪಿಯನ್ ವಿಭಾಗದಲ್ಲೂ ರಷ್ಯನ್ ಭಾಷೆಯಿಂದ ಇತರ ಭಾಷೆಗಳಿಗೆ ಏಕಕಾಲದಲ್ಲಿ ಭಾಷಾಂತರ ಗಳನ್ನು ಒದಗಿಸಿದರು. ಈಗ ಪ್ರಪಂಚದಲ್ಲಿ ಸುಮಾರು 2000 ಮಂದಿ ಭಾಷಾಂತರ ಕಾರರು ಬೇರೆ ಬೇರೆ ಭಾಷೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅ ಪೈಕಿ ಸುಮಾರು 300 ಮಂದಿ ಸೋವಿಯತ್ ಒಕ್ಕೂಟದಲ್ಲೂ, ಬಹುಶಃ ಅಷ್ಟೇ ಮಂದಿ ಇತರ ಸಮಾಜ ವಾದೀ ರಾಷ್ಟ್ರಗಳಲ್ಲಿ (ಬಲ್ಗೇರಿಯ, ಹಂಗೇರಿ, ಪೂರ್ವ ಜರ್ಮನಿ, ಕ್ಯೂಬಾ, ಪೋಲೆಂಡ ರುಮೇನಿಯಾ, ಜಕೋಸ್ಲವೇಕಿಯಾ) ಇದ್ದಾರೆ. ಇನ್ನೂ ಸುಮಾರು 300 ಜನ

ವಿಶ್ವಸಂಸ್ಥೆಯಲ್ಲೂ, ಇನ್ನೂ ಸುಮಾರು 900 ಮಂದಿ ಏಕಕಾಲಿಕ ಭಾಷಾಂತರಕಾರರು ಅಂತರರಾಷ್ಟ್ರೀಯ ಭಾಷಾಂತರಕಾರರ ಸಂಸ್ಥೆಯಲ್ಲಿ ಸದಸ್ಯರಾಗಿ ಅಮೆರಿಕ, ಕೆನಡಾ ದೇಶಗಳನ್ನೊಳಗೊಂಡಂತೆ ಇತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹಂಚಿಹೋಗಿದ್ದಾರೆ. ಇನ್ನುಳಿದವರು ಆಫ್ರಿಕಾ ಮತ್ತು ಏಷ್ಯಾಖಂಡಗಳಲ್ಲಿದ್ದಾರೆ.

ಏಕಕಾಲಿಕ ಭಾಷಾಂತರಕಾರರ ತರಬೇತಿಗಾಗಿ ಹಲವಡೆ ಶಾಲೆಗಳನ್ನು ನಡೆಸಲಾಗುತ್ತಿದೆ. 1948ರ ವೇಳೆಗಾಗಲೇ ಜಿನೀವಾದ ಭಾಷಾಂತರ ಶಾಲೆಯಲ್ಲಿ ಅನೇಕ ಮಂದಿ ಭಾಷಾಂತರಕಾರರು ತರಪೇತಿ ಪಡೆಯುತ್ತಿದ್ದರು. ಈ ಪೈಕಿ ಒಬ್ಬರಿಬ್ಬರು ಏಕಕಾಲಿಕ ಭಾಷಾಂತರದಲ್ಲಿ ತರಪೇತಿ ಪಡೆದವರಾಗಿದ್ದರು. 1962 ರಿಂದ ಪ್ರತಿವರ್ಷ ಮಾಸ್ಕೊದಲ್ಲಿರುವ ಮರೀಸ ತೆರೇಸಾ ಹೆಸರಿನ 'ಮಾಸ್ಕೊ ಸ್ಟೇಟ್ ಪೆಡಗಲಾಜಿಕಲ್ ಇನ್ಸ್ಟಿಟ್ಯೂಟ್ ಆಫ್ ಫಾರಿನ್ ಲ್ಯಾಂಗ್ವೇಜಸ್' ಸಂಸ್ಥೆಯಿಂದ 5 ರಿಂದ 7 ಮಂದಿ ಏಕಕಾಲಿಕ ಭಾಷಾಂತರದಲ್ಲಿ ನೈಪುಣ್ಯಗಳಿಸಿ ವಿಶ್ವಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.[4] ಪ್ರಪಂಚದಲ್ಲಿನ ಇನ್ನಿತರ ಇಂಥ ಪ್ರಸಿದ್ಧ ಸಂಸ್ಥೆಗಳೆಂದರೆ ವಾಷಿಂಗ್ಟನ್ ಶಾಲೆ (ಜಾರ್ಜ್ ಟೌನ್ ವಿಶ್ವವಿದ್ಯಾನಿಲಯ) 'ಹೈಡಲ್ ಬರ್ಗ್' (ಜರ್ಮನಿ-ಪಶ್ಚಿಮ), ಲೀಪ್ಸಿಗ್ (ಪೂರ್ವ ಜರ್ಮನಿ) ಮತ್ತು ಪ್ಯಾರಿಸ್‌ನಲ್ಲಿರುವ ಭಾಷಾಂತರ ಶಾಲೆಗಳು. 1971ರಲ್ಲಿ ಮಾಸ್ಕೊದ ಮರೀಸ ತೆರೇಸಾ ಸಂಸ್ಥೆಯಲ್ಲಿ ಏಕಕಾಲಿಕ ಭಾಷಾಂತರಕ್ಕೆಂದೇ ವಿಶೇಷವಾದ ಉನ್ನತ ಶಿಕ್ಷಣವನ್ನು ಆರಂಭಿಸಲಾಯಿತು.

ಏಕಕಾಲಿಕ ಭಾಷಾಂತರದ ಎರಡು ವಿಧಾನಗಳು

ಏಕಕಾಲಿಕ ಭಾಷಾಂತರವನ್ನು ಕುರಿತಂತೆ ಎರಡು ವಿಧಾನಗಳನ್ನು ಕೆಲವು ದೇಶಗಳು ಹೊಂದಿವೆ. ಆ ಎರಡು ವಿಭಾಗಗಳ ಪೈಕಿ ಮೊದಲನೆಯ ವಿಧಾನವೆಂದರೆ ನೇರ ಅನುವಾದವನ್ನು ಕುರಿತದ್ದು. ವಿಶ್ವ ಸಂಸ್ಥೆ ಹಾಗೂ ಅದರ ಅಂಗಸಂಸ್ಥೆಗಳಲ್ಲಿರುವಂತೆ ಈ ವಿಧಾನದಂತೆ ಎಷ್ಟು ಭಾಷೆಗಳಿಗೆ ಅನುವಾದ ಮಾಡಬೇಕಾಗುತ್ತವೆಯೋ ಅಷ್ಟು ಕೋಣೆಗಳಿರುತ್ತವೆ. ಉದಾಹರಣೆಗೆ ಹೇಳುವುದಾದರೆ ವಿಶ್ವಸಂಸ್ಥೆಯಲ್ಲಿ ಐದು ಭಾಷೆಗಳನ್ನು-ಇಂಗ್ಲಿಷ್, ಫ್ರೆಂಚ್, ರಷ್ಯನ್, ಸ್ಪ್ಯಾನಿಷ್ ಮತ್ತು ಚೀನಿ ಭಾಷೆಗಳನ್ನು-ಅಧಿಕೃತ ಭಾಷೆಗಳೆಂದು ಪರಿಗಣಿಸಲಾಗಿದೆ. ಪ್ರತಿಯೊಂದು ಕೋಣೆಯಲ್ಲೂ ಏಕಕಾಲಿಕ ಭಾಷಾಂತರಕಾರರು ಕುಳಿತು ತಮ್ಮ ಭಾಷೆಗೆ ಇತರ ನಾಲ್ಕು ಭಾಷೆಗಳನ್ನು ಅನುವಾದಿಸುತ್ತಿರುತ್ತಾರೆ. ಸಾಮಾನ್ಯವಾಗಿ ಒಂದೊಂದು ಕೋಣೆಯಲ್ಲೂ ಇಬ್ಬರು ಭಾಷಾಂತರಕಾರರು ನೇಮಿತರಾಗಿರುತ್ತಾರೆ. ಇವರು ತಮ್ಮ ಮಾತೃ ಭಾಷೆಯಲ್ಲಿ ಅನುವಾದದ ಕಾರ್ಯವನ್ನು ಕೈಗೊಳ್ಳುತ್ತಾರೆ. ಅಲ್ಲದೇ ಈ ಕಾರ್ಯ ನೇರವಾಗಿ ನಡೆಯುತ್ತಿರುತ್ತದೆ. ಇನ್ನೊಂದು ಸ್ವಾರಸ್ಯದ ಸಂಗತಿಯೆಂದರೆ ಈ ಇಬ್ಬರಿಗೂ ಉಳಿದ ಭಾಷೆಗಳ ಮೇಲೆ ಪ್ರಭುತ್ವವಿದ್ದೇ ಇರುತ್ತದೆ (ಇಲ್ಲದಿದ್ದರೆ ಈ ಕಾರ್ಯ ಸಾಧಿಸುವುದಿಲ್ಲ). ರಷ್ಯನ್ ಕೋಣೆಯಲ್ಲಿರುವ ಇಬ್ಬರು ಭಾಷಾಂತರಕಾರರ ಪೈಕಿ ಒಬ್ಬನಿಗೆ ಇಂಗ್ಲಿಷ್, ಫ್ರೆಂಚ್

ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಪರಿಣತಿಯಿದ್ದರೆ ಮತ್ತೊಬ್ಬನಿಗೆ ಇಂಗ್ಲಿಷ್ ಮತ್ತು ಚೀನೀ ಭಾಷೆಗಳಲ್ಲಿ ಪರಿಣತಿಯಿರುತ್ತದೆ. ಕೋಣೆಯಲ್ಲಿ ಕುಳಿತು ಕೆಲಸ ಮಾಡುತ್ತಿರುವ ಉಳಿದ ಇತರ ಭಾಷಾ ಅನುವಾದಕರಿಗೂ ಇದೇ ತತ್ತ್ವ ಅನ್ವಯವಾಗುತ್ತದೆ.

ಏಕಕಾಲಿಕ ಭಾಷಾಂತರದ ಎರಡನೆ ವಿಧಾನಕ್ಕೆ ಪ್ರಮುಖ ಭಾಷೆಯ ಮೂಲಕ ಬಂದ ಭಾಷಾಂತರ ಎಂಬ ಹೆಸರುಂಟು. ಸಾಮಾನ್ಯವಾಗಿ ಈ ವಿಧಾನ ಸೋವಿಯತ್ ಒಕ್ಕೂಟದಲ್ಲಿ ಬಳಕೆಯಲ್ಲಿದೆ. ಇತರ ಸಮಾಜವಾದಿ ರಾಷ್ಟ್ರಗಳಲ್ಲೂ ಇದೇ ವಿಧಾನ ಬಳಕೆಯಲ್ಲಿದೆ ಎಂದು ನಾನು ಕೇಳಿದ್ದೇನೆ. ಉದಾಹರಣೆಗೆ ಸೋವಿಯತ್ ಒಕ್ಕೂಟದಲ್ಲಿ ಬಳಕೆಯಲ್ಲಿರುವ ವಿಧಾನವನ್ನೇ ನೋಡೋಣ. ಸಮ್ಮೇಳನದ ಭಾಷೆ, ಸೋವಿಯತ್ ಒಕ್ಕೂಟದಲ್ಲಿ, ರಷ್ಯನ್ ಭಾಷೆಯಾಗಿರುತ್ತದೆ. ಇದೇ ಇಲ್ಲಿನ ಪ್ರಮುಖ ಭಾಷೆ. ಸಮ್ಮೇಳನದಲ್ಲಿ ಎಷ್ಟು ಭಾಷೆಗಳನ್ನು ಬಳಸುತ್ತಾರೋ ಅಷ್ಟು ಭಾಷಾಂತರಕಾರರ ಕೋಣೆಗಳಿರುವುದಿಲ್ಲ. ಒಂದು ಕಡಿಮೆ ಇರುತ್ತದೆ. ಉದಾಹರಣೆಗೆ ಸಮ್ಮೇಳನದಲ್ಲಿ– ರಷ್ಯನ್, ಇಂಗ್ಲಿಷ್, ಫ್ರೆಂಚ್, ಜರ್ಮನ್ ಭಾಷೆಗಳನ್ನು ಬಳಸುತ್ತಿದ್ದರೆ, ಆಗ ಅಲ್ಲಿ ನಾಲ್ಕು ಕೋಣೆಗಳು ಮಾತ್ರ ಇರುತ್ತವೆ. ಅವೇ ಇಂಗ್ಲಿಷ್, ಫ್ರೆಂಚ್, ಸ್ಪ್ಯಾನಿಷ್ ಮತ್ತು ಜರ್ಮನ್ ಭಾಷೆಗಳ ಕೋಣೆಗಳು. ಭಾಷಾಂತಕಾರರ ತಂಡ (ಸಾಮಾನ್ಯವಾಗಿ ಮೂರು ಜನರದ್ದು) ರಷ್ಯನ್ ಭಾಷೆಯಿಂದ ತಮ್ಮ ಕೋಣೆಗೆ ಮೀಸಲಾಗಿರುವ ಭಾಷೆಗೆ ಭಾಷಾಂತರಿಸುತ್ತಾರೆ, ಭಾಷಣ ರಷ್ಯನ್ ಭಾಷೆಯಲ್ಲಿದ್ದರೆ. ಒಂದು ವೇಳೆ ಭಾಷಣಕಾರ ವಿದೇಶಿ ಭಾಷೆಯಲ್ಲಿ ಮಾತನಾಡಿದರೆ ಆಗ ಅವರು ಕೂಡಲೇ ರಷ್ಯನ್ ಭಾಷೆಗೆ ಭಾಷಾಂತರ ಮಾಡುತ್ತಾರೆ. ಆಗ ಉಳಿದ ಮೂರು ಕೋಣೆಯಲ್ಲಿರುವ ಭಾಷಾಂತರಕಾರರು ತಮ್ಮ ಕೋಣೆಗೆ ಮೀಸಲಾಗಿರುವ ಭಾಷೆಗೆ ನೇರವಾಗಿ ಭಾಷಣಕಾರರ ಭಾಷಣವನ್ನು ಅನುವಾದಿಸುವುದಿಲ್ಲ, ಆದರೆ ಮೊದಲನೆ ಕೋಣೆಯಲ್ಲಿರುವ ಮುಖ್ಯ ಭಾಷಾಂತರಕಾರರು ಮಾಡಿದ ಭಾಷಣಕಾರನ ರಷ್ಯನ್ ಅನುವಾದವನ್ನು ತಮ್ಮ ಕೋಣೆಗೆ ಮೀಸಲಾಗಿರುವ ಭಾಷೆಗೆ ಅನುವಾದಿಸುತ್ತಾರೆ. ಹಾಗಾಗಿ, ಎಲ್ಲ ಸಂದರ್ಭಗಳಲ್ಲೂ, ಭಾಷಣಕಾರ ರಷ್ಯನ್ ಭಾಷೆಯಲ್ಲಿ ಭಾಷಣ ಮಾಡದಿದ್ದಾಗ ಉಳಿದ ವಿದೇಶೀ ಭಾಷೆಗಳು ಎರಡು ಹಂತಗಳಲ್ಲಿ ಭಾಷಾಂತರಗೊಳ್ಳುತ್ತವೆ. ಸಮ್ಮೇಳನದ ಅವಧಿಯಲ್ಲಿ ಯಾವುದೇ ಕೋಣೆಯಲ್ಲಿರುವ ಭಾಷಾಂತರಕಾರ "ಪ್ರಮುಖ ಭಾಷಾಂತರಕಾರನಾಗಬಹುದು. ಹಾಗಾಗಿ ಯಾವ ಭಾಷಾಂತರಕಾರನೇ ಆಗಲಿ ರಷ್ಯನ್ ಭಾಷೆಯಿಂದ ತನ್ನ ಕೋಣೆಗೆ ನಿಗದಿಗೊಳಿಸಿದ ಭಾಷೆಗೆ (ಇಂಗ್ಲಿಷ್, ಫ್ರೆಂಚ್ ಇತ್ಯಾದಿ) ಅನುವಾದಿಸಬಹುದು."

ಏಕಕಾಲಿಕ ಭಾಷಾಂತರ ಅಥವಾ 'ಸಮ್ಮೇಳನದ ಭಾಷಾಂತರ' : ಒಂದು ವಿವರಣೆ

ಏಕಕಾಲಿಕ ಭಾಷಾಂತರದ ಬಾಹ್ಯ ಸ್ವರೂಪವನ್ನು ಪರಿಚಯಮಾಡಿಕೊಳ್ಳಬೇಕಾದರೆ ಮೊದಲು ಅದರ ಬಗ್ಗೆ ಕೆಲವು ಮಾಹಿತಿಗಳನ್ನು ತಿಳಿದುಕೊಳ್ಳಬೇಕು. ಏಕ

ಕಾಲಿಕ ಭಾಷಾಂತರ ಎರಡು ಬಗೆಯದಾಗಿರಬಹುದು. ಮೊದಲನೆಯದಾಗಿ ಏಕಕಾಲಿಕ ಭಾಷಾಂತರಕಾರ ಮೊದಲೇ ಲಿಖಿತರೂಪದಲ್ಲಿ ಸಿದ್ಧವಾಗಿರುವ ಭಾಷಾಂತರವನ್ನು ಬಳಸಿ ಕೊಳ್ಳಬಹುದು. ತನ್ನ ಎದುರಿಗೆ ಸಿದ್ಧ ಪ್ರತಿ ಇದ್ದರೂ 'ಏಕಕಾಲಿಕ' ಭಾಷಾಂತರಕಾರ ಭಾಷಣಕಾರನ ಮಾತುಗಳನ್ನು ಬಹಳ ಎಚ್ಚರಿಕೆಯಿಂದ ಕೇಳಬೇಕು. ಅದರಲ್ಲೂ ಭಾಷಣಕಾರನ ವಿಷಯ ತಾಂತ್ರಿಕವಾಗಿದ್ದರೆ ಇನ್ನೂ ಹೆಚ್ಚು ಎಚ್ಚರಿಕೆ ವಹಿಸಬೇಕಾಗು ಗುತ್ತದೆ. ಎರಡನೆಯದಾಗಿ ಏಕಕಾಲಿಕ ಭಾಷಾಂತರಕಾರ ಸಮ್ಮೇಳನದ ಸಭಾಂಗಣ ದಲ್ಲಿ ಭಾಗಿಗಳ ಮಧ್ಯೆ ಒಂದೇ ವೇದಿಕೆಯಲ್ಲಿ ಕುಳಿತು ಭಾಗಿಗಳ ಭಾಷಣವನ್ನು ನೇರವಾಗಿ ಅನುವಾದಿಸಬಹುದು. ಇದಕ್ಕಾಗಿ ಇವನು ಯಾವ ತಾಂತ್ರಿಕ ಉಪಕರಣಗಳನ್ನು ಬಳಸುವುದಿಲ್ಲ.

ಏಕಕಾಲಿಕ ಭಾಷಾಂತರದ ಬಾಹ್ಯಸ್ವರೂಪದ ಬಗ್ಗೆ ಒಂದೆರಡು ಲಕ್ಷಣಗಳನ್ನು ಈ ಕೆಳಗಂಡಂತೆ ವಿವರಿಸಬಹುದು.

(i) ಏಕಕಾಲಿಕ ಭಾಷಾಂತರ ಕಾರ್ಯ ಬಹುಮಟ್ಟಿಗೆ ನಡೆಯುವುದು ಕಿವಿಯ ಸಹಾಯದಿಂದ. ಎಂದರೆ ಭಾಷಣಕಾರನ ಮಾತುಗಳನ್ನು ಕೇಳಿ ಆ ಒಡನೆಯೇ ಅವಕ್ಕೆ ಸಂವಾದಿಯಾದ ಮಾತುಗಳನ್ನು ಬೇರೊಂದು ಭಾಷೆಯಲ್ಲಿ ಏಕಕಾಲಿಕ ಭಾಷಾಂತರಕಾರ ತಿಳಿಸಿಕೊಡಬೇಕಾಗುತ್ತದೆ. ಹಲವು ಸಂದರ್ಭಗಳಲ್ಲಿ ಸಿದ್ಧಪಡಿಸಿದ ಭಾಷಣದ ಪ್ರತಿ ಯನ್ನೂ ಈತ ತನ್ನ ಮುಂದಿರಿಸಿಕೊಳ್ಳಬಹುದು.

(ii) ಭಾಷಾಂತರ ಕಾರ್ಯದ ಪ್ರಕ್ರಿಯೆ ಆರಂಭವಾಗುವುದೂ ಮತ್ತು ಮುಕ್ತಾಯಗೊಳ್ಳುವುದೂ ಏಕಕಾಲದಲ್ಲಿಯೇ. ಎಂದರೆ, ಯುನೆಸ್ಕೋದಂತಹ ದೊಡ್ಡ ದೊಡ್ಡ ಸಭೆಗಳಲ್ಲಿ ಈ ಏಕಕಾಲಿಕ ಭಾಷಾಂತರದ ಕಾರ್ಯ ಒಂದೇ ಸಮನೆ ಎಡಬಿಡದೆ ನಡೆದಿರುತ್ತದೆ. ಕರ್ಣವಾಣಿಯನ್ನು ಕಿವಿಗೆ ಹಾಕಿಕೊಳ್ಳುವುದರ ಮೂಲಕ ನಮಗೆ ಅರ್ಥ ವಾಗದ ಮಾತುಗಳಿಗೆ ಸಂವಾದಿಯಾದ ಮಾತುಗಳನ್ನು ನಮಗೆ ಅರ್ಥವಾಗುವ ಭಾಷೆಯ ಮೂಲಕ ಕೇಳಬಹುದು. ಎರಡನೆಯದಾಗಿ, ಭಾಷಣಕಾರ ತಾನು ಮಾತನಾಡಿದ ಮೇಲೆ ಏಕಕಾಲಿಕ ಭಾಷಾಂತರಕಾರನಿಗೆ ತನ್ನ ಭಾಷಣ ಅರ್ಥವಾಗದ ಜನಕ್ಕೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಸಿಕೊಡುವಂತೆ ಒಡನೆಯೇ ಅನುವುಮಾಡಿ ಕೊಡುವುದು.

(iii) ಒಂದು ವೇಳೆ ಸಭಾಂಗಣದಿಂದ ಏಕಕಾಲಿಕ ಭಾಷಾಂತರಕಾರ ಪ್ರತ್ಯೇಕ ವಾಗಿದ್ದರೂ, ಮೈಕ್ರೋಫೋನ್–ಕರ್ಣವಾಣಿ–ದೂರವಾಣಿ–ಏಕಕಾಲಿಕ ಭಾಷಾಂತರ ಕಾರ–ಮೈಕ್ರೋಫೋನ್–ಕರ್ಣವಾಣಿ–ದೂರವಾಣಿಗಳ ನಿರಂತರ ಪ್ರಕ್ರಿಯೆಗಳ ಮೂಲಕ ಏಕಕಾಲಿಕ ಭಾಷಾಂತರವನ್ನು ಸಾಧಿಸಬಹುದು.

ಇಷ್ಟೆಲ್ಲಾ ಸಾಧಿತವಾಗಬೇಕಾದರೆ ಭಾಷಾಂತರಕಾರನಿಗೆ ಹೆಚ್ಚು ಅನುಭವವಿರ ಬೇಕು. ಎರಡು ಭಾಷೆಗಳಲ್ಲೂ ಪ್ರಭುತ್ವವಿರಬೇಕು. ಜೆ. ಹರ್ಬರ್ಟ್ ಅವರು "ಏಕಕಾಲೀನ ಭಾಷಾಂತರವೆಂದರೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ

ನಡೆಯುವ ತತ್‌ಕ್ಷಣದ ಪ್ರಕ್ರಿಯೆ. ಇಲ್ಲಿ ಸಹೋದ್ಯೋಗಿಗಳ ಇಲ್ಲವೆ ಭಾಗಿಗಳ ಸಲಹೆಗಳನ್ನು ಪಡೆದುಕೊಳ್ಳುವಂತಿಲ್ಲ. ಅಷ್ಟೇ ಅಲ್ಲ, ಕ್ಷಣಕಾಲ ಯೋಚಿಸಲೂ ಇಲ್ಲಿ ವ್ಯವಧಾನವಿರುವುದಿಲ್ಲ. ಇಲ್ಲವೆ ಯಾವುದೋ ಒಂದು ಅರ್ಥವನ್ನು ನೀಡಿ ಏನೋ ಒಂದು ರೀತಿ ಮುಕ್ತಾಯ ಮಾಡಿದಂತೆ ಅಲ್ಲ "5 ಎಂದು ಹೇಳಿರುವುದನ್ನು ಬಹುಶಃ ಎಲ್ಲರೂ ಒಪ್ಪುತ್ತಾರೆ.

ಏಕಕಾಲಿಕ ಭಾಷಾಂತರದ ಬಗ್ಗೆ ಸಂಶೋಧನೆ

ಈ ಬಗ್ಗೆ ಡಿ. ಗೆರ್ವರ್ ಅವರು ಹೀಗೆ ಬರೆಯುತ್ತಾರೆ. " It would be wrong to claim that research in simultaneous interpretation is at anything but a preliminary, descriptive stage ".6 ಏಕಕಾಲಿಕ ಭಾಷಾಂತರ ವೃತ್ತಿಪರ ಕಾರ್ಯಚಟುವಟಿಕೆಯು ಇನ್ನೂ ತಾರುಣ್ಯಾವಸ್ಥೆಯಲ್ಲಿದ್ದರೆ ಏಕಕಾಲಿಕ ಭಾಷಾಂತರದ ಸಂಶೋಧನೆಯ ಮಟ್ಟ ಶೈಶವಾವಸ್ಥೆಯದೆಂದು ಹೇಳಬೇಕು. ಏಕಕಾಲಿಕ ಭಾಷಾಂತರ ತತ್ತ್ವಗಳ ಬಗ್ಗೆ ಈ ಶತಮಾನದ 60ರ ದಶಕಗಳಲ್ಲಿ ಪ್ರಯೋಗಗಳನ್ನು ಕೈಗೊಳ್ಳಲಾಯಿತು. ಈ ಬಗ್ಗೆ 1957ರಲ್ಲಿ ಇ. ಪ್ಯಾನೆಟ್ ಎಂಬುವರು ಮೊದಲಿಗೆ ಲಂಡನ್ ವಿಶ್ವವಿದ್ಯಾನಿಲಯಕ್ಕೆ ಈ ವಿಷಯವನ್ನು ಕುರಿತು ಪ್ರೌಢಪ್ರಬಂಧವೊಂದನ್ನು ಬರೆದುಕೊಟ್ಟರು. ಏಕಕಾಲಿಕ ಭಾಷಾಂತರದ ಇತಿಹಾಸ, ಮೂಲ ಮತ್ತು ಭಾಷಾಂತರಗಳ ನಡುವಣ ಬೆಳವಣಿಗೆಯ ಘಟ್ಟಗಳು, ಈ ಏಕಕಾಲಿಕ ಭಾಷಾಂತರದ ಹಂತಗಳ ಬಗ್ಗೆ ಕೈಗೊಳ್ಳಲಾದ ಸಂಶೋಧನೆ– ಇವೇ ಮೊದಲಾದ ವಿಷಯಗಳನ್ನು ಈ ಪ್ರೌಢಪ್ರಬಂಧ ಒಳಗೊಂಡಿದೆ. ಏಕಕಾಲಿಕ ಭಾಷಾಂತರಕಾರರು ಮೂಲದ ಶಬ್ದಕ್ಕೆ ಪ್ರತಿಯಾಗಿ ಉದ್ದಿಷ್ಟ ಭಾಷೆಯಲ್ಲಿ ಅದಕ್ಕೆ ಸಂವಾದಿ ಶಬ್ದವನ್ನು ಬಳಸಲು ಅವರು ತೆಗೆದುಕೊಳ್ಳುವ ಕಾಲ 2 ರಿಂದ 4 ಸೆಕೆಂಡ್‌ಗಳಷ್ಟು ಎಂಬುದನ್ನು ಪಾನೆಟ್ ತೋರಿಸಿಕೊಟ್ಟಿದ್ದಾರೆ.

ಈ ಭಾಷಾಂತರದ ಬಗ್ಗೆ ಮತ್ತಷ್ಟು ಗಂಭೀರವಾಗಿ ಪ್ರಯೋಗಗಳನ್ನು ನಡೆಸತೊಡಗಿದ್ದು 60ರ ದಶಕದ ಮಧ್ಯದಲ್ಲಿ ಎಂದು ಹೇಳಬಹುದು. ಈ ಬಗ್ಗೆ ವ್ಯಾಪಕವಾಗಿ ಕಾರ್ಯನಡೆಸಿದವರೆಂದರೆ ಸೋವಿಯತ್ ಒಕ್ಕೂಟದ ಜೆ. ಎ. ಕಚ್ಕೀನಾ, ಎಂ. ಯೆ. ತ್ರಿಲಿಂಗ್, ಬ್ರಿಟನ್ನಿನ ಎ. ಟ್ರೈಸ್ಮನ್, ಫ್ರಾನ್ಸಿನ ಡಿ. ಸೆಲ್‌ಸ್ಕೊವಿಚ್ ಮೊದಲಾದವರು.

ಎಚ್. ಸಿ. ಬ್ಯಾರಿಕ್ ಅವರು ತಮ್ಮ ಪ್ರೌಢಪ್ರಬಂಧದ ಮೊದಲೆರಡು ಅಧ್ಯಾಯಗಳಲ್ಲಿ ಏಕಕಾಲಿಕ ಭಾಷಾಂತರದ ಗುಣಗಳನ್ನು ಕುರಿತು ಕ್ರಮಬದ್ಧವಾದ ಸಂಶೋಧನೆಯನ್ನು ಕೈಗೊಂಡಿದ್ದಾರೆ.7 ಮೂಲ ಮತ್ತು ಉದ್ದಿಷ್ಟ ಭಾಷೆಗಳ ಸ್ವರೂಪ, ಮೂಲ ಭಾಷೆಯಲ್ಲಿ ಮಾತನಾಡುವಾಗ ಒಂದು ಪದಬಂದ ಮತ್ತೊಂದು ಪದಕ್ಕೆ ಹಾಗೂ ವಾಕ್ಯದಿಂದ ಮತ್ತೊಂದು ವಾಕ್ಯಕ್ಕೆ ತೆಗೆದುಕೊಳ್ಳುವ ಕಾಲ, ಮಾತಿನ ಮಧ್ಯೆ ಕೊಡುವ

ವಿರಾಮ ಇವುಗಳನ್ನೆಲ್ಲಾ ಲೆಕ್ಕಹಾಕಿದ್ದಾರೆ. ಬಹುಮಂದಿ ಈ ಬಗ್ಗೆ ನಡೆಸಿರುವ ತಮ್ಮ ಸಂಶೋಧನೆಗಳಲ್ಲಿ ಭಾಷಣಕಾರನ ಮಾತಿನ ಬಿಡುವನ್ನೂ ಭಾಷಾಂತರಕಾರ ಅದೇ ಮಾತುಗಳನ್ನು ಅನುವಾದಿಸುವಾಗ ತಾನು ಕೊಡುವ ಬಿಡುವನ್ನೂ ಬಹಳ ಎಚ್ಚರಿಕೆಯಿಂದ ಗಮನಿಸಿದ್ದಾರೆ ಈ ಪ್ರಶ್ನೆಯನ್ನು ಎರಡು ಪ್ರತ್ಯೇಕವಾದ ಪ್ರಶ್ನೆಗಳಾಗಿ ವಿಭಾಗಿಸಬಹುದು. ಅವುಗಳಲ್ಲಿ ಒಂದು ಭಾಷಣಕಾರ ತಾನು ಪದಗಳ ನಡುವೆ ಕೊಡುವ ವಿರಾಮದ ವಿಧಾನ. ಈ ಬಗ್ಗೆ ಬ್ಯಾರಿಕ್ ಅವರ ಗ್ರಂಥದಲ್ಲಿ ವಿವರಗಳಿವೆ.

1970ರಲ್ಲಿ ಮಾಸ್ಕೊದಲ್ಲಿ ನಡೆದ ಸೋವಿಯತ್ ಒಕ್ಕೂಟಗಳ ಸಮ್ಮೇಳನವೊಂದರಲ್ಲಿ 'ಭಾಷಾಂತರದ ಬೋಧನೆ, ವಿಧಾನಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಹಾಗೂ ತತ್ತ್ವಗಳನ್ನು ಕುರಿತು' ಜೀವ್ನಿಂ ಹಾಗೂ ಚೆರ್ನೋಫ್ ಅವರು ಮಂಡಿಸಿದ ಪ್ರಬಂಧದಲ್ಲಿ ಏಕಕಾಲಿಕ ಭಾಷಾಂತರದ ಸಂಶೋಧನೆಯನ್ನು ಕುರಿತ ಹಲವಾರು ಸ್ವಾರಸ್ಯಕರ ಅಂಶಗಳಿವೆ.[8] 1969ರಲ್ಲಿ ಮಾಸ್ಕೋದ "ಪೆಡಗಲಾಜಿಕಲ್ ಇನ್ಸ್ಟಿಟ್ಯೂಟ್" (ವಿದೇಶಿ ಭಾಷೆಗಳು)ನಲ್ಲಿ ಇವರು ಕೈಗೊಂಡಿದ್ದ ಪ್ರಯೋಗದಲ್ಲಿ 11 ಮಂದಿ ಭಾಷಾಂತರಕಾರರು–ಏಕಕಾಲಿಕ ಭಾಷಾಂತರಕಾರರು–ಭಾಗವಹಿಸಿದ್ದರು. ಇವರೆಲ್ಲರೂ ಅತ್ಯುನ್ನತ ಪರಿಣತರು. ಭಾಷಾಂತರಕ್ಕಾಗಿ ಭಾಷಣಕಾರರ ಮಾತುಗಳ (ರಷ್ಯನ್–ಇಂಗ್ಲಿಷ್ ಮತ್ತು ಇಂಗ್ಲಿಷ್–ರಷ್ಯನ್) ನ್ನೊಳಗೊಂಡ 60 ನಿಮಿಷಗಳ ಧ್ವನಿ ಮುದ್ರಿಕೆಯ ಪಾಠವನ್ನು ಸಿದ್ಧಪಡಿಸಿಕೊಳ್ಳಲಾಯಿತು. ವಿಶ್ಲೇಷಣೆಗಾಗಿ ರಷ್ಯನ್ ಭಾಷೆಯ ಇಪ್ಪತ್ತು ನಿಮಿಷಗಳ ಪಾಠವನ್ನೂ ಮತ್ತು ಆರು ಭಾಷಾಂತರಗಳನ್ನೂ ಬಳಸಿಕೊಳ್ಳಲಾಯಿತು. ಅನಂತರ ಅವುಗಳನ್ನು ಪ್ರಾಯೋಗಿಕವಾಗಿ ಆಸಿಲೋಗ್ರಾಫ್ ಮೂಲಕ ಎರಡು ಬಗೆಯಲ್ಲಿ ಬಳಸಿಕೊಂಡು ಫಲಿತಾಂಶಗಳನ್ನು ಕಂಡುಹಿಡಿಯಲಾಯಿತು. ಪ್ರತಿಯೊಬ್ಬ ಭಾಷಾಂತರಕಾರನ 4 ನಿಮಿಷ ಕಾಲದ ಕೆಲಸವನ್ನು, ಅಂದರೆ ಭಾಷಾಂತರಕಾರನ ಕೆಲಸದ ಶೇಕಡ 20%ರಷ್ಟನ್ನು, ವಿಶ್ಲೇಷಣೆಗೊಳಪಡಿಸಿದ್ದರು. ಇದರಿಂದ ಬಂದ ಫಲಿತಾಂಶ ತುಂಬ ಉತ್ತೇಜಕರವಾದದ್ದರಿಂದ ಆ ಮುಂದಿನ ಸಮ್ಮೇಳನಗಳಲ್ಲೂ ಇವನ್ನೇ ಮಾದರಿಯಾಗಿಟ್ಟುಕೊಳ್ಳಲಾಯಿತು. ಅಷ್ಟೇ ಅಲ್ಲ ಇದರಿಂದ ಏಕಕಾಲಿಕ ಭಾಷಾಂತರ ಅತ್ಯಂತ ಕಷ್ಟಸಾಧ್ಯವಾದ ಕೆಲಸ ಎನ್ನುವುದೂ ಮನದಟ್ಟಾಯಿತು.[9]

ಏಕಕಾಲಿಕ ಭಾಷಾಂತರಕಾರನ ಸಮಸ್ಯೆಗಳು

ಏಕಕಾಲಿಕ ಭಾಷಾಂತರಕಾರ ಅತ್ಯಂತ ಮೇಧಾವಿಯೂ ಬಹುಶ್ರುತನೂ ಆಗಿರಬೇಕು. ಕಂಪ್ಯೂಟರ್ ಯಂತ್ರದಂತೆ ತತ್‌ಕ್ಷಣವೇ ಭಾಷಾಂತರವನ್ನು ಒದಗಿಸುತ್ತಿರಬೇಕು. ಉದಾಹರಣೆಗೆ The ugly beauty rattled upto the top of the sour valley ಎಂಬುದನ್ನೇ ನೋಡೋಣ. ಇದು ವ್ಯಾಕರಣಾತ್ಮಕವಾಗಿ ಅತ್ಯಂತ ಸಮರ್ಪಕವಾದ ವಾಕ್ಯ. ಆದ್ದರಿಂದ ಇಂಥದೇ ವಾಕ್ಯರಚನೆಗಳನ್ನು ಹೊಂದಿರುವಂಥ ಇತರ ಭಾಷೆಗಳಿಗೆ ಈ ವಾಕ್ಯವನ್ನು ಅನುವಾದಿಸಬಹುದು. ಆದರೂ

ಇದು ಏಕಕಾಲಿಕ ಭಾಷಾಂತರಕಾರನಿಗೆ ಇಲ್ಲವೆ ದುಭಾಷಿಗೆ ಮುಗ್ಗರಿಸುವಂತೆ ಮಾಡಬಹುದು. ಇನ್ನೂ ಒಂದೆರಡು ಉದಾಹರಣೆಗಳನ್ನು ನೋಡಬಹುದು.

(i) The green nights woke strongly on the logical armchair.

(ii) The square circle walked readily along the steamy beast.

(iii) The round knife flew squarely inside the bottom of smoke.

ಏಕಕಾಲಿಕ ಭಾಷಾಂತರಕಾರನಿಗೆ ಪೂರ್ಣ ಅಸಮಂಜತೆಯಿಂದ ಕೂಡಿದ ಆದರೆ ವ್ಯಾಕರಣಾತ್ಮಕವಾಗಿ ಸಮರ್ಪಕವಾದ ಇಂಥ ವಾಕ್ಯಗಳನ್ನು ಅನುವಾದ ಮಾಡುವ ಪರಿಸ್ಥಿತಿ ಬರುತ್ತದೆ. ಇಂಗ್ಲಿಷ್ ಭಾಷೆಯ ವಾಕ್ಯಗಳು ಇವು ಎಂಬ ಸಂಗತಿಯೇನೋ ಆತನಿಗೆ ಮನದಟ್ಟಾಗುತ್ತದೆ. ಆದರೆ ಅವುಗಳ ಅರ್ಥ ನಿಷ್ಕೃಷ್ಟವಾಗಿ ಹೊಳೆಯುವುದಿಲ್ಲ. ಹಾಗಾಗಿ ಎಷ್ಟೋ ಸಂದರ್ಭಗಳಲ್ಲಿ ಅವುಗಳ ಒಟ್ಟರ್ಥ ಹೊಳೆದರೆ ಸಾಕೆಂದು ಹೇಗೋ ಭಾಷಾಂತರಿಸಿ ಕೈ ತೊಳೆದುಕೊಂಡು ಬಿಡುವುದೂ ಉಂಟು. ಒಮ್ಮೊಮ್ಮೆ ಇಂಥ ಸಮಸ್ಯೆಗಳು ಕೇವಲ ಒಂದೆರಡು ಪದಗಳಲ್ಲಿ ಉದ್ಭವಿಸಬಹುದು. ಉದಾಹರಣೆಗೆ: The yellow symposium of iron trees will be deeply held yesterday. ಇಲ್ಲಿ ಕೊನೆಯ ಪಕ್ಷ symposium....will be....held ಎನ್ನುವುದಾದರೂ ಸ್ವಲ್ಪಮಟ್ಟಿನ ಅರ್ಥವನ್ನು ಕೊಡುತ್ತದೆ. ಉಳಿದ ಪದಗಳ ಬಗ್ಗೆ ಏಕಕಾಲಿಕ ಭಾಷಾಂತರಕಾರ ಸಮಯೋಚಿತ ಅರ್ಥವನ್ನು ಹೊಂದಿಸಿಕೊಂಡು ಭಾಷಾಂತರಿಸಬೇಕಾಗುತ್ತದೆ. ಪ್ರಯೋಗಾತ್ಮಕವಾಗಿ ಇನ್ನೊಂದು ಉದಾಹರಣೆಯನ್ನು ನೋಡಬಹುದು. ಈ ಉದಾಹರಣೆಯನ್ನು ಹಿಂದಿನ ಉದಾಹರಣೆಯೊಂದಿಗೆ ಹೋಲಿಸಿದಾಗ ವ್ಯತ್ಯಾಸ ತೀವ್ರವಾಗಿ ಎದ್ದು ಕಾಣುತ್ತದೆ. ಅದು ಹೀಗಿದೆ: The lively gloomy machinery dropped the moon with heavy pleasure. ಇಲ್ಲಿಯೂ ಏಕಕಾಲಿಕ ಭಾಷಾಂತರಕಾರನಿಗೆ ಅರ್ಥವಾಗದ ಪ್ರಸಂಗ ಒದಗುವುದುಂಟು.

ಆದ್ದರಿಂದ ಏಕಕಾಲಿಕ ಭಾಷಾಂತರಕಾರನಿಗೆ ಒದಗುವ ಸಮಸ್ಯೆಗಳು ಅಪಾರ. ಅವನಿಗೆ ಯೋಚಿಸುವಷ್ಟು ವ್ಯವಧಾನವಿರುವುದಿಲ್ಲ. ಹಾಗಾಗಿ ಪ್ರತಿ ಹೆಜ್ಜೆಗೂ ಆತನು ಎಚ್ಚರಿಕೆಯಿಂದಿರಬೇಕು. ಲಿವೀಸ್ ಕೆರೋಲ್‌ನ ಮಾತುಗಳಲ್ಲೇ ಹೇಳುವುದಾದರೆ "....and the moral of that is — 'Take care of the sense, and the sounds will take care of themselves' ಎನ್ನುವುದು ಸತ್ಯಸ್ಯ ಸತ್ಯವಾಗಿದೆ.

ಅಡಿಟಿಪ್ಪಣಿಗಳು

1 ಎ. ಎ. ಗೋಫ್‌ಮನ್: ಏಕಕಾಲೀನ ಭಾಷಾಂತರದ ಇತಿಹಾಸ; ಮಾಸ್ಕೊ "ಅಂತರರಾಷ್ಟ್ರೀಯ ಸಂಬಂಧ" (ಪತ್ರಿಕೆ)ಯಲ್ಲಿ 1963, ಸಂಚಿಕೆ 20 (ರಷ್ಯನ್ ಭಾಷೆಯಲ್ಲಿ)

2 P. E. Longley: *Conference Interpreting*, London; 1968, ಪುಟ 32

3 Henri Van Hoof: *Thorie et Pratique de l'interpretation*. Munchen, 1962. ಪು. 20

4 1972ರಲ್ಲಿ ಇದೇ ಸಂಸ್ಥೆಯಲ್ಲಿ ಆರು ತಿಂಗಳ ಕಾಲ ಭಾಷಾಂತರ ಶಿಕ್ಷಣ ಪಡೆಯುವ ಸುಯೋಗ ಈ ಲೇಖಕನ ಪಾಲಿಗೆ ಒದಗಿತ್ತು.

5 J. Herbert: *The Interpreter's Handbook*, Geneva, 1952. ಪುಟ 29.

6 D. Gerver: *A Psychological Approach to Simultaneous Interpretation*, Montreal, 1975 ಪುಟ 120.

7 H.C. Barik: *A Study of Simultaneous Interpretation*, 1969 University of North Carolina. ಪುಟ 200

8 ಜೇನ್ನೊಯ ಮತ್ತು ಚೆರ್ನೋಫ್: ಭಾಷಾಂತರದ ಬೋಧನೆ ವಿಧಾನಗಳಿಗೆ ಸಂಬಂಧಿಸಿದ ತತ್ತ್ವಗಳು ಮತ್ತು ಪ್ರಶ್ನೆಗಳು. ಮಾಸ್ಕೊ 1970 (ರಷ್ಯನ್ ಭಾಷೆಯಲ್ಲಿ).

9 ವಿವರಗಳಿಗೆ: ಜಿ. ವಿ. ಚೆರ್ನೋಫ್: ತಿಯೋರಿಯ ಇ ಪ್ರಾಕ್ತಿಕ ಸಿಂಹ್ರೋನ್ನವ ಪಿರಿವೋದ, ಮಾಸ್ಕೊ 1978. ಪುಟ 20 (ರಷ್ಯನ್ ಭಾಷೆಯಲ್ಲಿ)

ಎಂ. ಎಸ್. ಪುಟ್ಟಣ್ಣ

ಸಂಗ್ರಹ : ಎಚ್. ಎಸ್. ಸುಜಾತ

ಮೈಸೂರು ಸೀಮೆಯಲ್ಲಿ ನಶಿಸಿಹೋದ ವೃತ್ತಿಗಳು

[ಎಂ. ಎಸ್. ಪುಟ್ಟಣ್ಣನವರು (೧೮೫೪–೧೯೩೦) ಕನ್ನಡ ಭಾಷೆ ಸಾಹಿತ್ಯಗಳಿಗಾಗಿ ದುಡಿದ ಮಹನೀಯರಲ್ಲಿ ಒಬ್ಬರು. ಕಾದಂಬರಿ, ಜೀವನಚರಿತ್ರೆ, ಅನುವಾದ ಶಿಶುಸಾಹಿತ್ಯ ಮೊದಲಾದ ಹಲವು ಪ್ರಕಾರಗಳಲ್ಲಿ ಪುಟ್ಟಣ್ಣನವರ ಕೊಡುಗೆ ಮಹತ್ತ್ವದ್ದು.

ಸಮಾಜದ ಆಗುಹೋಗುಗಳಲ್ಲಿ ಪುಟ್ಟಣ್ಣನವರು ಬಹಳವಾದ ಆಸಕ್ತಿಯನ್ನು ಹೊಂದಿದ್ದವರು. ಸಮಾಜದ ಒಟ್ಟು ಚಿತ್ರದ ಇಣಿಕುನೋಟ ಅವರ ಬರವಣಿಗೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಗುಣ. ೭–೬–೧೯೧೭ರ 'ಅರ್ಥಸಾಧಕ ಪತ್ರಿಕೆ'ಯಲ್ಲಿ ಪ್ರಕಟವಾದ ಈ ಲೇಖನದಲ್ಲಿ ಪುಟ್ಟಣ್ಣನವರು ಯಂತ್ರೋದ್ಯಮದಿಂದ ನಾಶವಾದ ಸಣ್ಣ ಪ್ರಮಾಣದ ವೃತ್ತಿಗಳನ್ನು ಕುರಿತು ಹೇಳುತ್ತಾ ಅದರಿಂದಾದ ಆನುಷಂಗಿಕ ಪರಿಣಾಮವನ್ನು ತಿಳಿಸುತ್ತಾರೆ. ಬದಲಾಗುತ್ತಿರುವ ಸಮಾಜದ ಒಂದು ಘಟ್ಟದ ಸ್ಥಿತಿಯೂ ಇಲ್ಲಿ ಪ್ರತಿಬಿಂಬಿತವಾಗಿದೆ. ಕನ್ನಡಿಗರ ಗಮನಕ್ಕೆ ಬರಲೆಂಬ ಉದ್ದೇಶದಿಂದ ಈಗ ಈ ಲೇಖನವನ್ನು ಇಲ್ಲಿ ಪುನರ್ಮುದ್ರಿಸಲಾಗಿದೆ. —ಎಚ್. ಎಸ್. ಸುಜಾತಾ]

ಯೂರೋಪಿನ ಜನರು ಹಿಂದೂಸ್ಥಾನಕ್ಕೆ ಬಂದು ತಮ್ಮ ವ್ಯಾಪಾರವನ್ನು ವೃದ್ಧಿ ಮಾಡಿ ಇಲ್ಲಿ ಇಲ್ಲದ ಸರಕುಗಳನ್ನು ಹೊರದೇಶಗಳಿಂದ ತಂದು ಇಲ್ಲಿ ಮಾರುತ್ತಾ, ಇಲ್ಲಿ ತಯಾರಾಗತಕ್ಕ ದೇಶೀಯ ಪದಾರ್ಥಗಳನ್ನು ತಮ್ಮ ದೇಶಕ್ಕೂ ಇತರ ದೇಶಗಳಿಗೂ ತೆಗೆದುಕೊಂಡು ಹೋಗಿ ಮಾರುತ್ತಾ ಇದ್ದರಷ್ಟೆ ? ಇವರು ಇನ್ನೂ ಒಂದು ಕೆಲಸ ಮಾಡಲು ಆರಂಭಿಸಿದರು. ಇಲ್ಲಿ ತಯಾರಾಗುತ್ತಾ ಇದ್ದ ಸರಕುಗಳನ್ನು ಕೊಂಡು ಹೋಗಿ ಅದೇ ತರದ ಸರಕುಗಳನ್ನು ತಮ್ಮ ದೇಶದಲ್ಲಿ ಹೆಚ್ಚಾಗಿ ತಯಾರ್ಮಾಡಿಸಿ ಅಂಥವುಗಳಿಗೆ ಹಿಂದುಸ್ಥಾನದ ಕೈಗಾರಿಕೆಯವರು ಹಾಕುವ ಕ್ರಯಕ್ಕಿಂತಲೂ ಕಡಿಮೆಯಾಗಿ ಇಲ್ಲಿ ಮಾರಲು ಮೊದಲು ಮಾಡಿದರು. ಹೀಗೆ ಕಡಿಮೆ ಕ್ರಯಕ್ಕೆ ಮಾರಲು

ಯೂರೋಪು ದೇಶೀಯರಿಗೆ ಅನುಕೂಲಗಳಿದ್ದುವು. ಇವರು ಯಂತ್ರಗಳ ದೆಸೆಯಿಂದ ತಮ್ಮ ದೇಶದಲ್ಲಿ ಸರಕುಗಳನ್ನು ತಯಾರುಮಾಡಿಸುತಿದ್ದ ಕಾರಣ, ಹಿಂದುಸ್ಥಾನದ ಕೈಗಾರಿಕೆಯವನು ಒಂದು ತಿಂಗಳಲ್ಲಿ ತನ್ನ ಕೈಯಿಂದ ಮಾಡುವ ಕಾರ್ಯವನ್ನು ಯೂರೋಪಿನ ಜನರು ಯಂತ್ರದ ದೆಸೆಯಿಂದ ಒಂದು ಗಳಿಗೆಯಲ್ಲಿ ತಯಾರುಮಾಡ ಬಹುದಾಗಿತ್ತು. ಇಂಥ ದೊಡ್ಡ ಕೈಯುಳ್ಳ ಪಾಶ್ಚಾತ್ಯರು ತಮ್ಮ ಪದಾರ್ಥಗಳನ್ನು ಕಡಿಮೆ ಬೆಲೆಗೆ ಈ ದೇಶದಲ್ಲಿ ಮಾರುತಿದ್ದರು. ಬೆಲೆ ಕಡಿಮೆಯಾದ್ದರಿಂದ ಜನರು ಹೆಚ್ಚಾಗಿ ಕೊಂಡುಕೊಳ್ಳುತಿದ್ದರು. ಈ ದೇಶದ ಕೈಗಾರಿಕೆಯವರು ಕೈಯಲ್ಲಿ ಮಾಡುತಾ ಇದ್ದ ಅದೇ ಬಗೆಯ ಸರಕಿಗೆ ಅಸಲು ಹೆಚ್ಚಾಗುತಾ ಇದ್ದ ಕಾರಣ ಮಾರುವ ಧಾರಣೆಯು ಯುರೋಪಿನವರ ಧಾರಣೆಗಿಂತಲೂ ಅಧಿಕವಾಗುತ್ತಿತ್ತು. ಆದ್ದರಿಂದ ನಮ್ಮ ದೇಶದ ಕೈಗಾರಿಕೆಯವರು ನಷ್ಟ ಮಾಡಿಕೊಳ್ಳುವುದಕ್ಕಿಂತಲೂ ಸುಮ್ಮನಿರುವುದು ಲೇಸೆಂದು ತಾವು ಮಾಡುತಾ ಇದ್ದ ಕಸಬನ್ನೇ ಬಿಡುತಾ ಬಂದು ಬಡವರಾದರು. ಆ ಕಸಬು ಈ ದೇಶದಲ್ಲಿ ನಶಿಸುತಾ ಬಂತು. ಹೀಗೆ ನಾಶ ಹೊಂದಿದ ಕಸಬುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ನಮೂದಿಸಿದ್ದೇನೆ.

೧ ಜಾಡಿ ಮಾಡುವುದು

ಜಾಡಿ ಎಂದರೆ ತುಪಟನಲ್ಲಿ ಆಗುವ ಕಂಬಳಿ ಮೊದಲಾದ ಒಟ್ಟಿಗಳಲ್ಲಿ ಒಂದು ಪ್ರಭೇದ. ಯೂರೋಪು ದೇಶಗಳಿಂದ ಬರುವ ಬುರ್ನೀಸೆಂದು ಈ ದೇಶದವರು ಕರೆಯ ತಕ್ಕ ಕಂಬಳಿಗಳ ಹಾಗೆ ಜಾಡಿಗಳು ಬರುತ್ತಿದ್ದುವು. ಅಗಲ ಮೋಳದಲ್ಲಿಯೂ ಬಾಳಿಕೆ ಯಲ್ಲಿಯೂ ಇವು ಬುರ್ನೀಸಿಗಿಂತಲೂ ಮೇಲ್ತರವಾದ್ದುವು. ಆದರೆ ಒರಟುತನದಲ್ಲಿ ಸ್ವಲ್ಪ ಹೆಚ್ಚು. ಮೂರುನಾಲ್ಕು ತಲೆಗಳವರೆಗೂ ಇವುಗಳನ್ನು ಉಪಯೋಗಿಸಿದರೂ ಹರಿಯುತಿರಲಿಲ್ಲ. ಹಳೆಯದಾದ ಹಾಗೆ ಒರಟುತನ ಕಡಮೆಯಾಗುತ್ತಿತ್ತು. ಬಗೆ ಬಗೆಯ ಬಣ್ಣದ್ದು ತಯಾರಾಗುತ್ತಿತ್ತು. ಪಾಶ್ಚಾತ್ಯರು ಬುರ್ನೀಸನ್ನು ಇಲ್ಲಿಗೆ ತಂದಾಗಿ ನಿಂದ ಜಾಡಿಯ ತಯಾರಿಯು ಈ ಸೀಮೆಯಲ್ಲಿ ನಿಂತು ಹೋಯಿತು. ಆ ಕೈಗೆ ಭಿಕ್ಷಾ ಪಾತ್ರೆ ಬಂತು.

೨ ಭಾಗಡೋರು ಹಗ್ಗ ಮಾಡುವುದು

ಇದು ನೂಲಿನಲ್ಲಿ ಮಾಡಿದ ಹಗ್ಗವಾಗಿದೆ. ನೂಲಿನಲ್ಲಿ ಮಾಡಿದ ದಾರಗಳನೇಕ ವನ್ನು ಸೇರಿಸಿ ಹುರಿಯನ್ನು ಮೂರು, ನಾಲ್ಕು, ಆರು, ಈ ಮೇರೆಗೆ ಸೇರಿಸಿ ಹೊಡೆದು ಕೂಡಿಸಿ, ಕೈ ತಿರುಗಳಿಯಿಂದ ದಪ್ಪಹಗ್ಗವನ್ನು ಮಾಡುತಿದ್ದರು. ಇದನ್ನು ಮಾಡತಕ್ಕವರಿಗೆ ಪಿಂಜಾರರೆಂದು ಹೆಸರು. ಈ ಹಗ್ಗ ಬಹಳ ಗಟ್ಟಿ. ಈಗ ಇದು ಯಂತ್ರದಲ್ಲಿ ತಯಾರಾಗಿ ಅಗ್ಗವಾಗಿ ಮಾಡುವ ಕಾರಣ, ಈ ಕಸಬು ಮುಗ್ಗರಿಗೆ ಬಂತು.

೩ ಕಲಾಬತ್ತು ಮಾಡುವುದು

ಬಹು ದಿವಸಗಳಿಗೆ ಮುಂಚೆ ಮೈಸೂರಿನಲ್ಲಿ ಕಲಾಬತ್ತು ತಯಾರಾಗುತಿತ್ತು. ಬೆಂಗಳೂರು ಪಟ್ಟೇಗಾರರೂ ಸಹ ತಯಾರ್ಮಾಡುತಿದ್ದರು. ಫ್ರಾನ್ಸು ದೇಶದಿಂದ ವಿಧವಿಧವಾದ ಕಲಾಬತ್ತು ತಯಾರಾಗಿ ಬಂದು ಅಗ್ಗವಾಗಿ ಮಾರುವ ಕಾರಣ ಆ ಕಸಬಿನವರು ನಾಶವಾದರು.

೪ ಮಣ್ಣುಪ್ಪು ಮಾಡುವುದು

ಇಂಗ್ಲಿಷಿನವರು ಸುಮಾರು ೨೫ ಲಕ್ಷ ರೂಪಾಯಿ ಬಾಳುವ ಸಮುದ್ರದ ಉಪ್ಪನ್ನು ಪ್ರತಿವರ್ಷವೂ ಈ ಸೀಮೆಗೆ ತಂದು ಬಿಕರಿ ಮಾಡುವರು. ಇದನ್ನು ಅಗ್ಗವಾಗಿಯೂ ಮಾರುವರು. ಪೂರ್ವದಲ್ಲಿ ಮಣ್ಣುಪ್ಪು ಮಾಡುತಾ ಇದ್ದ ಉಪ್ಪಾರರೆಲ್ಲಾ ಖಿಲವಾಗಿ ಹೋದರು.

೫ ಚೀಟಿ ಬಟ್ಟೆಗಳನ್ನು ಮಾಡುವುದು

ಸಾಧಾರಣ ಬಿಳಿಯ ಬಟ್ಟೆ ಅಥವಾ ಕರಿಯ ಬಟ್ಟೆಯನ್ನು ತಂದು ಅದಕ್ಕೆ ಬೂಟಿ ಮುಂತಾದ ಹೂಗಳನ್ನು ಚಿತ್ರಗಳನ್ನೂ ಅಚ್ಚು ಹಾಕಿ ಚೀಟಿಗಳನ್ನೂ ಮಾಡುತಿದ್ದರು. ಶ್ರೀರಂಗಪಟ್ಟಣದ ಬಳಿ ಇರುವ ಗಂಜಾಮದಲ್ಲಿ, ಮೈಸೂರು ಷಹರಿನಲ್ಲಿ, ಬೆಂಗಳೂರಲ್ಲಿ, ಈ ಚೀಟಿಗಳು ಬಹಳ ತಯಾರಾಗುತಿದ್ದವು. ಗಂಜಾಮದ ಚೀಟಿಯು ಗಟ್ಟಿಬಣ್ಣಕ್ಕೆ ಪ್ರಖ್ಯಾತವಾದ್ದಾಗಿತ್ತು. ಈಗ ವಿಧವಿಧವಾದ ಚೀಟಿಗಳು ಯೂರೋಪಿನಿಂದ ಬಂದು ಅಗ್ಗವಾಗಿವೆಯಾಗಿ, ಇಂಥ ಚೀಟಿ ಮಾಡುತಾ ಇದ್ದವರ ಮಕ್ಕಳು ಆ ಕಸಬಿನ ಗುಟ್ಟನ್ನೇ ಅರಿಯದವರಾದರು.

೬ ಕಾಗದ ಮಾಡುವುದು

ಮೈಸೂರು ದೇಶದಲ್ಲಿ ಒಳ್ಳೆಯ ಬಾಳಿಕೆ ಬರುವ ಕಾಗದ ತಯಾರಾಗುತಿದ್ದ ಅಂಶವು ಅನೇಕರಿಗೆ ಗೊತ್ತೇ ಇದೆ. ಕರಡೆಕಾಗದ ಭಾಷಿಕಾಗದ ಎಂದು ಎರಡು ಬಗೆಯಾಗಿತ್ತು. ಭಾಷಿ ಕಾಗದದ ಮೇಲೆ ಹೈದರಲ್ಲಿಖಾನ್ ಟಿಪ್ಪುಸುಲ್ತಾನ್ ಇವರುಗಳು ಬರೆಸಿದ ಸನ್ನದುಗಳು ಈಗಲೂ ಇವೆ. ಇವುಗಳನ್ನು ನುಸಿ ಹೊಡೆಯುವುದಿಲ್ಲ. ಶ್ರೀರಂಗಪಟ್ಟಣದ ಗಂಜಾಮು, ಬೆಂಗಳೂರು, ನೆಲಮಂಗಲ, ಕೇಮಗೊಂಡಲು, ಚಳ್ಳಕೆರೆ ತಾಲ್ಲೂಕು ತಳಕು, ದೊಡ್ಡೇರಿ, ತುಮಕೂರು ಮೊದಲಾದ ಸ್ಥಳಗಳಲ್ಲಿ ಕರಡೆಕಾಗದ ಹೆಚ್ಚಾಗಿ ತಯಾರಾಗುತಿತ್ತು. ಈಗ ಶುದ್ಧವಾಗಿ ಈ ಸರಕು ತಯಾರಾಗುವುದು ನಿಂತೇ ಹೋಯಿತು.

೭ ಕಡತ ಮಾಡುವುದು

ಕಡತವೆಂದರೆ ಈಗಿನ ಜನರಿಗೆ ಅರ್ಥವಾಗುವುದಿಲ್ಲ. ತುರಿಗಜ್ಜಿ ಹತ್ತಿದವರಿಗೆ ಮೈ ಕಡತವೆ ಕಡತ. ಕಡತವೆಂಬುದು ಬರವಣಿಗೆಯ ಸಾಮಗ್ರಿಯಾಗಿದೆ. ದಪ್ಪವಾದ ಬಟ್ಟೆಗೆ

ಗೇರು, ಬಳಪದ ಹಿಟ್ಟು, ಮೊದಲಾದ್ದನ್ನು ಹಾಕಿ ತಿಕ್ಕಿ ಹದಮಾಡಿ ಉಮ್ಮತ್ತಿಯ ಸೊಪ್ಪನ್ನು ತಿಕ್ಕಿ ಕಪ್ಪಗೆ ಮಾಡುತಿದ್ದರು. ಇದನ್ನು ಹಾಳೆಗಳಾಗಿ ಮಾಡಿ ಒಂದು ಪುಸ್ತಕದಂತೆ ಮಡಿಸುವ ಹಾಗೆ ಸೇರಿಸಿ ಆ ಕರಿಯ ಹಾಳೆಗಳ ಮೇಲೆ ಬಳಪದಿಂದ ಬರೆಯುತಿದ್ದರು. ಅಂಗಡಿಲೆಕ್ಕ ಮೊದಲಾದ್ದೆಲ್ಲಾ ಈ ಕಡತದ ಮೇಲೆ ಇರುತಿತ್ತು ಕೆಲವು ಸರ್ಕಾರದ ಬರವಣಿಗೆ ಮೊದಲಾದ್ದು ಕೂಡ ಕಡತದ ಮೇಲೆ ಇರುತಿತ್ತು. ಈ ಕಡತ ಮಾಡತಕ್ಕ ಜನರೇ ಬೇರೆ ಇರುತಿದ್ದರು. ಕೆಲವು ದೊಡ್ಡ ಊರುಗಳಲ್ಲಿ ಈ ಕಸಬುದಾರರಿಗೆ ಒಂದೊಂದು ಬೀದಿಯೇ ಇರುತಿತ್ತು. ಈ ವೃತ್ತಿಯು ಈಗ ನಿರ್ಮೂಲವಾಯಿತು.

೮ ಲೇಕಣಿ

ಬರಗಿನ ಕಡ್ಡಿ ಲಾಳದ ಕಡ್ಡಿ ಇವುಗಳ ಜಲ್ಲಿಯಲ್ಲಿ ಲೇಕಣಿಗಳನ್ನು ಕತ್ತರಿಸಿ ಮಾರುತಿದ್ದರು. ಕೆಲವು ಜನರು ಇದನ್ನು ಮಾಡಿ ಮಾರುವುದನ್ನೇ ಒಂದು ಜೀವನವಾಗಿ ಮಾಡಿಕೊಂಡಿದ್ದರು. ಈಗಿನ ಕಾಲದಲ್ಲಿ ಈ ಲೇಕಣಿಗಳನ್ನು ಯಾರೂ ಉಪಯೋಗಿಸುವುದಿಲ್ಲ. ಈ ವೃತ್ತಿ ಹೋಯಿತು.

೯ ಗಾಜಿನ ಸಾಮಾನು

ಎಷ್ಟು ಐಶ್ವರ್ಯವಂತರಾಗಲಿ ಈಗಲೂ ಈ ದೇಶದ ಹೆಂಗಸರು ಗಾಜಿನ ಬಳೆಗಳನ್ನು ತೊಟ್ಟುಕೊಂಡು ಕರಿಮಣಿಯನ್ನು ತಾಳಿಯ ಜೊತೆಗೆ ಪೋಣಿಸಿ ಕಟ್ಟಿಕೊಳ್ಳುವುದನ್ನು ಬಿಟ್ಟಿಲ್ಲ. ನಮ್ಮ ಮೈಸೂರ ಸೀಮೆಯಲ್ಲಿ ಹಲವು ಸ್ಥಳಗಳು ಗಾಜಿನ ಸಾಮಾನುಗಳಿಗೆ ಹೆಸರಾಗಿದ್ದವು. ಗಾಜಿನ ಬಳೆಗಳು, ಸಣ್ಣ ಸೀಸೆ ಅಥವಾ ಕುಪ್ಪಿಗೆಗಳು, ಕರಿಮಣಿ ಮೊದಲಾದ ಸಾಮಾನು ಇವುಗಳನ್ನು ತಯಾರ್ಮಾಡಿ ಈ ಸೀಮೆಯಲ್ಲಿಯೂ ಹಿಂದುಸ್ಥಾನದ ಇತರ ಸ್ಥಳಗಳಲ್ಲಿಯೂ ಮಾಡುತಿದ್ದರು. ಹೊಸದುರ್ಗದ ತಾಲ್ಲೂಕು ಅನಿವಾಳ, ಮತ್ತೋಡು, ಬಾಗೆಪಲ್ಲಿ ತಾಲ್ಲೂಕು ಜೂಲಪಾಳ್ಯ, ಹೊಸಹಳ್ಳಿ, ಸಿಡಿಲಘಟ್ಟದ ತಾಲ್ಲೂಕಿಗೆ ಸೇರಿದ ಕೆಲವು ಗ್ರಾಮಗಳು, ಯಳಂದೂರು, ತುಮಕೂರು ಡಿಸ್ಟ್ರಿಕ್ಟಿನ ಕೆಲವು ಗ್ರಾಮಗಳು, ಈ ಸ್ಥಳಗಳಲ್ಲಿ ಮೇಲೆ ಕಂಡ ಗಾಜಿನ ಸಾಮಾನು ತಯಾರಾಗುತಿದ್ದವು. ಈಗ ಬೊಂಬಾಯಿ ಬಳೆ ಎಂಬುದು ವಿಶೇಷವಾಗಿ ಹರಡಿಕೊಂಡ ಕಾರಣ ಈ ಕೈಗಾರಿಕೆಯು ಶುದ್ಧವಾಗಿ ಹಾಳಾಗುತಾ ಬಂತು.

೧೦ ಕಸಕಸೆ, ಅಫೀಮು

ಕಸಕಸೆಯು ಒಂದು ಆಹಾರದ ದಿನಸು. ಇದರ ಸಾಗುವಳಿಯನ್ನು ಕೋಲಾರ, ಚಿಕ್ಕಬಳ್ಳಾಪುರ, ಶ್ರೀನಿವಾಸಪುರ, ಸಿಡಿಲಘಟ್ಟ, ಚಿಂತಾಮಣಿ ಈ ಮೊದಲಾದ ಪೂರ್ವ ಪ್ರಾಂತಗಳಲ್ಲಿ ವಿಶೇಷವಾಗಿ ಮಾಡುತಿದ್ದರು. ಕಸಕಸೆಯು ಆಹಾರಕ್ಕೂ ಔಷಧಗಳಿಗೂ ಉಪಯೋಗವಾಗುವುದಂತೂ ಸರಿಯಷ್ಟೆ? ಈ ಗಿಡದಿಂದ ಅಫೀಮನ್ನು ತೆಗೆದು ಮಾರು

ತಿದ್ದರು. ಇದರಿಂದ ಸರ್ಕಾರಕ್ಕೂ ರೈತರಿಗೂ ಬಹಳ ಆದಾಯವಿತ್ತು. ಈಗ ಈ ಕಸಕಸೆ ಸಾಗುವಳಿ ಮತ್ತು ಅಫೀಂ ತೆಗೆಯುವುದು ಸಹ ಪೂರ್ತಿಯಾಗಿ ನಿಂತು ಹೋಯಿತು. ಸಂಬಂಧಪಟ್ಟ ಜನರು ಕೆಟ್ಟುಹೋದರು.

೧೧ ಅರಗಿನ ಬಳೆ

ಗಾಜಿನ ಬಳೆಯ ಜೊತೆಗೆ ಹೆಂಗಸರು ಅರಗಿನಲ್ಲಿ ಮಾಡಿದ ಬಳೆಯನ್ನು ತೊಟ್ಟು ಕೊಳ್ಳುವ ವಾಡಿಕೆಯುಂಟು. ಅವುಗಳನ್ನು ನಮೂನೆಯಾಗಿ ಮಾಡಿ ಮಾರುತಿದ್ದರು. ಈಚೆಗೆ ಜರ್ಮನಿ ಮೊದಲಾದ ದೇಶಗಳಲ್ಲಿ ಗಾಜಿನಲ್ಲಿಯೇ ರತ್ನದ ಬಳೆಗಳೋ ಎನ್ನುವ ಹಾಗೆ ವಿಚಿತ್ರವಾಗಿ ಮಾಡಿದ ಬಳೆಗಳು ಹರಿದ ಕಾರಣ ಅರಗಿನ ಬಳೆಯ ವೃತ್ತಿಯು ಬಲವಾಯಿತು.

೧೨ ಕಸೂತಿ ಕೆಲಸ

ಸೀರೆಗಳ ಸೆರಗು ಅಂಚು ಮತ್ತು ರವಿಕೆಗಳ ತೋಳು ಮೊದಲಾದ ಬಟ್ಟೆಗಳಿಗೆ ಬಗೆ ಬಗೆಯ ಚಿತ್ರಗಳನ್ನು ಕಸೂತಿ ಹಾಕುತಿದ್ದರು. ಕಸೂತಿ ಹಾಕುವುದನ್ನೇ ಒಂದು ವೃತ್ತಿ ಯಾಗಿ ಮಾಡಿಕೊಂಡು ಹಲವು ಜನರು ಜೀವಿಸುತಿದ್ದರು. ಇದೂ ಅಲ್ಲದೆ ಕಸೂತಿ ಯಲ್ಲಿ ಜನರ ಭಾವಚಿತ್ರಗಳನ್ನು ಹಾಕುತಿದ್ದರು. ಈ ಕೆಲಸವು ಈಗ ನಿರ್ನಾಮ ವಾಯಿತು.

೧೩ ಬಟ್ಟೆಗಳಿಗೆ ರಂಗು ಹಾಕುವುದು

ಪೂರ್ವದಲ್ಲಿ ಬಿಳಿಯ ಬಟ್ಟೆಗಳಿಗೆ ವಿಧವಿಧವಾದ ರಂಗನ್ನು ಹಾಕುತಿದ್ದರು. ಈ ರಂಗು ಎಷ್ಟು ದಿನವಾದರೂ ಹೋಗದೆ ಗಟ್ಟಿಬಣ್ಣವಾಗಿರುತಿತ್ತು. ಈ ಕೆಲಸದವರಿಗೆ ರಂಗಾರೆಯವರೆಂದು ಹೆಸರು. ಯೂರೋಪು ದೇಶದ ರಂಗಿನ ಬಟ್ಟೆಗಳು ಹರಿದ ಮೇಲೆ ರಂಗಾರೆಯವರೆಲ್ಲಾ ನಾಶವಾದರು.

೧೪ ಪಟ್ಟೆ, ಪಂಚಾಂಗರಾಯ

ದೇವಸ್ಥಾನಗಳಲ್ಲಿ ನಡೆಯುವ ತೇರು, ದೊಡ್ಡ ಉತ್ಸವಗಳು, ಕೊಠಾರಗಳ ಚಪ್ಪರ ಗಳು, ಪುಣ್ಯವಂತರ ಮನೆಯಲ್ಲಿ ಶುಭಕಾರ್ಯಗಳಿಗಾಗಿ ಹಾಕುವ ಚಪ್ಪರಗಳು ಇವುಗಳಿಗೆ ಮೇಲ್ಕಟ್ಟನ್ನು ಕಟ್ಟಿ ಬಟ್ಟೆಗಳ ಮೇಲೆ ಚಿತ್ರವಾಗಿ ಬಣ್ಣವನ್ನು ಬರೆದು ಬೇಗಡೆಯನ್ನು ಅಂಟಿಸಿ ಲಕ್ಷಣವಾಗಿ ಮಾಡುತಿದ್ದರು. ಹೀಗೆ ಪಟ್ಟೆ ಪಂಚಾಂಗರಾಯನೆಂಬ ಸಾಮಾನು ಗಳನ್ನು ಮಾಡುತಿದ್ದರು. ಈ ವೃತ್ತಿಯವರಿಗೆ ಜೀನಗಾರರೆಂದು ಹೆಸರು. ಈ ಸಾಮಾನಿನ ಹೆಸರನ್ನು ಕೇಳಿದ ರಾಯರುಗಳೆಲ್ಲಾ ನಗಬಹುದು. ಚಪ್ಪರಗಳಿಗೂ ಗೋಡೆಗಳಿಗೂ ಶೃಂಗಾರ ಮಾಡಲು ಈಚೆಗೆ ಇಂಗ್ಲಿಷರ ಕಾಲದಲ್ಲಿ ಕಾಡುಸೊಪ್ಪು ತೀಡುಸೊಪ್ಪುಗಳಿಗೆ ಪ್ರಾಬಲ್ಯ ಬಂತು. ಜೀನಗಾರರ ಸೆಲೆಯೇ ಇಲ್ಲದ ಹಾಗಾಯಿತು.

೧೫ ಚಿನ್ನ, ಬೆಳ್ಳಿ, ರೇಕು

ಈ ರೇಕುಗಳನ್ನು ಮಾಡಲು ಬೇರೆ ಜನರು ಇರುತಿದ್ದರು. ಈ ವೃತ್ತಿಯವರು ಯಾವಾಗಲೂ ಪುಣ್ಯವಂತರಾಗಿಯೇ ಬದುಕುತಿದ್ದರು. ಈಗ ಈ ವೃತ್ತಿ ನಾಮ ಮಾತ್ರದ್ದಾಯಿತು.

೧೬ ಗೇರಗೂಡೆಗಳು, ಮೊರಗಳು

ಬಿದಿರ ಗೂಡೆಗಳು ಮೊರಗಳು ಇವುಗಳಿಗೆ ಗೇರೆಕಿಟ್ಟವನ್ನು ಹಾಕಿ ಗಟ್ಟಿ ಮಾಡಿ ತರುವಾಯ ಮೇಲೂ ಒಳಗೂ ನಯವಾಗಿರುವಂತೆ ಅಂದವಾದ ಕೆಲಸವನ್ನು ಮಾಡುತಿದ್ದರು. ಚನ್ನಪಟ್ಟಣ, ಮಳೂರು ಮೊದಲಾದ ಸ್ಥಳಗಳಲ್ಲಿ ಇವುಗಳನ್ನು ತಯಾರ್ಮಾಡುತಿದ್ದರು. ಇದರಲ್ಲಿ ನೀರು ಹಾಕಿದರೆ ಸೋರುತಿರಲಿಲ್ಲ. ಕಿಲಬುವ ಪದಾರ್ಥಗಳನ್ನು ಈ ಗೇರಪಾತ್ರೆಗಳಲ್ಲಿ ಹಾಕಿದರೆ ಅದು ಕಿಲುಬುತಿರಲಿಲ್ಲ. ಈ ಗೇರ ಸಾಮಾನುಗಳು ತಲೆ ತಲಾಂತರಕ್ಕೂ ಇದ್ದು ಬಾಳಿಕೆ ಬರುತಿದ್ದವು. ಇವುಗಳ ಕ್ರಯವೂ ಸುಲಭವಾಗಿಯೇ ಇರುತಿತ್ತು. ಈ ವೃತ್ತಿ ಈಗ ಗುರುತೇ ಇಲ್ಲದ ಹಾಗಾಯಿತು.

೧೭ ಕಲ್ಲಿನ ವಿಗ್ರಹಗಳನ್ನು ಮಾಡುವುದು

ಮೈಸೂರ ಸೀಮೆಯಲ್ಲಿ ಕಲ್ಲಿನ ವಿಗ್ರಹಗಳನ್ನು ಬಹು ಸುಂದರವಾಗಿರುವಂತೆ ತಯಾರ್ಮಾಡತಕ್ಕ ಕಾರೇಗಾರರು ವಿಶೇಷವಾಗಿದ್ದರೆಂಬುದಕ್ಕೆ ಹಳೆಯಬೀಡು, ಸೋಮನಾಥಪುರ, ಬೇಲೂರು ಮೊದಲಾದ ಸ್ಥಳಗಳ ದೇವಸ್ಥಾನಗಳೇ ಸಾಕ್ಷಿಯಾಗಿವೆ. ಈ ಜನರೆಲ್ಲಾ ಈಚೆಗೆ ಜೀವನಕ್ಕಿಲ್ಲದೆ ಸತ್ತು ಕೆಟ್ಟು ಹೋದರು. ಮಾಲೂರು ತಾಲ್ಲೂಕು ಶಿವಾರಪಟ್ಟಣವೆಂಬ ಗ್ರಾಮದಲ್ಲಿ ಮಾತ್ರ ಒಂದೆರಡು ಮನೆಗಳು ಹತ್ತಿಕೊಂಡಿವೆ.

೧೮ ಹೊಂಬಳ, ದವಣ

ಹೊಂಬಳವೆಂದರೆ ಕಬ್ಬಿಣದ ಅದುರನ್ನು ತಂದು ಅದನ್ನು ಕರಗಿಸಿ ಕಬ್ಬಿಣದ ಮುದ್ದೆಯನ್ನು ತೆಗೆಯುತಿದ್ದ ಕುಲುಮೆಗೆ ಹೆಸರು. ಆ ಮುದ್ದೆಯನ್ನು ಸಾಮಾನುಗಳಾಗಿ ಮಾಡುವ ಕುಲುಮೆಗೆ ದವಣವೆಂದು ಹೇಳುವರು. ಚಿತ್ರದುರ್ಗ, ತುಮಕೂರು, ಕಡೂರು—ಈ ಡಿಸ್ಟ್ರಿಕ್ಟಗಳಲ್ಲಿಯೂ ಮಳವಳ್ಳಿ ತಾಲ್ಲೂಕಿನಲ್ಲಿಯೂ ವಿಶೇಷವಾಗಿ ಕಬ್ಬಿಣದ ಅದುರು ಸಿಕ್ಕುತಿತ್ತು. ಅದನ್ನು ತಂದು ಜನರು ಹೊಂಬಳದಲ್ಲಿ ಕರಗಿಸಿ ಕಬ್ಬಿಣವನ್ನು ತೆಗೆಯುತ್ತಿದ್ದರು. ಸೀಮೆಯ ಕಬ್ಬಿಣವು ಇಲ್ಲಿಗೆ ವಿಶೇಷವಾಗಿ ಬಂದಾಗಿನಿಂದ ಹೊಂಬಳದ ಮತ್ತು ದವಣದ ಕಸಬು ನಿಂತುಹೋಯಿತು. ಕಬ್ಬಿಣದಿಂದ ಉಕ್ಕನ್ನೂ ಮಾಡುತ್ತಿದ್ದರು. ಈ ಕಸಬು ಈಗ ನಡೆಯುವುದಿಲ್ಲ.

೧೯ ಅತ್ತರ್

ಮೈಸೂರಲ್ಲಿಯೂ ಬೆಂಗಳೂರಲ್ಲಿಯೂ ಒಳ್ಳೆಯ ಹೂವುಗಳಿಂದಲೂ ಇತರ ವಾಸನಾದ್ರವ್ಯಗಳಿಂದಲೂ ಅತ್ತರುಗಳನ್ನು ಬಟ್ಟಿಯಲ್ಲಿ ಇಳಿಸುತ್ತಿದ್ದರು. ಈಗ ಬಗೆ ಬಗೆಯ ವಾಸನೆಯುಳ್ಳ ಪದಾರ್ಥಗಳು ಯೂರೋಪು ಖಂಡದ ದೇಶಗಳಿಂದ ಬಂದು ಇಲ್ಲಿ ಅಗ್ಗವಾಗಿ ಮಾರಾಟವಾಗುವ ಕಾರಣ, ಮೈಸೂರು ಸೀಮೆಯ ಅತ್ತಾರಿಗಳೆಲ್ಲಾ ಮೂಲೆಗೆ ಬಿದ್ದರು.

೨೦ ಬಣ್ಣಗಳು

ಬಣ್ಣಗಳನ್ನು ಮೊದಲಿನಿಂದಲೂ ಈ ಸೀಮೆಯಲ್ಲಿ ಮಾಡುತಿದ್ದ ಬಣ್ಣಗಾರರು ತಕ್ಕ ಸರಕುಗಳನ್ನು ಬೆರೆಯಿಸಿ ಬಣ್ಣಗಳನ್ನು ಮಾಡುತಿದ್ದರು. ಈಗ ಪಾಶ್ಚಾತ್ಯರು ತಯಾರಾದ ಬಣ್ಣಗಳನ್ನು ತಂದು ಸುಲಭವಾಗಿ ಮಾರುವ ಕಾರಣ ಈ ಬಣ್ಣಗಾರರೆಲ್ಲಾ ಮೂಲೆಗೆ ಬಿದ್ದರು.

೨೧ ಕಬ್ಬಿಣದ ಸಾಮಾನು

ಚೂರಿ, ಕತ್ತರಿ, ಹಾರೆ, ಗುದ್ದಲಿ, ಗರಗಸ, ಉಳಿ, ಹತ್ತರಿ, ಸಲಾಕಿ, ತಂತಿ, ಕತ್ತಿ, ಕಠಾರಿ, ಬಂದೂಕು, ಮೊಳೆಗಳು, ಚಿಲಕ, ಕೊಂಡಿ, ಸರಪಣಿ, ಕಾವಲಿ, ಬಾಣಲೆ ಮುಂತಾದ ಸಾಮಾನುಗಳೆಲ್ಲಾ ಇಂಗ್ಲೆಂಡಿನಲ್ಲಿ ತಯಾರಾಗಿ ಇಲ್ಲಿಗೆ ಬಂದು ಸುಲಭ ಕ್ರಯಕ್ಕೆ ದೊರೆಯುವುದರಿಂದ ಈ ಕಬ್ಬಿಣ ಕೆಲಸದವರೆಲ್ಲಾ ನೆಲವನ್ನು ಕಚ್ಚಿದರು.

೨೨ ಪೆಟ್ಟಿಗೆಗಳು

ಕಬ್ಬಿಣದ ಪೆಟ್ಟಿಗೆಗಳು ಸೀಮೆಯಿಂದ ವಿಶೇಷವಾಗಿ ಈ ಸೀಮೆಗೆ ಬರುವ ಕಾರಣ ಮರದ ಪೆಟಾರಿಗಳನ್ನು ಮಾಡುತಿದ್ದದ್ದು ಕಡಿಮೆಯಾಯಿತು.

೨೩ ಔಷಧಗಳು ವೈದ್ಯರು

ಇಂಗ್ಲಿಷ್ ವೈದ್ಯರು ಹೆಚ್ಚಾಗುತಾ ಕರ್ಣಾಟಕ ವೈದ್ಯರನ್ನು ಅಲಗೆಳೆಯುತಾ ಬಂದ ಕಾರಣ, ಈ ದೇಶದ ಚಿಕಿತ್ಸಕರಿಗೆ ಜೀವನ ಶುದ್ಧವಾಗಿ ಹೋಯಿತು.

೨೪ ಕೊಡೆಗಳು

ಈ ಸೀಮೆಯಲ್ಲಿ ಎಡತೊರೆ ತಾಲ್ಲೂಕು ರಾಮನಾಥಪುರ ಮೊದಲಾದ ಪ್ರಾಂತ ದಲ್ಲಿ ಬಾಳೆಪಟ್ಟೆಯ ನಾರು ಮೊದಲಾದ್ದರಿಂದ ಕೊಡೆಗಳನ್ನು ಮಾಡಿ ಮಾರುತಿದ್ದರು. ಕೆಲವು ಜನರಿಗೆ ಇದೇ ಜೀವನವಾಗಿತ್ತು. ಈ ಕೊಡೆಗಳು ೫೦–೬೦ವರುಷಗಳವರೆಗೂ ಬಾಳಿಕೆ ಬರುತಿದ್ದವು. ವರುಷಕ್ಕೆ ಒಂದು ಸಾರಿ ಮುರಿದುಹೋಗುವ ಬಟ್ಟೆಯ ಛತ್ರಿಗಳು ಸೀಮೆಯಿಂದ ಬಂದಾರಭ್ಯ ಕೊಡೆ ಮಾಡತಕ್ಕ ವೃತ್ತಿ ಹೋಯಿತು.

ಎಂ. ಎಸ್. ಪುಟ್ಟಣ್ಣನವರು ಕನ್ನಡ ಭಾಷೆ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸಿದ ಹಿರಿಯರು, ಕಾದಂಬರಿಕಾರರು. ಕನ್ನಡದ ಪ್ರಥಮ ಜೀವನ ಚರಿತ್ರೆ ಎಂದು ಹೆಸರುಗೊಂಡಿರುವ ಕುಣಿಗಲ್ ರಾಮಶಾಸ್ತ್ರಿಗಳ ಚರಿತ್ರೆಯ (1908) ಕರ್ತೃ. .... ಉಪಾಧ್ಯಾಯ ವೃತ್ತಿಯಲ್ಲಿದ್ದಾಗಲೇ ಲೇಖನ ಚಟುವಟಿಕೆಯನ್ನು ಆರಂಭಿಸಿ ಶಾಲಾ ಪಠ್ಯಪುಸ್ತಕಗಳನ್ನು ರಚಿಸಿದ್ದರಲ್ಲದೆ, ಮಕ್ಕಳಿಗಾಗಿ ನೀತಿ ಚಿಂತಾಮಣಿ ಎಂಬ ಪುಸ್ತಕವನ್ನು ಮೂರು ಭಾಗಗಳಾಗಿ ಪ್ರಕಟಿಸಿದರು. .... ಪುಟ್ಟಣ್ಣನವರಿಗಿದ್ದ ಇತಿಹಾಸ ಪ್ರಜ್ಞೆಗೆ ಇವರು ರಚಿಸಿರುವ ಇಕ್ಕೇರಿ ಸಂಸ್ಥಾನದ ಚರಿತ್ರೆ, ಚಿತ್ರದುರ್ಗದ ಪಾಳೆಯಗಾರರು, ಹಿಂದೂ ಚರಿತ್ರದ ಪಠಣ, ಭಾಗ 1, 2 ಈ ಮುಂತಾದ ಕೃತಿಗಳು ಸಾಕ್ಷಿಯಾಗಿವೆ..........ಇವರ ಕೃತಿಗಳು ಜನಜೀವನದ ಸಜೀವಚಿತ್ರಣಕ್ಕೂ ಹೊಸಗನ್ನಡದ ದೇಸಿನಿಷ್ಠ ಶೈಲಿಗೂ ಮಾದರಿಯಾಗಿವೆ.

(ವಿಷಯ ವಿಶ್ವಕೋಶದ 'ಕರ್ನಾಟಕ'
ಸಂಪುಟದಿಂದ ಉದ್ಧೃತ)

ಜ್ಯೋತಿ ಬಾಯಿ

ಮೈಸೂರು ನಗರದ ಕೋಟೆ ಬಿಸಿಲು ಮಾರಮ್ಮ

ಭಾರತದಲ್ಲಿ ಅನಾದಿ ಕಾಲದಿಂದಲೂ ಹೆಣ್ಣು ದೇವತೆಗಳನ್ನು ಸೃಷ್ಟಿಸ್ವರೂಪಿಣಿ ಎಂಬ ಮಾತೃಭಾವನೆಯಿಂದಲೂ ಪ್ರಕೃತಿಯ ನಿಯಾಮಕಳೆಂದೂ ಪೂಜಿಸುತ್ತಿರುವುದು ಸ್ವಾಭಾವಿಕವಾದುದು. ಭಾರತದ ಸಂಸ್ಕೃತಿಯು ನೆಲೆಯೂರಿ ನಿಂತ ಕರ್ಣಾಟಕದಲ್ಲಂತೂ ದೇವಿಯರ ಕ್ಷೇತ್ರಗಳಿಗೂ ಅಲ್ಲಿಗೆ ಬರುವ ಯಾತ್ರಿಕರಿಗೂ ಲೆಕ್ಕವೇ ಇಲ್ಲವಾಗಿದೆ. ಉದಾಹರಣೆಗೆ, ಕೊಲ್ಲೂರಿನ ಮೂಕಾಂಬಿಕೆ, ಶೃಂಗೇರಿಯ ಶಾರದಾಂಬೆ, ಕಳಸದ ಅನ್ನಪೂರ್ಣೇಶ್ವರಿ ಮಹಾಬಲಾದ್ರಿಯ ಚಾಮುಂಡೇಶ್ವರಿ–ಈ ದೇವಾಲಯಗಳು ಇಂದಿಗೂ ಪ್ರಮುಖ ಯಾತ್ರಾಸ್ಥಳವಾಗಿವೆ. ಜಾನಪದದಲ್ಲಿ ಈ ದೇವಿಯರನ್ನು ದುರ್ಗಿ, ಮಾರಮ್ಮ, ದೊಡ್ಡಮ್ಮ, ಚಿಕ್ಕಮ್ಮ' ಎಲ್ಲಮ್ಮ, ಕಾಳಮ್ಮ, ಗಂಗಮ್ಮ ಮಸಣಮ್ಮ ಎಂಬ ಅನೇಕ ಹೆಸರುಗಳಿಂದ ಪೂಜಿಸುತ್ತಾರೆ. ಈ ದೇವತೆಗಳಿಗಾಗಿ ಕಟ್ಟಿರುವ ದೇವಾಲಯಗಳು ಶಿಲ್ಪದ ದೃಷ್ಟಿಯಿಂದ ತೀರ ಸಾಮಾನ್ಯವಾದರೂ ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಜನರನ್ನು ನಿಯಂತ್ರಿಸಿ ರಕ್ಷಿಸಿವೆ. ಈ ದೇವತೆಗಳ ದೇಗುಲಗಳು ಮುಗ್ಧ ಜನಪದದ ಭಯಭೀತಿ ಅಸಹಾಯಕತೆ ಉದ್ವೇಗಗಳನ್ನು ನಿವಾರಿಸುವ ಶಾಂತಿಧಾಮಗಳಾಗಿವೆ.

ಮಾರಮ್ಮನ ದೇಗುಲದ ಅಸ್ತಿತ್ವದ ದಂತಕತೆಗಳು ಎಲ್ಲರಿಗೂ ತಿಳಿದದ್ದೇ ಆಗಿದೆ— ಒಂದು ಗ್ರಾಮದಲ್ಲಿ ವೇದ ಮಂತ್ರಗಳು ಶಿಷ್ಯರಿಗೆ ಸತತವಾಗಿ ಹೇಳಿಕೊಡುತ್ತಿದ್ದ ಒಬ್ಬ ಬ್ರಾಹ್ಮಣನಿಗೆ ಏಕೈಕ ಪುತ್ರಿ ಇದ್ದು ಆಕೆ ಚೆಲುವೆಯೂ ಆಗಿದ್ದಳು. ಅವರ ಮನೆಯ ಮುಂದೆ ಕಸ ಗುಡಿಸಲು ಬರುತ್ತಿದ್ದವನಿಗೆ ಆ ಮನೆಯಲ್ಲಿದ್ದ ಚೆಲುವೆಯ ಮೇಲೆ ಮನಸ್ಸಾಗಿ ಆವಳನ್ನು ಮದುವೆಯಾಗಲು ಅವನ ಮನವೊಂದು ಹಾದಿ ಹುಡುಕಿತು. ಅಂತೆಯೇ ಅವನು ಕಾಶಿಗೆ ಹೋಗಿ ವೇದಗಳನ್ನು, ಬೇರೊಂದು ಗ್ರಾಮಕ್ಕೆ ತೆರಳಿ ಕೆಲವು ಶ್ಲೋಕಗಳನ್ನು ಅಭ್ಯಾಸಿಸಿ ಒಬ್ಬ ಮೂಕ ವಿಧವಾ ತಾಯಿಯೊಡನೆ ಈ ಬ್ರಾಹ್ಮಣರ ಮನೆಗೆ ಬಂದು, ಆತನ ಮಗಳನ್ನು ಮದುವೆಯಾಗುವುದರಲ್ಲಿ ಯಶಸ್ವಿಯಾದನು. ಆದರೆ ಆತನು ತನ್ನ ವೃತ್ತಿಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕಾಲಕ್ರಮದಲ್ಲಿ ಆ ಬ್ರಾಹ್ಮಣ ಯುವತಿಯು ಎರಡು ಮಕ್ಕಳನ್ನು ಪಡೆಯುತ್ತಾಳೆ. ಒಮ್ಮೆ ಆ ಗಂಡು

ಮಕ್ಕಳು ತಂದೆಗೆ ತಿಳಿಯದಂತೆ ತಂದೆಯನ್ನು ಹಿಂಬಾಲಿಸಿ ಕೆಲವು ಹಳೇ ಚಪ್ಪಲಿ ತುಂಡುಗಳನ್ನು ತೆಗೆದುಕೊಂಡು ಮನೆಗೆ ಬಂದಾಗ ತಾಯಿಯು ಮಕ್ಕಳಿಂದ ವಿವರಗಳನ್ನು ತಿಳಿದು ಗಂಡ ಬಂದ ಕೂಡಲೇ ತನಗಾಗಿರುವ ಮೋಸವನ್ನು ಅವನಿಂದ ಖಚಿತಪಡಿಸಿಕೊಂಡ ಮೇಲೆ ಗಂಡನನ್ನು ಕುರಿತು ಇಂದಿನಿಂದ "ನನಗೆ ಶತ್ರು" ಎಂದು ಅರಿತುಕೊ ಎಂದು ಹೇಳಿ ನಿನ್ನನ್ನು ಕೋಣದ ರೂಪದಲ್ಲೂ ನಿನ್ನ ಮಕ್ಕಳನ್ನು ಹುಂಜ ಹೋತಗಳ ರೂಪದಲ್ಲೂ ನನಗೆ ಜನ ಬಲಿ ಕೊಡಲಿ ಎಂದು ಶಪಿಸುತ್ತಾಳೆ. ಅಗ್ನಿಕುಂಡಕ್ಕೆ ಹಾರುತ್ತಾಳೆ. ಇದನ್ನು ಕಂಡ ಆ ಜನಾಂಗ ಅವಳಿಂದ ಯಾವ ತೊಂದರೆಯೂ ತಮಗೆ ಸೋಂಕದಿರಲೆಂದು ಅವಳನ್ನೇ ಪೂಜಿಸಲು ಪ್ರಾರಂಭಿಸುತ್ತಾರೆ.

ಮತ್ತೊಂದೆಡೆಯ ಜನಾಂಗ ಈ ಕಥೆಯನ್ನು ಸ್ವಲ್ಪ ಬದಲಾಯಿಸಿ ಅರ್ಥಗರ್ಭಿತವಾಗಿ ಹೇಳುತ್ತಾರೆ. :– ಒಮ್ಮೆ ಆ ಬ್ರಾಹ್ಮಣನ ಯುವತಿಯು ಮಕ್ಕಳಾದ ನಂತರ ಯುಗಾದಿಯ ಹಬ್ಬಕ್ಕೆ ತಂದೆಯ ಮನೆಯಿಂದ ಹಿಂದಿರುಗುವಾಗ ಹೋಳಿಗೆಗಳನ್ನು ತಂದು ತನ್ನ ಅತ್ತೆಗೂ ಗಂಡನಿಗೂ ಬಡಿಸುತ್ತಾಳೆ. ಎಂದೂ ಕಂಡಿರದ ಹೋಳಿಗೆಯು ಆ ಮುದುಕಿ ತಾಯಿಯ ಗುಟ್ಟನ್ನು ಬಯಲು ಮಾಡುತ್ತದೆ.

"ಏನೋ ಕೋಣದ ನಾಲಿಗೆ ಹಂಗೈತಲ್ಲಾ ಇದು" ಎಂದು ನುಡಿಯುತ್ತಿದ್ದ ಅತ್ತೆಯ ಕಂಠವನ್ನು ಕೇಳಿಸಿಕೊಂಡ ಬ್ರಾಹ್ಮಣ ಸೊಸೆ ಇಬ್ಬರನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಕೊನೆಗೆ ನಾಟಕ ಬಯಲಾಗುತ್ತದೆ. ಇವರಿಗೆ ಶಾಪ ಕೊಟ್ಟು ತನ್ನ ತಂದೆ ಬಳಿ ಹೋಗಿ "ಅಪ್ಪಾ ನಾಯಿ ಮುಟ್ಟಿದ ಮಡಿಕೆಯನ್ನು ಏನು ಮಾಡಬೇಕು" ಎಂದು ಕೇಳುತ್ತಾಳೆ. ಸ್ವಾಭಾವಿಕವಾಗಿ ಆಗ ತಂದೆಯು ಅದಕ್ಕೆ ಉತ್ತರವಾಗಿ ಅದನ್ನು ಸುಡಬೇಕು ಎಂದಿಷ್ಟೇ ಹೇಳುತ್ತಾನೆ. ಅಲ್ಲಿಂದ ಹಿಂದಿರುಗಿದ ಅಕೆ ತನ್ನ ಗುಡಿಸಲಿನ ಸುತ್ತ ಬೆಂಕಿಯನ್ನು ಹಾಕಿಕೊಳ್ಳುತ್ತಾಳೆ. ಆಗ ಸುಟ್ಟು ಸಿಡಿದ ತಲೆಗಳನ್ನೇ ಜನ ಸಿಡುಬು ಎಂದು ಕರೆದರು. ಅವರ ಶಮನಕ್ಕಾಗಿ ಅವಳಿಗೆ ತಂಬಿನ ಆರತಿಗಳನ್ನು, ಮೊಸರನ್ನ ಬಲಿ ಮುಂದಾದುವನ್ನು ಕೊಟ್ಟು ಅವಳನ್ನೇ ಪೂಜಿಸಲು ಪ್ರಾರಂಭಿಸಿದರು.

ತಮೋಗುಣಾಭಿಮಾನಿಯಾದ ಲಕ್ಷ್ಮಿಯ ರೂಪಾಂತರವೇ ದುರ್ಗಿ. ಅವಳ ಅನೇಕ ಅವತಾರಗಳಲ್ಲಿ ಮಾರಿಯೂ ಒಂದಾಗಿದೆ. ಜಾನಪದ ಸಂಪ್ರದಾಯ ಮಾರಿಯ ಪೂಜೆಯನ್ನು ಸ್ವೀಕರಿಸಿದ ನಂಬಿಕೆ ಸ್ವಾರಸ್ಯಮಯವಾಗಿದೆ. ಮ ಅರಿ ಮಾರಿ ಎಂದು ವಿಭಾಗಿಸಲ್ಪಡುವ ಈ ಪದದ ಅರ್ಥ ನನಗೆ ಶತ್ರು ಎಂದಿಷ್ಟೇ ಆಗಿದೆ. ಇದನ್ನು ಜನಸಾಮಾನ್ಯ ತಮ್ಮ ಬೇಡಿಕೆಗೆ ತಕ್ಕಂತೆ ಬಳಸಿಕೊಂಡಿದ್ದಾರೆ. ಮಾನವನಿಗೆ ಬರುವ ದೇಹಬಾಧೆಗಳಿಗೆ ಇವಳು ಶತ್ರು, ಅವನ ಮನೋವ್ಯಾಕುಲಗಳ ವಿರುದ್ಧ ಶತ್ರುವಿನಂತೆ ಹೋರಾಡುವವಳೇ ಮಾರಿ. ಇವಳಿಗೆ ಪೂಜಾಬಲಿಗಳು ಕಡಿಮೆಯಾದಲ್ಲಿ ಕಾಯಿಲೆ ಅತಿವೃಷ್ಟಿ ಅನಾವೃಷ್ಟಿಗಳನ್ನುಂಟು ಮಾಡಿ ಅವರನ್ನು ಶಿಕ್ಷಿಸಿ ಭಕ್ಷಿಸುತ್ತಾಳೆಂಬ ನಂಬಿಕೆ ಗ್ರಾಮೀಣ ಜನರ ಮನದಲ್ಲಿ ಬೇರುಬಿಟ್ಟಿದೆ.

ಸಾಧಾರಣವಾಗಿ ಜನಪದ ಸಂಪ್ರದಾಯಗಳಲ್ಲಿ ಕಂಡುಬರುವ ಮಾರಮ್ಮನ

ಪೂಜೆಯು ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಮೈಸೂರು ನಗರದ ಕೋಟೆ ಬಿಸಿಲುಮಾರಮ್ಮ ಬಹಳ ಹಿಂದಿನಿಂದಲೂ ಪ್ರಭಾವಶಾಲಿಯಾಗಿದ್ದಾಳೆ. ಚಾರಿತ್ರಿಕ ಕಡತಗಳನ್ನು ಪರಿಶೀಲಿಸಿದಾಗ ಈ ದೇವತೆಗೆ ಸಂಬಂಧಿಸಿದ ಅನೇಕ ಅಂಶಗಳು ಕಾಣಿಸಿ ಕೊಳ್ಳುತ್ತದೆ.

ಶಾ. ಶಕ 1707 ಎಂದರೆ ಕ್ರಿ.ಶ. 1765ನೆಯ ಕ್ರೋಧಿ ಸಂವತ್ಸರದಲ್ಲಿ ಬರೆದಿರುವ ಮಹಿಶೂರ ನಗರದ ಶೀಮೆಲೆಕ್ಕವನ್ನು ಪೂರ್ವತ್ರದ ಕಡತಗಳ ಆಧಾರದಿಂದ ಬರೆದಿಟ್ಟಂತೆ ತೋರುತ್ತದೆ.[2] ಇದರಲ್ಲಿ ಮೈಸೂರಿನಲ್ಲಿ 16ನೇ ಶತಮಾನದ ಮೊದಲ ದಶಕಗಳಲ್ಲಿ ವಿಜಯನಗರದ ಚಕ್ರವರ್ತಿಗಳಾದ ಕೃಷ್ಣದೇವರಾಯ, ಉಮ್ಮತ್ತೂರು, ಶಿವನಸಮುದ್ರ ಪುರ ವ್ಯಕ್ತಿತ್ವಕ್ಕೆ ಬಂದು ಆ ಕೋಟೆಗಳನ್ನು ಸ್ವಾಧೀನಪಡಿಸಿಕೊಂಡು ದಕ್ಷಿಣ ದೇಶದಲ್ಲೆಲ್ಲಾ ತಮ್ಮ ಅಧಿಕಾರವನ್ನು ತಮ್ಮ ನೆಲೆಯನ್ನು ವೃದ್ಧಿಪಡಿಸಿಕೊಂಡ ರೆಂದು ತಿಳಿದು ಬರುವುದು. ಈ ಆಧಾರವು ಕ್ರಿ.ಶ. 1524ರಲ್ಲಿ ಮೈಸೂರು ಕೋಟೆ ಯನ್ನು ಕಟ್ಟಿಸಿದರು ಅಥವಾ ಬಲಪಡಿಸಿದರು ಎಂದು ಕರ್ನಲ್ ವಿಲ್ಕ್ಸ್‌ರವರ ಹೇಳಿಕೆ ಯನ್ನು ಘೋಷಿಸುತ್ತದೆ.[3]

ಈ ಮೇಲೆ ಹೇಳಿದ ಮಹಿಶೂರ ನಗರದ ದೊರೆತನದ ಪೂರ್ವತ್ರದ ಸಂಗತಿ ಶೀಮೆ ಲೆಕ್ಕವು ಮೈಸೂರಿನ ಕೋಟೆಯೊಳಗೆ ಈ ಕೆಳಗಂಡಂತೆ 20 ದೇವಾಲಯಗಳು ಇದ್ದು ವೆಂದು ತಿಳಿಸಿದೆ.

"ಲಕ್ಷ್ಮೀರಮಣಸ್ವಾಮಿ ದೇವಸ್ಥಾನ 1, ಹೊಸ್ತಿಲದ ನಾರತಿದೇವರ ಗುಡಿ 1, ಬಸ್ತಿ ಗುಡಿ 1, ಉಗ್ರಾಣದ ವಿನಾಯಕ 1, ತ್ರಿಣೇಶ್ವರ ಸ್ವಾಮಿಯವರ ಗುಡಿ 1, ಸೋಮೇಶ್ವರ ಗುಡಿ 1, ಭೈರವನ ಗುಡಿ 1, ಹನುಮಂತ ರಾಯರ ಗುಡಿ 1, ತಿರು ಮಲದೇವರ ಗುಡಿ 1, ಉಭಯಪಾರ್ಶ್ವದ ಹರಾಟೆಯಲ್ಲಿ ವಿನಾಯಕನ ದೇವಸ್ಥಾನ 2, ಒಳಕೋಟೆಯಲ್ಲಿ ಹುಲಿ ಮುಖದ ವಿನಾಯಕ ದೇವರ ಗುಡಿ 1, ಬಿಸಲು ಮಾರಮ್ಮನ ಗುಡಿ 1, ದೊಳಶೆಟ್ಟಿ ಮಾರಿ ಗುಡಿ 1, ಉಗ್ರಾಣದ ಮಾರಮ್ಮನ ಗುಡಿ 1, ಅರಮನೆ ವಿನಾಯಕ 1, ಮುದ್ದೈನ ಮಂಟಪದ ವಿನಾಯಕ 1, ಜ್ಯಾನಶಾಲೆ ವಿನಾಯಕನ ಗುಡಿ 1, ಕಂದಾಚಾರದ ವಿನಾಯಕ 1, ಗಾರೆಹಟ್ಟಿ ವಿನಾಯಕ 1, ಅಂತು ದೇವಸ್ಥಾನ 20.[4]

ಈ ಕೋಟೆಯು ಕ್ರಿ.ಶ. 14 ಮತ್ತು 15ನೇ ಶತಮಾನಗಳಲ್ಲಿ, ನಂತರ ವಿಜಯ ನಗರದ ಪ್ರಾಂತ್ಯಗಳಲ್ಲಿ ಒಂದಾಗಿದ್ದ ಶ್ರೀರಂಗಪಟ್ಟಣದ ಆಡಳಿತವನ್ನು ನಡೆಸುತ್ತಿದ್ದ ತಿರುಮಲರಾಯರ ಸಮಕಾಲೀನರಾದ[6] ಬೋಳ ಚಾಮರಾಜ ಒಡೆಯರು[7] ತಿರುಮಲ ರಾಯರ ಅಪ್ಪಣೆಯನ್ನು ಪಡೆದು ಪುರಗೇರಿಗೆ ಒಂದು ಕೋಟೆಯನ್ನು ನಿರ್ಮಿಸಿದರು.[8] ಅನಂತರದಲ್ಲಿ ಆ ಪುರಗೇರಿ ಮನೆಮಂದಿರಗಳನ್ನು, ಶೃಂಗಾರ ಕೊಳವಸಂತ ಕೊಳಗಳನ್ನು ಪಡೆದು ಮಹಿಶೂರ ನಗರವಾಗಿ ಮಾರ್ಪಟ್ಟಿತು. ಬೋಳ ಚಾಮರಾಜ ಒಡೆಯರ ಕಾಲ ಕ್ರಿ.ಶ. 1507–1576 ಎಂದು ಅನೇಕ ಚಾರಿತ್ರಿಕ ದಾಖಲೆಗಳಿಂದ ತಿಳಿದು ಬಂದಿದೆ. ಹಾಗೂ ಮೇಲೆ ತಿಳಿಸಿರುವಂತೆ ಮೈಸೂರು ನಗರದ ದೊರೆತನದ ಪೂರ್ವತ್ರದ ಸಂಗತಿ

ಶೀವಮೊಗ್ಗದ ಪ್ರಕಾರ ಕೋಟೆಬಿಸಿಲು ಮಾರಮ್ಮನ ಗುಡಿಯು ಬಹುಶಃ ಈ ವೇಳೆಗಾಗಲೇ ಇದ್ದಿತು ಎಂಬುದರಲ್ಲಿ ಸಂದೇಹವಿಲ್ಲದಿದ್ದರೂ ಈ ಗುಡಿಯು ಕಟ್ಟುವಿಕೆಯ ಮೊದಲ ಹೆಜ್ಜೆಗಳ ಬಗ್ಗೆ ಖಚಿತವಾದ ಪೂರ್ವೇ ತಾರೀಕನ್ನು ನಿರ್ಣಯಿಸುವುದು ಕಷ್ಟವಾಗಿದೆ.

ಮೂರನೆಯ ಮೈಸೂರು ಕದನದ ನಂತರ ಟೀಪೂಸುಲ್ತಾನನಿಗೆ ಆಂಗ್ಲೇಯರು ಅವನ ವಿರುದ್ಧ ದಂಡೆತ್ತಿ ಬರುವರೆಂಬ ಪ್ರಬಲವಾದ ಸಂದೇಹ ಉಂಟಾಯಿತು. ಶತ್ರು ಸೈನ್ಯ ಬರುವ ಮಾರ್ಗದಲ್ಲಿ ಪೇಟೆಗಳು ಗ್ರಾಮಗಳು ಕೋಟೆಕೊತ್ತಲಗಳಿದ್ದರೆ ಶತ್ರು ಸೈನ್ಯದ ಮುಂದುವರಿಯುವಿಕೆಗೆ ಅವು ಸಹಾಯವಾಗುವುದೆಂಬ ಕಾರಣದಿಂದ ಅವುಗಳನ್ನು ದಾರಿಮಧ್ಯದಿಂದ ಕದಲಿಸಿ ದೂರದ ಅನನ್ಯ ಸ್ಥಾನದಲ್ಲಿ ನೆಲೆಗೊಳಿಸಬೇಕೆಂಬ ಸಿದ್ಧ ತಂತ್ರವನ್ನು ಟೀಪು ಬಳಸಿದಂತೆ ತೋರುತ್ತದೆ. ಇದರ ಪರಿಣಾಮವಾಗಿ ಮೈಸೂರಿನ ಉತ್ತರಪಾರ್ಶ್ವಕ್ಕೆ ಹರಿದಾರಿಯಲ್ಲಿ ಸುಬೇದಾರ ವೀರಣ್ಣನ ತೋಟದ ಬಳಿ ನಿಂತು ಹರಿಯುವ ಹಳ್ಳದ ಸಮೀಪದಲ್ಲಿ ಕೆಲವು ಮನೆಗಳನ್ನು ಕಟ್ಟಿಸಿ 'ಸವಾಪಕರ್' ಎಂಬ ಹೆಸರನ್ನಿಟ್ಟು ಬ್ರಾಹ್ಮಣರು ಸೆಟ್ಟಿ ವರ್ತಕರು ಮುಂತಾದ ಹವೀರಿನ ಕೋಮಿನ ಜನರನ್ನು ವಾಸಮಾಡಲು ಅಣಿ ಮಾಡಿಕೊಟ್ಟು ಕೋಟೆಯಲ್ಲಿದ್ದ ಗುಡಿಗೋಪುರಗಳನ್ನು ಕೆಡುಹಿ ಮನೆಗಳನ್ನು ನೆಲಸಮ ಮಾಡಿದನು. ಶತ್ರುಗಳಿಗೆ ನಾಡಿನ ಕುರುಹು ಕಾಣದಂತೆ ಮಾಡಿದ ಸಂದರ್ಭದಲ್ಲಿ ಕೋಟೆ ಬಿಸಿಲು ಮಾರಮ್ಮನ ದೇವಾಲಯವನ್ನೂ ಕಿತ್ತು ಹಾಕಿಸಲಾಗಿತ್ತು.[9]

ನಂತರ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ 1799ರಲ್ಲಿ ಪಟ್ಟಾಭಿಷೇಕವಾದ ನಂತರ ಟೀಪೂ ಕೆಡುಹಿದ್ದ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದರು. ಈ ಸಂದರ್ಭದಲ್ಲಿ ಕೋಟೆಬಿಸಿಲು ಮಾರಮ್ಮನ ದೇವಾಲಯವನ್ನೂ ಜೀರ್ಣೋದ್ಧಾರ ಮಾಡಿಸಿ ಪೂಜೆ ನಡೆಯುವಂತೆ ಕಟ್ಟಳೆ ಮಾಡಿಸಿದರು.[10] 1898ರಲ್ಲಿ ಪ್ಲೇಗ್ ರೋಗಕ್ಕೆ ಮೈಸೂರು ನಗರ ತುತ್ತಾದಾಗ[11] ಆರೋಗ್ಯ ದೃಷ್ಟಿಯಿಂದ ಕೋಟೆಯೊಳಗೆ ಅಡಕವಾಗಿದ್ದ ನಗರವನ್ನು ಕೋಟೆಯ ಹೊರಗಡೆ ಸ್ಥಳಾಂತರಿಸಲಾಯಿತಾದರೂ ಕೋಟೆಬಿಸಿಲುಮಾರಮ್ಮನ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಯಾವ ಬದಲಾವಣೆಯೂ ಆಗಲಿಲ್ಲ.

ಕೋಟೆ ಬಿಸಿಲುಮಾರಮ್ಮನ ಪೂಜೆಗೆ ರಾಜಪರಿವಾರದವರೆಂದು ಕರೆಸಿಕೊಂಡಿರುವ ನಾಯಕ ಗುಂಪಿನ ಮೂರು ಮನೆಯವರು ಹಕ್ಕುದಾರರಾಗಿದ್ದರು. ಹಿರೋಡೆ ಸಿದ್ಧನಾಯಕ, ಟೋಪಿ ಮಂಚನಾಯಕ ಮತ್ತು ಜೋಗಿ ಸಿದ್ದನಾಯಕ ಗುಂಪಿನವರು ವರ್ಷಂಪ್ರತಿ ಅರಮನೆಯ ಜನಾನ ಸಮುಖದ ಇಲಾಖೆಯಿಂದ ಕಟ್ಟಳೆಯ ಸಾಮಗ್ರಿಗಳಾದ ರೂ 10–00 ಬಟ್ಟೆಗಾಗಿ, ರೂ 30–10 ಮತ್ತು 5 ಸೇರು ಲವಾಜಮೆಗಳನ್ನು ಪಡೆದು ಪೂಜೆಯನ್ನು ಸಲ್ಲಿಸುತ್ತಾರೆ. ವರ್ಷಕ್ಕೆ 40–10–00 ಸಂಬಳವನ್ನು ಪಡೆಯುತ್ತಿದ್ದರೆಂದು 13ನೆ ಫೆಬ್ರವರಿ 1912ರ ಪತ್ರದ ಮೂಲಕ ತಿಳಿದುಬರುತ್ತದೆ.[12]

8-11-1923 ರ ಪತ್ರದಲ್ಲಿ ಬಿಸಿಲುಮಾರಮ್ಮನಿಗೂ ಹೊಸ ಕಟ್ಟಡ ತಯಾರಾಗಿದೆ ಎಂದು ತಿಳಿಸಲಾಗಿದೆ. 17ನೆಯ ಅಕ್ಟೋಬರ್ 1924 ರ ಪ್ರಕಾರ ಈ ಹೊಸ ಕಟ್ಟಡದ ಕಟ್ಟುವಿಕೆಗೆ ಹಾಗೂ ಹಳೆಯ ಕಟ್ಟಡವನ್ನು ಕೆಡುಹಲು ಸಹ ಒಟ್ಟು ರೂ 1824-5-0 ವೆಚ್ಚವಾಯಿತೆಂದೂ ಈ ಕಾರ್ಯದ ನಿರ್ವಹಣೆ ವಹಿಸಿದ ಗುತ್ತಿಗೆದಾರರಿಗೆ ಈಗಾಗಲೇ 1064-4-00 ಮುಂಗಡವಾಗಿ ಕೊಟ್ಟಿರುವುದರಿಂದ ಉಳಿದ 260-1-00 ಯನ್ನು ಮಂಜೂರು ಮಾಡಬೇಕೆಂದೂ ಗುತ್ತಿಗೆದಾರರು ಸೂಚಿಸಿರುವ ಪತ್ರದಿಂದ ಹೊಸ ಕಟ್ಟಡಕ್ಕೆ ಸುಮಾರು ರೂ 1824-5-00 ವೆಚ್ಚವಾಯಿತೆಂದು ತಿಳಿದು ಬರುತ್ತದೆ. ಈ ಪತ್ರ ಸದರಿ ವೆಚ್ಚವನ್ನು ಮಂಜೂರು ಮಾಡಬೇಕೆಂದು ಕೋರಿದ ಪತ್ರವಾಗಿರುತ್ತದೆ. ಆದರೆ ಇದಕ್ಕೂ ಮೊದಲಿನ 8-11-23 ಪತ್ರದಲ್ಲಿ ಬಿಸಿಲು ಮಾರಮ್ಮನ ದೇವಾಲಯಕ್ಕೆ ಕಟ್ಟಡ ಸಿದ್ಧವಾಗಿದೆ ಎಂದು ಹೇಳಲಾಗಿದೆ. ಹೀಗೆ ಬಿಸಿಲುಮಾರಮ್ಮನನ್ನು ಸ್ಥಳಾಂತರಿಸುವರೆಂದು ತಿಳಿದ ಕೆಲವರು 29 ನೇ ತಿಂಗಳು 1924ರಲ್ಲಿ ಮಹಾಮಾತೃಶ್ರೀ ವಾಣಿ ವಿಲಾಸ ಮಹಾ ಸನ್ನಿಧಾನಕ್ಕೆ ಅರಮನೆಯ ಬಲ ಭಾಗದಲ್ಲಿರುವ ಬಿಸಿಲು ಮಾರಮ್ಮನನ್ನು ಅಮಲ ದೇವತೆಯ ಪಕ್ಕದಲ್ಲಿ ಅಥವಾ ಕೋಟೆಯ ದಕ್ಷಿಣ ಭಾಗದಲ್ಲಿ ಹೊಸದಾಗಿ ಕಟ್ಟಿಸಿರುವ ದೇವಾಲಯಗಳ ಪಕ್ಕದಲ್ಲಾದರೂ ಸ್ಥಳಾಂತರಿಸಿದರೆ ದೇವತೆಗೆ ನಡೆಸುವ ಉತ್ಸವಗಳಿಗೆ ಸೌಕರ್ಯವಾಗುವುದೆಂದು ಬಿನ್ನವಿಸಿಕೊಂಡರು.[15]

ಅರಮನೆಯ ಬಲಭಾಗದಲ್ಲಿದ್ದ ಬಿಸಿಲುಮಾರಮ್ಮನನ್ನು ತಾರೀಖು 30 ಗುರುವಾರ ಅಕ್ಟೋಬರ್ ತಿಂಗಳು 1924 ಬೆಳಿಗ್ಗೆ 4-4-31 ರಿಂದ 5-15 ರ ವೇಳೆಯಲ್ಲಿ ಮಾರಿಯನ್ನು ಕದಲಿಸಿ ಹೊರತೆಗೆದು ಅದೇ ದಿನ ಬೆಳಿಗ್ಗೆ 8-24 ರಿಂದ 8.36 ರ ನಿಮಿಷಗಳಲ್ಲಿ ಹೊಸದಾಗಿ ಕೋಟೆಯ ಹೊರಗೆ ಆಗ್ನೇಯ ದಿಕ್ಕಿನಲ್ಲಿ ಸ್ವಲ್ಪ ಎತ್ತರವಾಗಿ ಕಟ್ಟಿದ್ದ ಮೇಲ್ಛಾವಣಿ ಇಲ್ಲದ ಗರ್ಭಗೃಹದಲ್ಲಿ ಪುನಃ ಪ್ರತಿಷ್ಠಾಪಿಸಲಾಯಿತು.[16]

20ರ ದಶಕದ ಮೊದಲ ದಶಕಗಳಲ್ಲಿ ಭೂಮಿಯ ಮಟ್ಟಕ್ಕಿಂತ ಎತ್ತರವಾಗಿ ಕಟ್ಟಲಾದ ಈ ದೇಗುಲದ ಗರ್ಭಗೃಹದ ಮೇಲ್ಛಾವಣಿ ತೆರೆದಿದ್ದು ಶಿಖರ ರಹಿತವಾಗಿರು ಒಂದು ವೈಶಿಷ್ಟ್ಯ. ಗರ್ಭಗೃಹದ ಗೋಡೆಯ ತುದಿಯಲ್ಲಿ ವೃತ್ತಾಕಾರದ ದಳಗಳ ರಚನೆ ಶೋಭಿಸುತ್ತದೆ. ಈ ದಳಗಳಿಗೆ ಸಂಬಂಧಿಸಿದಂತೆ ನಾಲ್ಕು ಮೂಲೆಗಳಲ್ಲಿ ನಾಲ್ಕು ಪುಟ್ಟ ಶಿಖರಗಳು ಕಂಡುಬರುತ್ತವೆ. ಈ ದೇಗುಲದ ಮೊದಲ ಭಾಗದಲ್ಲಿರುವ ಮುಖ ಮಂಟಪ ದೇಗುಲದ ಮುಖ್ಯ ಬಾಗಿಲಿಗೆ ತಾಗಿದಂತಿದ್ದು ದೂರಕ್ಕೆ ದೇವಕೋಷ್ಠದಂತೆ ಕಾಣುತ್ತದೆ. ದೇಗುಲದ ಹೊರಗೆ ಎದುರಿಗೆ ಭೂಮಿಯ ಮಟ್ಟಕ್ಕೆ ಕಬ್ಬಿಣದ ಬಲವಾದ ತ್ರಿಶೂಲ ಒಂದನ್ನು ನಿಲ್ಲಿಸಲಾಗಿದೆ. ಇದನ್ನು 16-4-1968 ರಂದು ಇಟ್ಟಿಗೆಗೂಡಿನ ರಾಮಸ್ವಾಮಿ ಆಚಾರಿ ಸೇವಾರ್ಥವಾಗಿ ನಿಲ್ಲಿಸಿದರೆಂದು ಆ ತ್ರಿಶೂಲದ ಬುಡದಲ್ಲಿರುವ ಅರ್ವಾಚೀನ ಶಾಸನದಿಂದ ತಿಳಿದುಬರುತ್ತದೆ. ಇದರ ಹಿಂಭಾಗದಲ್ಲಿಯೇ ಚಿಕ್ಕ ಶಿಲಾ ದೀಪಸ್ತಂಭವೊಂದನ್ನು ನಿಲ್ಲಿಸಲಾಗಿದೆ. ಈ ಶಿಲಾಸ್ತಂಭದ ಹಿಂಬದಿಯಲ್ಲಿ ಸ್ವಲ್ಪ

ದೂರದಲ್ಲಿ ಒಂದು ಚೌಕಾಕಾರದ ಬಲಿಕಲ್ಲು ಇದ್ದು ಅದು ಇಂದಿಗೂ ಕೋಳಿ ಮತ್ತು ಆಡುಗಳನ್ನು ಬಲಿಕೊಡಲು ಉಪಯೋಗವಾಗುತ್ತದೆ.

ದೇಗುಲದ ಎಡಭಾಗದಲ್ಲಿ ಎರಡು ಬಲಿ ಬಂಡೆಗಳು ಕಂಡುಬರುತ್ತದೆ. ಹಿಂದೆ ಇಲ್ಲಿ ಕೋಣ ಮತ್ತು ಇತರ ಪ್ರಾಣಿಗಳನ್ನು ವಿಶೇಷವಾಗಿ ಬಲಿಗೊಡುತ್ತಿದ್ದು ಈಗ ಈ ಬಲಿ ಕುರಿ ಮತ್ತು ಕೋಳಿಗಳಿಗೆ ಮಾತ್ರ ಸೀಮಿತವಾದಂತೆ ಕಂಡುಬರುತ್ತದೆ.

ದೇಗುಲದ ಗರ್ಭಗೃಹದಲ್ಲಿ ಬಿಸಿಲುಮಾರಮ್ಮ ಎಂದು ಹೇಳಲಾದ ಒಂದು ಶಿಲಾಸ್ತಂಭದ ಕಾಂಡಭಾಗವಿದೆ. ಇದರ ನಾಲ್ಕು ಮೂಲೆಗಳಲ್ಲಿಯೂ ನಾಗವಿನ್ಯಾಸಗಳು ಹಾಗೂ ಅದರ ಕೆಳಭಾಗದಲ್ಲಿ ಏಣುಗಳು ಕಂಡುಬರುತ್ತವೆ. ಶಿಲಾಸ್ತಂಭದ ಮೇಲ್ಭಾಗದಲ್ಲೂ ಈ ರೀತಿಯ ಏಣುಗಳು ಸ್ತಂಭದ ಸುತ್ತ ಕಂಡುಬರುತ್ತವೆ. ಬುಡದಲ್ಲಿ ಚೌಕ ಹಾಗೂ ಮೇಲ್ಭಾಗದಲ್ಲಿ ಅಷ್ಟಕೋನಾಕಾರವಿದ್ದು ಇದರ ಕೆತ್ತನೆ ದೊರಗಾಗಿದೆ. ಇದರ ಎಡಭಾಗದಲ್ಲಿ ಮತ್ತೊಂದು ಒರಟಾದ ಶಿಲೆಯಿದ್ದು ಇದನ್ನು ಚಿಕ್ಕಮ್ಮ ಎಂದು ಪೂಜಿಸಲಾಗುತ್ತಿದೆ.

ಈ ದೇವತೆಗೆ ನಡೆಯುವ ಪೂಜೆಗಳು ಮತ್ತು ಹಬ್ಬ ಉತ್ಸವಗಳು ಕುತೂಹಲಕಾರಿಯಾದುದು. ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಉತ್ತನಹಳ್ಳಿ ಅಮ್ಮನ ಜಾತ್ರೆಯ ಒಂದು ವಾರ ಮುಂಚಿತವಾಗಿ ಎಂದರೆ ಫೆಬ್ರವರಿ 2ನೇ ವಾರದಲ್ಲಿ ಪ್ರಾರಂಭವಾಗುವ ದುಗ್ಗಲಮ್ಮನ ಹಬ್ಬ, ಉತ್ತನಹಳ್ಳಿ ಅಮ್ಮನ ಜಾತ್ರೆಯಂದು ಮಾರಿಸಾರು, ಮುಂಬರುವ ವಾರಕ್ಕೆ ಮಾರಿಮಡೆ, ನಂತರದಲ್ಲಿ ಒಂದು ವಾರಕ್ಕೆ ಮಾರಿಸಿಡಿಯಿಂದ ಮುಕ್ತಾಯವಾಗುತ್ತದೆ.[17] ಒಟ್ಟಿನಲ್ಲಿ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಈ ಹಬ್ಬಗಳನ್ನು ಈ ದೇಗುಲದ ಪೂಜೆಯ ಹಕ್ಕುದಾರರು ನಗಾರಿ ಕಳಸ, ತಂಪಿನ ನಡುಮುಡಿ, ಬಲಿ, ಅರಮನೆಯ ಮರ್ಯಾದೆಗಳು[18] ಇತ್ಯಾದಿಗಳೊಡನೆ ಸಂಭ್ರಮದಿಂದ ಆಚರಿಸುತ್ತಾರೆ. ಈ ಹಬ್ಬಗಳು ಅನಾದಿ ಕಾಲದಿಂದಲೂ ಆಚರಣೆಯಲ್ಲಿದ್ದು ಇಂದು ಕೆಲವು ಮಾರ್ಪಾಡುಗಳನ್ನು ಪಡೆದುಕೊಂಡಿರುವುದು ಗಮನೀಯ.

ದುಗ್ಗಲಮ್ಮನ ಹಬ್ಬವನ್ನು ಪಟ್ಲದುಗ್ಗಮ್ಮನ ಹಬ್ಬ ಎಂದೂ ಕರೆಯುತ್ತಾರೆ. ಈ ಹಬ್ಬವನ್ನು ಉತ್ತನಹಳ್ಳಿ ಅಮ್ಮನ ಜಾತ್ರೆಗೆ ಒಂದು ವಾರವಿರುವಾಗ ಶುಕ್ರವಾರದಂದು ಆಚರಿಸಲಾಗುವುದು. ಈಗ್ಗೆ ಹತ್ತು ವರ್ಷಗಳ ಹಿಂದೆ ಈ ಹಬ್ಬದಂದು ಆ ವರ್ಷಕ್ಕೆ ಪೂಜೆಗೆ ಹಕ್ಕುದಾರರಾದ ಗುಂಪಿನವರ ಕಡೆಯಿಂದ ಏಳೆಂಟು ಗಂಡಸರು ಚಾಮುಂಡಿ ಬೆಟ್ಟದ ತಪ್ಪಲಲ್ಲಿ ನಿರ್ಜನ ಪ್ರದೇಶದಲ್ಲಿ ಕೆರೆಯಿರುವಲ್ಲಿಗೆ ಹೋಗಿ ಮೊದಲು ಸ್ನಾನಮಾಡಿ ಶುಭ್ರಬಟ್ಟೆಗಳನ್ನು ತೊಟ್ಟುಕೊಂಡು ಪೂಜೆಗೆ ಪ್ರಾರಂಭಿಸುತ್ತಿದ್ದರು. ನಂತರ ಒಂದು ಮರದ ಕೆಳಗೆ ಸಾರಿಸಿ ಗುಡಿಸಿ ಆಯ್ದು ತಂದು ಐದು ಬೆಣಚುಕಲ್ಲುಗಳನ್ನು ಆ ಮರದ ಕೆಳಗೆ ಇರಿಸಿ ಅವುಗಳಿಗೆ ಅರಿಶಿನ ಕುಂಕುಮ ಗಂಧ ಹಚ್ಚಿ ಹೂವುಗಳನ್ನಿರಿಸಿ ಕಾಯಿ ಕಡ್ಡಿ ಕರ್ಪೂರಗಳಿಂದ ಪೂಜಿಸಿ ಒಂದು ಜೊತೆ ಹುಂಜವನ್ನು ಬಲಿ ಕೊಟ್ಟು ಅದರ ಮಾಂಸವನ್ನು ಅಟ್ಟು ಅಲ್ಲಿ ಎಡೆಇಟ್ಟು ಆರತಿಯ ನಂತರ ಎಲ್ಲರೂ ಉಂಡು ಉಳಿದುದನ್ನು

ಅಲ್ಲಿಯೇ ಒಂದು ಹಳ್ಳ ತೋಡಿ ಮುಚ್ಚುತ್ತಿದ್ದರು. ಪೂಜೆ ಮಾಡಿದ ಕಲ್ಲುಗಳನ್ನು ಕವಲಿಸಿ ಅಲ್ಲಿಯೇ ಬಿಟ್ಟೋ ಅಥವಾ ಕೆರೆಗೆ ಹಾಕಿಯೋ ಹಿಂದಿರುಗುತ್ತಿದ್ದರು. ಆದರೆ ಕಾಲ ಕಳೆದಂತೆ ಈ ಹಬ್ಬದ ಆಚರಣೆಯಲ್ಲಿ ಕೆಲವು ಮಾರ್ಪಾಡುಗಳಾಗಿವೆ. ದುಗ್ಗಲಮ್ಮನ ಹಬ್ಬದಂದು ಪೂಜೆಗೆ ಹಕ್ಕುದಾರರ ಗುಂಪಿನವರು ಗಂಡಸರು, ಹೆಂಗಸರು ಮಕ್ಕಳ ಸಮೇತ ಬಿಸಿಲುಮಾರಮ್ಮನ ಗುಡಿಯೆದುರಿಗೆ ಕೋಳಿ, ಕುರಿ, ಹುಂಜ, ಹೋತ ಇಲ್ಲವೆ ಇಷ್ಟಬಂದ ಪ್ರಾಣಿಯನ್ನು ಬಲಿಗೊಟ್ಟು, ಅದರ ಮಾಂಸವನ್ನು ಅಟ್ಟು, ಕಲ್ಲೇ ದೇಗುಲದ ಪ್ರಾಕಾರದಲ್ಲಿ ದೇವಿಗೆ ಎಡೆ ಇಟ್ಟು ತಾವು ಉಂಡು, ತಮ್ಮ ಮನೆಗಳಿಗೆ ತೆರಳುವುದು ಇಂದಿನ ಆಚರಣೆಯಾಗಿದೆ.

ಉತ್ತನಹಳ್ಳಿ ಅಮ್ಮನ ಜಾತ್ರೆಯಂದು ಬಿಸಿಲು ಮಾರಮ್ಮನ ದೇಗುಲದಲ್ಲಿ "ಮಾರಿಸಾರು" ಎಂಬ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದ ಆಚರಣೆ ಭಯಾನಕ ಹಾಗೂ ಕುತೂಹಲಕಾರಿಯಾಗಿದೆ. ಈ ಹಬ್ಬವು ಸಾಧಾರಣವಾಗಿ ಇಲ್ಲಿಯವರೆಗೆ ಭಾನುವಾರದಂದೇ ಆಚರಿಸಲಾಗುತ್ತಿದೆ. ಆಯಾ ವರ್ಷದ ಪೂಜೆಯ ಹಕ್ಕುದಾರರು ಮಿಂದು ಶುಭ್ರ ವಸ್ತ್ರಗಳನ್ನು ತೊಟ್ಟು ಒಂದು ದೊಡ್ಡ ಹೊಸ ಮಡಿಕೆಯೊಡನೆ ದೇಗುಲಕ್ಕೆ ಬರುತ್ತಾರೆ. ದೇಗುಲದ ಪ್ರಾಕಾರದಲ್ಲೇ (ಆವರಣದಲ್ಲಿ) ಅನ್ನ ಮಾಡಿಕೊಂಡು ನಗಾರಿ ಯೊಡನೆ ಬಿಸಿಲು ಮಾರಮ್ಮನ ಸ್ವಸ್ಥಾನವಾದ ಅರಮನೆಯ ಬಲಭಾಗಕ್ಕೆ ಬಂದು ಹೋತ ವನ್ನು ತಂದು ಅದರ ಅರ್ಧ ಕುತ್ತಿಗೆಯನ್ನು ಆ ಗುಂಪಿನವನೊಬ್ಬ ಕಡಿಯುತ್ತಾನೆ. ಕಿಂಚಿತ್ತು ರಕ್ತ ನೆಲ ಸೋಕಿದ ಕೂಡಲೇ ಮಿಕ್ಕೆಲ್ಲಾ ರಕ್ತವನ್ನು ಅನ್ನ ಮಾಡಿ ತಂದಿದ್ದ ಆ ಮಡಿಕೆಯಲ್ಲೇ ಹಿಡಿದುಕೊಳ್ಳುತ್ತಾರೆ. ಆ ರಕ್ತವನ್ನು ಅನ್ನದೊಡನೆ ಮಿಶ್ರ ಮಾಡಿ ಅದನ್ನು ರಕ್ತದ ಕೂಳು ಎಂದು ಕರೆಯುತ್ತಾರೆ. ಅಲ್ಲಿಂದ ಮೊದಲು ನಗಾರಿ ಬಾರಿಸು ವವನು, ಅವನನ್ನು ಹಿಂಬಾಲಿಸುತ್ತಾ ಮತ್ತೊಬ್ಬ ಕಡಿದ ಹೋತದ ಕಾಲುಗಳನ್ನು ಕಟ್ಟಿ ಗೋಣಿಯ19 ಮೇಲೆ ಎಳೆಯುವವನು, ಅವನ ಹಿಂದೆ ರಕ್ತದ ಕೂಳು ಎರಚುವವನು, ಅವನ ಹಿಂದೆ ಗುರಿಪಿನ ಯಜಮಾನ "ಯಾಹಹ" ಎಂದು ಕೂಗುತ್ತಾ ಮುಂದುವರಿದಾಗ ಅವನ ಗುಂಪಿನವರೆಲ್ಲರೂ ಅವನ ಕೂಗಿಗೆ ಪ್ರತಿಯಾಗಿ ಕೂಗುತ್ತಾ ಯಜಮಾನನನ್ನು ಹಿಂಬಾಲಿಸುತ್ತಾರೆ. ಈ ಗುಂಪು ಹೋತವನ್ನು ಎಳೆಯುತ್ತಾ ರಕ್ತದ ಕೂಳು ಎರಚುತ್ತಾ ನಗಾರಿಯೊಡನೆ ಕೋಟೆಯ ಒಳಪ್ರಕಾರ ಒಮ್ಮೆ ಬಳಸಿ ಕೋಟೆಯ ದಿಡ್ಡಿ ಬಾಗಿಲಿನ ಮುಖಾಂತರವಾಗಿ ಬಿಸಿಲುಮಾರಮ್ಮನ ದೇವಾಲಯಕ್ಕೆ ಬರುತ್ತಾರೆ. ದೇವಾಲಯದ ಸುತ್ತಲೂ ರಕ್ತದ ಕೂಳು ಎರಚಿ ಅಲ್ಲಿಂದ ಆ ದೇಗುಲದ ಪೂಜೆಯ ಹಕ್ಕುದಾರರೆಲ್ಲರೂ ವಾಸಮಾಡುವ ಸುಣ್ಣದಕೇರಿಯನ್ನು ಒಮ್ಮೆ ಬಳಸಿ ಆ ಕೇರಿಯ ಮಧ್ಯೆ ಇರುವ ಸಿದ್ದಪ್ಪಾಜಿಯ ದೇವಸ್ಥಾನಕ್ಕೆ ಬರುತ್ತಾರೆ. ಕೂಡಲೇ ದೇವರಿಗೆ ಆರತಿ ಮಾಡಿ, ಗುಡಿಯ ಮುಂದೆ ಬೆಂಕಿಯನ್ನು ಮಾಡಿ ಹೋತದ ಕಿವಿಯನ್ನು ಕೊಯ್ದು, ಆ ಬೆಂಕಿಗೆ ಹಾಕಿದ ನಂತರ ದೇವರಿಗೆ ಅರ್ಪಿತವಾಯಿತು ಎಂದುಕೊಂಡು ಆ ಹೋತವನ್ನು ನಗಾರಿ ಬಾರಿಸುವವನಿಗೇ ಕೊಟ್ಟುಬಿಡುತ್ತಾರೆ. ಈ ಹಬ್ಬದಲ್ಲಿ ರಾಜಕೀಯ ಹಿನ್ನಲೆಯಾದ

ಕೋಟೆಯ ರಕ್ಷಣೆಯನ್ನು ಗುರುತಿಸಬಹುದಾಗಿದೆ. ಅಷ್ಟೇ ಅಲ್ಲದೆ ಜನಸಾಮಾನ್ಯನಾದ ನಗಾರಿ ಬಾರಿಸುವವನ ಜೀವನವನ್ನೂ ಅರಿಯಲು ಸ್ವಲ್ಪಮಟ್ಟಿಗೆ ಸಹಾಯಕಾರಿಯಾಗಿದೆ. ರಕ್ತದ ಕೋಳಿ ಎರಚುವುದನ್ನು ಗಮನಿಸಿದಾಗ ತಾಂತ್ರಿಕ ಪದ್ಧತಿಯೇ? (ಕಾಳಮುಖ, ಭೈರವಿ) ಈ ಪೂಜೆ ಪದ್ಧತಿಯೇ? ಎಂಬ ಪ್ರಶ್ನೆ ಎಂತಹವರಿಗಾದರೂ ಮನದಲ್ಲೇಳುವುದು ಸಹಜವೇ ಆಗಿದೆ. ಆದರೆ ಈ ಜನಾಂಗ ಇದಾವುದಕ್ಕೂ ಉತ್ತರ ಹೇಳುವ ಸ್ಥಿತಿಯಲ್ಲಿಲ್ಲ.

ಉತ್ತನಹಳ್ಳಿ ಅಮ್ಮನ ಜಾತ್ರೆಯಾದ ಒಂದು ವಾರಕ್ಕೆ, ಸೋಮವಾರದಂದು ಬಿಸಿಲುಮಾರಮ್ಮನ ಪೂಜೆಯ ಹಕ್ಕುದಾರರು ತಮ್ಮ ಮನೆಗಳಿಗೆ ಸುಣ್ಣ ಬಳಿದ ಕೆಮ್ಮಣ್ಣು ಇಟ್ಟು ಬಟ್ಟೆಗಳನ್ನು ಶುಭ್ರಮಾಡಿ ಮಾರಿಮಡೆಯ ಹಬ್ಬದ ಆಚರಣೆಗಾಗಿ ಕಾಯುತ್ತಿರುತ್ತಾರೆ. ಮಾರಿಮಡೆಯಂದು ಮನೆಯವರೆಲ್ಲರೂ ಮಿಂದು ಶುಭ್ರಬಟ್ಟೆಗಳನ್ನು ತೊಟ್ಟು ಉಪವಾಸದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಕೆಂಪುಮಣ್ಣಿನಿಂದ ಮಾಡಿದ ಹೊಸ ಮಡಿಕೆಯನ್ನು ತಂದು ಅರಿಶಿನ ಮಿಶ್ರಿತ ಅನ್ನವನ್ನು ಮಾಡಿಕೊಳ್ಳುತ್ತಾರೆ. ಈ ಅನ್ನವನ್ನು ಮಡೆ ಎಂದು ಕರೆಯುತ್ತಾರೆ. ಈ ಮಡೆಯ ಮಡಿಕೆಯ ಬಾಯಿಗೆ ಒಂದು ಬಟ್ಟೆ ಕಟ್ಟಿ ಕುತ್ತಿಗೆಗೆ ಹೂಸುತ್ತಿ ಹರಳಿನ ಕುಂಕುಮವನ್ನಿಟ್ಟು ತಯಾರಿ ಮಾಡಿಕೊಂಡಿರುತ್ತಾರೆ. ಈ ವೇಳೆಗಾಗಲೇ, ಪೂಜೆಯ ಹಕ್ಕುದಾರರು ಸುಣ್ಣದ ಕೇರಿಯಲ್ಲೇ ಇರುವ ಸಿದ್ಧಪ್ಪಾಜಿಯ ದೇವಾಲಯದಲ್ಲಿ ಕಳಸವನ್ನು ಪೂಜಿಸಿಕೊಂಡು21 ಕೇರಿಯವರ ನಗಾರಿ ಮತ್ತಿತರ ವಾದ್ಯಗಳೊಡನೆ ಜಿಲ್ಲಾ ಮರ್ಯಾದೆಗಳೊಡನೆ ಮಡಿವಾಳನ ನಡೆಮುಡಿಯನ್ನು ತಯಾರಿ ನಡೆಸುತ್ತಾರೆ. ಆಯಾ ಮನೆಗಳಲ್ಲಿ ವಯಸ್ಸಿಗೆ ಬಾರದ ಹೆಣ್ಣು ಮಕ್ಕಳನ್ನು (ಅರ್ಹರು) ಚೆನ್ನಾಗಿ ಅಲಂಕರಿಸಿ ಪೂಜೆಯನ್ನು ಹೊತ್ತು ಅವರವರ ಮನೆಮಂದಿಗಳೆಲ್ಲರೂ ಸಿದ್ಧಪ್ಪಾಜಿಯ ದೇವಸ್ಥಾನಕ್ಕೆ ಬರುತ್ತಾರೆ. ನಂತರ ಕಳಸಕ್ಕೆ ಆರತಿ ಮಾಡಿ ಸಿದ್ಧಪ್ಪಾಜಿಯ ದೇವಾಲಯದ ಎದುರಿಗೆ ಎರಡು ಹೋತಗಳನ್ನು ಬಲಿಗೊಡುತ್ತಾರೆ. ಪೂಜಿಸಿದ ಕಳಸವನ್ನು ಒಂದು ಹೆಣ್ಣುಮಗಳ ತಲೆಯ ಮೇಲೆ ಸಿಂಬಿಯನ್ನಿರಿಸಿ ಅದರ ಮೇಲೆ ಕಳಸವನ್ನು ಹೊರಿಸುತ್ತಾರೆ. ಅಲ್ಲಿಂದ ವಾದ್ಯ ಮೊದಲು ಹೊರಡುತ್ತದೆ. ಆ ದೇವಾಲಯದ ಆವರಣದಿಂದಲೇ ಮಡಿವಾಳನು ನಡುಮುಡಿಯನ್ನು ಹಾಸುತ್ತಾನೆ. ಅದರ ಮೇಲೆ ಮೊದಲು ಕಳಸ ಹೊತ್ತವರು ನಂತರ ಮಡಿ ಹೊತ್ತ ಹೆಣ್ಣುಮಕ್ಕಳು, ಅದರ ಇಕ್ಕೆಲಗಳಲ್ಲಿ ಅರಮನೆಯ ಮರ್ಯಾದೆಗಳು ಹೊರಡುತ್ತವೆ. ಇವರೆಲ್ಲರ ಹಿಂದೆ ಮಡೆಯ ಬಳಗ ಹೊರಟು ಬಿಸಿಲುಮಾರಮ್ಮನ ದೇವಾಲಯಕ್ಕೆ ಬರುತ್ತಾರೆ. ದೇವಾಲಯಕ್ಕೆ ಬಂದೊಡನೆ ದೇವಾಲಯದ ಹೊರಗೆ ಕಳಸಕ್ಕೆ, ಆರತಿ ಬೆಳಗಿ ಇಡಿಗಾಯನ್ನು ಒಡೆಯುತ್ತಾರೆ. ನಂತರ ಕಳಸ ಮತ್ತು ಎಲ್ಲಾ ಮಡೆಗಳನ್ನು ಗರ್ಭಗುಡಿಯಲ್ಲಿ ಇಟ್ಟು ಆರತಿಯನ್ನು ದೇವಿಗೆ ಬೆಳಗಿ ಎಲ್ಲರಿಗೂ ತೀರ್ಥ ಪ್ರೋಕ್ಷಣೆ ಮಾಡುತ್ತಾರೆ. ನಂತರ ದೇಗುಲದಿಂದ ಸಿದ್ಧಪ್ಪಾಜಿಯ ದೇಗುಲಕ್ಕೆ ವಾದ್ಯಗಳೊಡನೆ ಜಿಲ್ಲಾ ಮರ್ಯಾದೆಗಳೊಡನೆ ನಡುಮುಡಿಯೊಡನೆ ಬಂದಂತೆಯೇ ಹಿಂದಿರುಗುತ್ತಾರೆ. ಸಿದ್ಧಪ್ಪಾಜಿಯ ದೇವಾಲಯದಲ್ಲಿ ಕಳಸವನ್ನು ಮಡೆಗಳನ್ನು ಇಟ್ಟು ಪೂಜಿಸಿ ಮಹಾಮಂಗಳಾ

ರತಿ ಬೆಳಗಿ ಎಲ್ಲರಿಗೆ ತೀರ್ಥ ಪ್ರೋಕ್ಷಣೆಯಾದನಂತರ ತಮ್ಮ ತಮ್ಮ ಮಡೆಗಳನ್ನು ಹೊತ್ತು ಅವರವರ ಮನೆಗಳಿಗೆ ತೆರಳುತ್ತಾರೆ. ಬಲಿಗೊಟ್ಟ ಪೋತದ ತಲೆ ಮತ್ತು ಕಾಲುಗಳನ್ನು ನಡುಮುಡಿ ಹಾಸಿದ ಮಡಿವಾಳನಿಗೆ ಕೊಡಲಾಗುತ್ತದೆ. ಇತರ ಭಾಗಗಳನ್ನು ಗುಂಪಿನವ ರೆಲ್ಲಾ ಹಂಚಿಕೊಂಡು ಅಟ್ಟ ಉಂಡು ನಲಿಯುತ್ತಾರೆ. ಈ ಮಾರಿಮಡೆಯ ಹಬ್ಬ ಯಾವುದೇ ಬದಲಾವಣೆಯೂ ಇಲ್ಲದೆ ಎಂದಿನಿಂದಲೂ ಒಂದೇ ಸಮನೆ ಇಂದಿಗೂ ನಡೆ ಯುತ್ತದೆ. (ಸಾಧಾರಣವಾಗಿ ಗ್ರಾಮಗಳಲ್ಲಿ ಗ್ರಾಮದೇವತೆಗೆ ಫಸಲು ಹುಲುಸಾಗಿ ಬೆಳೆದ ವರ್ಷಗಳಲ್ಲಿ ಈ ಮಾರಿಮಡೆಯನ್ನು ಆಚರಿಸಲಾಗುತ್ತದೆ. ನಗರಗಳಲ್ಲೂ ಈ ಹಬ್ಬ ಈ ಜನಾಂಗದ ಆರ್ಥಿಕ ಮಟ್ಟವನ್ನು ಸೂಚಿಸುತ್ತದೆ.)

ಉತ್ತನಳ್ಳಿ ಅಮ್ಮನ ಜಾತ್ರೆನಡೆದ ಎರಡನೆಯ ವಾರ ಆಚರಿಸುವ ಮಾರಿಸಿಡಿ ವರ್ಷಕ್ಕೆ ಕೊನೆಯ ಹಬ್ಬ. ಅದನ್ನು ಸೋಮವಾರದಂದು ಆಚರಿಸುತ್ತಾರೆ. ಬಿಸಿಲು ಮಾರಮ್ಮನಿಗೆ ಈ ಹಬ್ಬದಂದು ತುಪ್ಪ, ಜೇನುತುಪ್ಪ, ಹಣ್ಣಿನರಸ, ನಿಂಬೆಹಣ್ಣಿನ ರಸದಿಂದ ಅಭಿಷೇಕ ಮಾಡಿ ತಂಬಿಟ್ಟಿನ ತಂಪಿನ ಆರತಿಯನ್ನು ಬೆಳಗುತ್ತಾರೆ. ನೂರಾರು ಜನ ಭಕ್ತರು ಸುಣ್ಣದಕೇರಿ, ಶಿವರಾಂಪೇಟೆ, ಇಟ್ಟಿಗೆಗೂಡು, ಅಶೋಕಪುರಂ, ಚಾಮುಂಡಿ ಪುರಂ, ನಜರ್‌ಬಾದ್ ಮತ್ತು ತುಳಸಿದಾಸ್ ಆಸ್ಪತ್ರೆಯ ಬಳಿ ಇರುವವರು ಪೂಜಾ ಸಾಮಗ್ರಿಗಳೊಡನೆ ಬಂದು ದೇವಿಗೆ ತಂಪಿನ ಆರತಿ ಬೆಳಗಿ ಹೋಗುತ್ತಾರೆ. ಸಂಜೆ ಐದು ಗಂಟೆಯ ವೇಳೆಗೆ ಅರಮನೆಯಿಂದ ತಮ್ಮಡಿಯವರು ಒಂದು ಕುಕ್ಕೆ ಗುಗ್ಗರಿ ಎರಡು ಎಳನೀರು ಪೂಜಾಸಾಮಗ್ರಿಗಳೊಡನೆ ತಂಪಿನ ಆರತಿಗಳನ್ನು ನಡುಮುಡಿಯ ಮೇಲೆ ಮಾರ್ತಾಂಡ ದ್ವಾರದ ಮೂಲಕ ತರುತ್ತಾರೆ. ನಂತರ ಅವರೇ ಬಿಸಿಲುಮಾರಮ್ಮನ ಪೂಜೆ ಮಾಡಿ ಆರತಿಯನ್ನು ಬೆಳಗಿ ನಂತರ ತಂಪಿನ ಆರತಿಯನ್ನು ಬಿನ್ನ ಮಾಡಿ ಅರ್ಧ ಪಾಲು ಅರಮನೆಗೆ ತೆಗೆದುಕೊಂಡು ಮಿಕ್ಕೆಲ್ಲವನ್ನೂ ಪೂಜೆಯ ಹಕ್ಕುದಾರರಿಗೆ ಕೊಟ್ಟು ನಡುಮುಡಿಯ ಮೇಲೆ ಅರಮನೆಗೆ ಹಿಂದಿರುಗುತ್ತಾರೆ.

ಈಗ್ಗೆ 50 ವರ್ಷಗಳ ಹಿಂದೆ ಬಿಸಿಲುಮಾರಮ್ಮನ ಗುಡಿಯವರು ಸಿಡಿಯನ್ನು ಕಟ್ಟುತ್ತಿದ್ದರೂ22 ಸಿಡಿಯಾಡುವವನು ಒಂದು ವಾರದಿಂದಲೇ ಸಾತ್ವಿಕ ಆಹಾರವನ್ನು ಉಂಡು ಸಿಡಿಯಾಡುವ ದಿನ ಸಂಪೂರ್ಣ ಉಪವಾಸದಿಂದಲೇ ಸಿಡಿಯಾಡುತ್ತಿದ್ದ. 1920ರ ದಶಕಗಳಲ್ಲಿ ಸಿಡಿಯಾಡುವ ಓರ್ವವ್ಯಕ್ತಿಗೆ ಬಲವಾದ ಪೆಟ್ಟಾದ ಕಾರಣದಿಂದ ಸಿಡಿ ಯನ್ನು ಬೊಂಬೆಗಳಿಂದಲೇ ಆಡಿಸುತ್ತಿದ್ದರು. ಇತ್ತೀಚೆಗೆ ಮಾರಿಸಿಡಿ ತಂಪಿನ ಆರತಿ ಯಂಥ ಹಬ್ಬ ಮುಕ್ತಾಯವಾಗುತ್ತಿರುವುದು ಸಂಪ್ರದಾಯ ಮಡಿಲಲ್ಲಿ ಮಹತ್ತರವಾದ ಬದಲಾವಣೆ ಎನ್ನಬಹುದು.

ಕೊನೆಯದಾಗಿ ಪ್ರತಿದಿನವೂ ನಡೆಯುವ ಪೂಜೆ ಆಧುನಿಕ ಜಗತ್ತಿನಲ್ಲಿ ವೈಜ್ಞಾ ನಿಕ ಬೆಳಕಿನಲ್ಲೂ ಪ್ರಕೃತಿಯ ಕಡೆ ಭೀತಿಯ ನೋಟ ಎಂತಹವರಿಗಾದರೂ ನಂಬಿಗೆ ಯನ್ನು ರೂಪಿಸುವಂತಹುದು ಮಕ್ಕಳಿಗೆ, ಕೆಲವು ವೇಳೆ ದೊಡ್ಡವರಿಗೂ ಬರುವ ಅನೇಕ ರೀತಿಯ ಸಿಡುಬಿಗೆ ನಿವಾರಣೆ ಹಾಗೂ ತಂಪಿನ ಕಾರುಣ್ಯಾಗಿ ರಕ್ಷೆ ನೀಡಲು ಸತತವಾಗಿ

ಬೇಸರಗೊಳ್ಳದೆ ಪೂಜೆಗಳನ್ನೊಪ್ಪಿಸಿಕೊಳ್ಳುತ್ತಿರುವ ಬಿಸಿಲುಮಾರಮ್ಮನ ಗುಡಿಗೆ ಸಾವಿರಾರು ಜನ ಭಕ್ತರು ಬೆಳಗಿನಿಂದ ರಾತ್ರಿ ಹತ್ತು ಗಂಟೆಯವರೆಗೂ ತಮ್ಮ ಪೂಜೆಯನ್ನು ಸಲ್ಲಿಸುತ್ತಾರೆ. ಈ ಭಕ್ತರು ತಮ್ಮೊಡನೆ ಸಿಡಿಬು ಕಾಣಿಸಿಕೊಂಡವರನ್ನೂ ಕರೆದುಕೊಂಡು ಜೊತೆಯಲ್ಲಿ ಎಳನೀರು, ಕೈಎಣ್ಣೆ, ಅರಿಶಿನಕುಂಕುಮ, ಹೂವು ಕಡ್ಡಿ ಕರ್ಪೂರ, ಮೊಸರನ್ನ, ಕೋಳಿಮರಿಗಳನ್ನು ತರುತ್ತಾರೆ. ಬಿಸಿಲುಮಾರಮ್ಮನಿಗೆ ಮತ್ತು ಪಕ್ಕದಲ್ಲಿರುವ ಚಿಕ್ಕಮ್ಮನಿಗೆ ಕರೆತಂದವರಿಂದ ಎಳೆನೀರಿನಿಂದ ಅಭಿಷೇಕ ಮಾಡಿ ಅರಶಿನ ಕುಂಕುಮವನ್ನಿಟ್ಟು ಕಡ್ಡಿ ಹಚ್ಚಿ ಕಾಯೊಡೆದು ಮೊಸರನ್ನ ನೈವೇದ್ಯ ಮಾಡಿ ಆರತಿ ಬೆಳಗಿಸುತ್ತಾರೆ. ನಂತರ ತಾವು ತಂದಿದ್ದ ಕೋಳಿಗಳನ್ನು (ಕೆಲವರು) ತಾವೇ ಬಲಿಗೊಟ್ಟು ಹೋಗುವರು, ಮತ್ತೆ ಕೆಲವರು ಪೂಜೆಯ ಹಕ್ಕುದಾರರಿಗೆ ಕೊಟ್ಟು ಹಿಂದಿರುಗುತ್ತಾರೆ. ಅನೇಕರು ತಂಪಿನ ಆರತಿಯನ್ನು ಬೆಳಗಿ ತಾಯಿಯ ಮೇಲಿಂದ ಸುರಿದ ಎಳನೀರು ಮತ್ತು ಅರಶಿನ ಕುಂಕುಮ ಹೂವುಗಳನ್ನು ಪ್ರಸಾದದಂತೆ ತೆಗೆದುಕೊಂಡು ಆಕೆಯ ಮೇಲಿರುವ ಬೇವಿನ ಎಲೆಯನ್ನು ತೆಗೆದುಕೊಂಡು ಅಲ್ಲಿ ನಿಂತಿರುವ ಎಳೆನೀರನ್ನು ತಾವು ಪ್ರೋಕ್ಷಣೆ ಮಾಡಿಕೊಂಡು ಹಿಂದಿರುಗುವ ನಾಗರಿಕರ ಪದ್ಧತಿಯನ್ನು ಇಂದಿಗೂ ಕಾಣಬಹುದಾಗಿದೆ.

ಒಟ್ಟನಲ್ಲಿ ಬಿಸಿಲಿನಲ್ಲಿ ಕಾದು ತನ್ನ ಭಕ್ತರಿಗೆ ಬಿಸಿಲಿನ ಝಳದಿಂದ ಉಂಟಾಗುವ ರೋಗಗಳನ್ನು ನಿವಾರಣೆ ಮಾಡಿ ತಂಪು ಉಂಟುಮಾಡುತ್ತಿರುವ ಈ ಗ್ರಾಮದೇವತೆಯು ಅಂದು ಕೋಟೆಯೊಳಗೆ ಮತ್ತು ಇಂದು ಕೋಟೆಯ ಪಕ್ಕದಲ್ಲಿ ಇರುವುದರಿಂದ ಕೋಟೆ ಬಿಸಿಲುಮಾರಮ್ಮ ಎಂಬ ನಾಮಧೇಯದಿಂದ ಜನಪ್ರಿಯಳಾಗಿರುವಳೆಂಬುದು ಸ್ಪಷ್ಟವಾಗುತ್ತದೆ.

ಅಡಿ ಟಿಪ್ಪಣಿಗಳು

1 ಬೆನಗಲ್ ರಾಮರಾವ್ : ಪುರಾಣನಾಮಚೂಡಾಮಣಿ, 7 ನೇ ಅಧ್ಯಾಯ ಪು· 28

2 ಮೈಸೂರು ಸಂಸ್ಥಾನದ ಪ್ರಭುಗಳು ಶ್ರೀಮನ್ಮಹಾರಾಜರವರ ವಂಶಾವಳಿ, ಭಾಗ 2, ಪುಟ 90

3 Colonel Wilks : *History of Mysore*, p. 41

4 ಮೈಸೂರು ಸಂಸ್ಥಾನದ ಪ್ರಭುಗಳು ಶ್ರೀಮನ್ಮಹಾರಾಜರವರ ವಂಶಾವಳಿ

5 Hayavadana Rao : *History of Mysore*, Vol-1 p. 35 & 518

6 ಮೈಸೂರು ದೊರೆಗಳ ಪೂರ್ವಾಭ್ಯುದಯ ವಿವರ, 1, 2 ಮತ್ತು 1.9

7 ಚಿಕ್ಕದೇವರಾಜರ ವಂಶಾವಳಿ–ಪುಟ ೨೩

8 ಮೈಸೂರು ಒಡೆಯರು, ಕೆ·ಬಿ· 530, ಹತ್ತೊಂಬತ್ತನೆಯ ಶತಮಾನ

9 ಮೈಸೂರು ಸಂಸ್ಥಾನದ ಪ್ರಭುಗಳು, ಶ್ರೀಮನ್ಮಹಾರಾಜರ ವಂಶಾವಳಿ ಭಾಗ 1, ಪುಟ 242

10 ಮೈಸೂರು ಸಂಸ್ಥಾನದ ಪ್ರಭುಗಳು ಶ್ರೀಮನ್ಮಹಾರಾಜರ ವಂಶಾವಳಿ ಭಾಗ 2, ಪು. 140-42

11 Constance E. Parsons : *Mysore City*, p. 132

12 ಈ ಗುಂಪಿನವರು ಹಿಂದಿನಿಂದ ನಡೆದುಕೊಳ್ಳುತ್ತಿದ್ದಂತೆಯೇ ಇಂದಿಗೂ ನಡೆದುಕೊಳ್ಳುತ್ತಿದ್ದಾರೆ.

13 ಪತ್ರದ ಅಂಕೆ 321, ತಾರೀಕು 13-2-1912

14 ಕ್ರಮಸಂಖ್ಯೆ 421, ಪತ್ರದ ಅಂಕೆ 1843, ತಾರೀಕು 8-11-23

15 ಹರಿಕೆ—ತಾರೀಖು 29 ಮೇ 1924

16 ಕ್ರಮಸಂಖ್ಯೆ 45, ವಿಷಯ : ಮಾರಿಸಿಡಿ, ಸಂಪುಟ 2

17 ಕ್ರಮಸಂಖ್ಯೆ 421. ಪತ್ರಸಂಖ್ಯೆ 321 ತಾರೀಖು 13-1-1912

18 ಅದೇ

19 ಈ ಸಂದರ್ಭದಲ್ಲಿ ಹೋತದ ಚರ್ಮ ಹರಿದರೆ ನಗಾರಿಯವನಿಗೆ ಉಪಯೋಗದ ಕೊರತೆಯಾದೀತೆಂದು ಅದರ ತಳಕ್ಕೆ ಗೋಣಿಯನ್ನು ಉಪಯೋಗಿಸುತ್ತಾರೆಂದು ಹೇಳಲಾಗಿದೆ.

20 ಹೋತದ ಯಾವ ಅಂಗವಾದರೂ ಆದೀತು ; ಆದರೆ ಬೇರೆಡೆ ತುಂಡರಿಸಿದರೆ ನಗಾರಿಯವನಿಗೆ ಆರ್ಥಿಕ ನಷ್ಟವಾಗುವುದೆಂದು ಅದರ ಕಿವಿಯನ್ನು ಮಾತ್ರ ಅಗ್ನಿಗೆ ಅರ್ಪಿಸುತ್ತಾರೆ.

21 ಒಂದು ಹಿತ್ತಾಳೆ ಚೊಂಬಿನಲ್ಲಿ ಅರಿಶಿನಕುಂಕುಮ ಒಂದು ಪಾವಲಿ ಬಿಲ್ಲೆ ಬಳೆ ಬಿಚ್ಚೋಲೆ ಕರಿಮಣಿಯನ್ನು ಹಾಕಿ ದೇವಿಯ ಮುಖವಾಡವಿಟ್ಟು ಅಡಕೆ ಹೂವಿನಿಂದ ಅಲಂಕರಿಸುತ್ತಾರೆ. ಇದಕ್ಕೆ ಕಳಸವನ್ನು ಪೂಜಿಸಿಕೊಡುವುದು ಎನ್ನುತ್ತಾರೆ.

22 ಬಿ. 422 ಕಡತದ ಅಂಕೆ 46, ವಿಷಯ : ಮಾರಿಸಿಡಿ

23 ಕಾನ್ಸ್ಟೆನ್ಸ್. ಇ. ಪಾರ್ಸನ್ಸ್‌ರವರು "ಮೈಸೂರು ಸಿಟಿ" ಗ್ರಂಥದಲ್ಲಿ ಈ ಹಿರಿದೇವತೆಯ ಗುಡಿಯು, ಗೋಪುರದ ಗಡಿಯಾರದ ಹತ್ತಿರ ಹಳೇ ಅಂಚೆ ಕಛೇರಿಯ ಬಳಿಯಲ್ಲಿ ಎರಡು ಚರ್ಚುಗಳ ಸಮೀಪದಲ್ಲಿ ಚೌಕಿ ಬಳಿ ಇದೆ ಎಂದು 1930 ರಲ್ಲಿ ತಿಳಿಸಿದ್ದಾರೆ. ಇದು ಈಗ ಅಶೋಕ ರಸ್ತೆಯ ಸಮೀಪ ಸಂಗಮ ಸಿನಿಮಾ ಮಂದಿರದ ಬಳಿ ಇದೆ.

ಜಿ. ಆರ್. ಕುಪ್ಪುಸ್ವಾಮಿ

ಕಾಂಚೀಪುರದ ವರದರಾಜಸ್ವಾಮಿ ದೇವಾಲಯದ ರಾಜಕೀಯ ಇತಿಹಾಸ ಹಾಗೂ ಸಾಮಾಜಿಕ ವ್ಯವಸ್ಥೆ

ಕಾಂಚೀಪುರ

ಇತಿಹಾಸ ಪ್ರಸಿದ್ಧವಾದ ಕಾಂಚೀಪುರವು ಅನಾದಿಕಾಲದಿಂದಲೂ ಒಂದು ಹೆಸರುವಾಸಿಯಾದ ಮುಕ್ತಿಕ್ಷೇತ್ರವಾಗಿದೆ. ಶ್ರೀವೈಷ್ಣವರು ತಮ್ಮ ಜೀವಮಾನ ಕಾಲದಲ್ಲಿ ಸಂದರ್ಶಿಸಿ ಸೇವೆ ಸಲ್ಲಿಸಬೇಕಾದ ನಾಲ್ಕು ದಿವ್ಯ ಕ್ಷೇತ್ರಗಳಲ್ಲಿ ಕಾಂಚೀಪುರವನ್ನು ಒಂದು ಪ್ರಮುಖ ಕ್ಷೇತ್ರವೆಂದು ಪರಿಗಣಿಸಿದ್ದಾರೆ. ಕಾಂಚೀಪುರದ ವರದರಾಜಸ್ವಾಮಿ, ಶ್ರೀರಂಗದ ರಂಗನಾಥಸ್ವಾಮಿ, ತಿರುಪತಿಯ ಶ್ರೀನಿವಾಸ ಸ್ವಾಮಿ – ಈ ದೇವರುಗಳು ಶ್ರೀ ವೈಷ್ಣವರ ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಿದ್ದಾರೆ. ಕಾಂಚೀಪುರವು ಇತಿಹಾಸ ಹಾಗೂ ಶಿಕ್ಷಣ ರಂಗದಲ್ಲಿ ಸಾಂಸ್ಕೃತಿಕ ಕೇಂದ್ರ ಮತ್ತು ಪ್ರಮುಖ ಘಟಿಕಾ ಸ್ಥಾನವೆಂದು ಮೆರೆದಿದೆ. ಶಿವಕಾಂಚಿ ಹಾಗೂ ವಿಷ್ಣುಕಾಂಚಿಯೆಂದು ಕಾಂಚೀಪುರವನ್ನು ಎರಡು ಪ್ರಮುಖ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಶಿವಕಾಂಚಿಯು ಪ್ರಮಾಣದಲ್ಲಿ ದೊಡ್ಡದಾಗಿದೆ. ಪ್ರಮುಖ ಶಿವಾಲಯಗಳಾದ ಕೈಲಾಸನಾಥ, ಏಕಾಂಬರೇಶ್ವರ ಹಾಗೂ ಕಾಮಾಕ್ಷಿ ಅಮ್ಮನ್ ಈ ದೇವತೆಗಳ ದೇವಾಲಯಗಳನ್ನು ಇಲ್ಲಿ ಕಾಣುತ್ತೇವೆ. ವಿಷ್ಣುಕಾಂಚಿಯು ಪ್ರಮಾಣದಲ್ಲಿ ಸಣ್ಣದಾಗಿದ್ದು, ಅದರ ಹಿರಿಮೆಯು ವರದರಾಜ ಸ್ವಾಮಿ ದೇವಾಲಯದ ಸುತ್ತಲೂ ಹೆಣೆದುಕೊಂಡಿದೆ. ವಿಷ್ಣು ಹಾಗೂ ಶಿವ ಕಾಂಚಿ, ಈ ಎರಡು ನಾಮಧೇಯಗಳು ತೀರ ಇತ್ತೀಚಿನದಾಗಿದ್ದು ಶ್ರೀ ಕೃಷ್ಣದೇವ ರಾಯನ ಶಿಲಾಶಾಸನದಲ್ಲಿ (1516) ಮೊಟ್ಟ ಮೊದಲಿಗೆ ಕೇಳಿಬರುತ್ತದೆ. ಕಾಂಚೀ ಪುರದ ಮೂಲ ಹೆಸರು ಅತ್ತಿಯೂರು ಅಥವಾ ತಿರುವತ್ತಿಯೂರು, ಅದು ವರದರಾಜ ಸ್ವಾಮಿ ದೇವಾಲಯದ ನೆರೆಹೊರೆಯ ಪ್ರದೇಶಗಳನ್ನು ಒಳಗೊಂಡಿತ್ತು. ಆಳ್ವಾರುಗಳ ಹಾಡುಗಳಲ್ಲಿ ಮತ್ತು ಚೋಳ ಅರಸರ ಶಿಲಾಶಾಸನಗಳಲ್ಲಿ ಈ ಮೂಲ ಹೆಸರಿನ ಉಲ್ಲೇಖ ವಿದೆ. ಹಿರಿಯ ಆಳ್ವಾರ್ ಎನಿಸಿಕೊಂಡ ಪೂದತ್ತಾಳ್ವಾರ್ ಅವರು ವರದರಾಜಸ್ವಾಮಿ

ಯನ್ನು ಅತ್ತಿಯೂರಾನ್ ಎಂದು ಕರೆದಿದ್ದಾರೆ. ತಿರುವತ್ತಿಯೂರು ಕ್ರಮೇಣ ಕಾಂಚೀಪುರದಲ್ಲಿ ವಿಲೀನಗೊಂಡಿದ್ದು, ಮೊದಲಿಗೆ ಒಂದು ಪ್ರತ್ಯೇಕ ಗ್ರಾಮವಾಗಿತ್ತು. 13ನೇ ಶತಮಾನದ ಶಿಲಾಶಾಸನದಲ್ಲಿ ಮಾತ್ರ ಕಾಂಚೀಪುರದ ತಿರುವತ್ತಿಯೂರು ಎಂಬ ಉಲ್ಲೇಖವಿದೆ. ಅತ್ತಿಯೂರು ಶ್ರೀವೈಷ್ಣವರ ಮಂಗಳಾಶಾಸನದಲ್ಲಿ ದಿವ್ಯ-ದೇಶವೆಂದು ಪ್ರಖ್ಯಾತಿ ಪಡೆಯಿತು.

ಸ್ಥಳ ಪುರಾಣದಲ್ಲಿ ಕಂಡು ಬರುವ ಕಥೆಯ ಪ್ರಕಾರ ಅತ್ತಿಯೂರು ಅಥವಾ ಅತ್ತಿಗಿರಿಯ ವ್ಯುತ್ಪತ್ತಿಯು ಹೀಗಿದೆ. ಅತ್ತಿ ಅಥವಾ ಔದುಂಬರವೃಕ್ಷವು ವೈಷ್ಣವರಿಗೆ ಅತಿ ಶ್ರೇಷ್ಠ ವೃಕ್ಷ. ವಿಷ್ಣು ಸಹಸ್ರ ನಾಮದಲ್ಲಿ ವಿಷ್ಣುವನ್ನು 'ಔದುಂಬರ' ಎಂದು ಸಂಬೋಧಿಸಲಾಗಿದೆ. ವಿಷ್ಣು ವಿಗ್ರಹವನ್ನು ರೂಪಿಸಲು ಮೊದಲಿಗೆ ಔದುಂಬರ ವೃಕ್ಷವನ್ನೇ ಉಪಯೋಗಿಸಲಾಗಿದ್ದು, ಅನಂತಸರಸ ಮಂಟಪದಲ್ಲಿ ಪ್ರತಿಷ್ಠಿಸಿರುವ 'ಅತ್ತಿವರದ' ವಿಗ್ರಹವನ್ನು ಅತ್ತಿ ಮರದಿಂದ ಸಿದ್ಧಪಡಿಸಲಾಗಿದೆ. ಮೊದಲಿಗೆ ಇದೇ ವರದರಾಜ ಸ್ವಾಮಿಯ ಮೂಲವಿಗ್ರಹವಾಗಿತ್ತು. ಅತ್ತಿಗಿರಿಯ ಮೂಲದ ಬಗ್ಗೆ ಮತ್ತೊಂದು ದಂತ ಕಥೆಯುಂಟು. ವೈಷ್ಣವ ಸಾಹಿತ್ಯದಲ್ಲಿ ವರದರಾಜ ಸ್ವಾಮಿಯನ್ನು ಹಸ್ತಿಗಿರಿನಾಥ ಎಂದು ಉಲ್ಲೇಖಿಸಲಾಗಿದೆಯಲ್ಲದೆ ರಾಮಾನುಜಾಚಾರ್ಯರು ಮತ್ತು ಅವರ ಸಮಕಾಲೀನರಾಗಿದ್ದ ವರದರಾಜ ಸ್ವಾಮಿಯನ್ನು ಕೂರತ್ತಾಳ್ವಾರರು 'ಕರಿಗಿರೀಶ', 'ಹಸ್ತಿಭೂಷಣ' ನೆಂದೂ ಕೊಂಡಾಡಿದ್ದಾರೆ. ಇವರ ನಂತರವೇ ವೇದಾಂತ ದೇಶಿಕರು ಅತ್ತಿಗಿರಿಯನ್ನು ಹಸ್ತಿಗಿರಿ, ಕರಿಗಿರಿ, ಅಥವಾ ವೇಶಮಟ್ಟಿ, 'ನಾಗಮಟ್ಟಿ' ಎಂದು ಕರೆದಿದ್ದರು. ಕೆಲವು ಶಾಸನಗಳಲ್ಲಿಯೂ ಕೂಡ ವರದರಾಜ ಸ್ವಾಮಿಯನ್ನು ಹಸ್ತಿಗಿರಿಯ ದೇವರೆಂದ ಕರೆದಿವೆ. ಗಂಡ ಗೋಪಾಲನ ಕ್ರಿ.ಶ. 1272ರ ಶಾಸನವು "ದ್ವಿರದಾಚಲನಾಥ" ಎಂದು ಹೆಸರಿಸಿದೆ. ಸ್ಥಳಪುರಾಣದ ಪ್ರಕಾರ, ಹಸ್ತಿಗಿರಿಯು ಗಜೇಂದ್ರನ ನಿವಾಸಸ್ಥಾನವಾಗಿದ್ದು ಮಹಾವಿಷ್ಣುವು ವರದರಾಜಸ್ವಾಮಿಯ ರೂಪದಲ್ಲಿ ಗಜೇಂದ್ರನಿಗೆ ಮೊಸಳೆಯ ಹಿಡಿತದಿಂದ ಮೋಕ್ಷ ದೊರಕಿಸಿದನೆಂದು ಹೇಳಲಾಗಿದೆ. ಅಲ್ಲದೆ ವರದರಾಜಸ್ವಾಮಿಯ ಮೂಲ ಗರ್ಭಗೃಹವು ಕೂಡ ಎತ್ತರವಾದ ವೇದಿಕೆಯ ಮೇಲಿದೆ. ಹಸ್ತಿಗಿರಿ ಅಥವಾ ಮಟ್ಟಿಯೆಂದು ಪ್ರಸಿದ್ಧಿಯಾಗಿದೆ. ಹಸ್ತಿಗಿರಿಯು ತಮಿಳರಲ್ಲಿ ಅತ್ತಿಗಿರಿಯೆಂದು ಪರಿವರ್ತನೆಗೊಂಡಿದ್ದು ಸಾಕು. ವೇದಾಂತ ದೇಶಿಕರ ಕೃತಿಗಳಲ್ಲಿ ವರದರಾಜ ಸ್ವಾಮಿಯನ್ನು 'ಅತ್ತಿಗಿರಿ' ಆಳ್ವಾರ್ ಎಂದು ಕರೆಯಲಾಗಿದೆ. ಶಾಸನಗಳಲ್ಲಿಯೂ ಕೂಡ ಅತ್ತಿಯೂರು ನಾಮಧೇಯವು ಸಂಸ್ಕೃತದಿಂದ ಇದೇ ರೀತಿ ರೂಪಾಂತರ ಹೊಂದಿರಬೇಕು. ಅದೇ ಮಾದರಿಯಲ್ಲಿ ಮಟ್ಟಿಮಾಮಲ್ಲಪುರಂ ಎಂಬುದು ಮಹಾಬಲಿಪುರಂ ಎಂದೂ ಕಾಂಚಿ ಅಥವಾ ಕಾಚಿವೇಡು ಕಾಂಚೀಪುರಂ ಎಂದೂ ಸಂಸ್ಕೃತ ರೂಪವನ್ನು ಹೊಂದಿವೆ. ಮತ್ತೆರಡು ಹೆಸರುಗಳು ವೈಷ್ಣವ ಸಾಹಿತ್ಯದಲ್ಲಿ ಕೇಳಿಬರುತ್ತವೆ. ಕಾಂಚೀಪುರವನ್ನು ಶ್ರೀ ವೈಷ್ಣವರು ಪೆರುಮಾಳ್ ಕೋಯಿಲ್ ಹಾಗೂ ತ್ಯಾಗ ಮಂಡಲವೆಂದು ಕೂಡ ಕರೆಯುವ ವಾಡಿಕೆಯಿದೆ. ಮೊದಲನೆಯ ಹೆಸರು ಅಧಿಕ ಪ್ರಚಾರದಲ್ಲಿದ್ದು ರಾಮಾ

ನುಜರ ಕಾಲದಿಂದಲೂ ಶ್ರೀರಂಗವು ಕೋವಿಲ್ ಎಂದೂ, ತಿರುಪತಿಯು ತಿರುಮಲೈಯೆಂದು, ಮತ್ತು ಕಾಂಚಿಯು ಪೆರುಮಾಳ್ ಕೋಯಿಲ್ ಎಂದು ಪ್ರಸಿದ್ಧಿ ಪಡೆದಿವೆ. ಎರಡನೆಯ ಹೆಸರು 13ನೆಯ ಶತಮಾನದಿಂದ ಈಚೆಗೆ ಎನ್‌ಬಳಗಿಯ ಪೆರುಮಾಳ್ ಜೀಯರ್ ಅವರ 'ಗುರುಪರಂಪರೆ' ಮತ್ತು ಅಳಗಿಯ ಮನವಾಳ ನಾಯನಾರ್ ಅವರ 'ಆಚಾರ್ಯ ಹೃದಯಂ' ಎಂಬ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಆದರೆ ಈ ಎರಡನೆಯ ಹೆಸರು ಅಷ್ಟು ಪ್ರಚಾರದಲ್ಲಿಲ್ಲ. ಕಾಂಚಿಗೆ ತ್ಯಾಗಮಂಡಲವೆಂಬ ಹೆಸರು ಬರಲು ಸರಿಯಾದ ಕಾರಣವನ್ನು ಮುಂದೊಡಲು ಸಾಧ್ಯವಾಗದಿದ್ದರೂ ತ್ಯಾಗ ಅಂದರೆ ಕೊಡುಗೈಯೆಂದು ಅರ್ಥೈಸಿದರೆ, ವರದರಾಜರು ಕೊಡುಗೈ ದೇವರೆಂದು ಪ್ರಸಿದ್ಧಿಯಾಗಿರುವ ಕಾರಣ ಈ ಹೆಸರು ಬಂದಿರಬಹುದೆಂದು ಊಹಿಸಬಹುದು. ಅದೇ ರೀತಿ ಶ್ರೀರಂಗವನ್ನು ಭೋಗಮಂಡಲ ಹಾಗೂ ತಿರುಮಲೈಯನ್ನು ಪುಷ್ಪಮಂಡಲವೆಂದು ಕರೆಯುವ ವಾಡಿಕೆಯಿದೆ.

ವರದರಾಜ ಸ್ವಾಮಿ

ವರದರಾಜ ಸ್ವಾಮಿ ದೇವಸ್ಥಾನವನ್ನು ಮೊಟ್ಟ ಮೊದಲಿಗೆ ಉಲ್ಲೇಖಿಸಿರುವ ಕೀರ್ತಿಯೂ ಕೂಡ ಪೂದತ್ತಾಳ್ವಾರ್ ಅವರಿಗೇ ಸಲ್ಲತಕ್ಕದ್ದು. ಪೂದತ್ತಾಳ್ವಾರ್ ಅವರನ್ನು 1129ರ ಶಾಸನವೊಂದರಲ್ಲಿ ತಿರುವತ್ತಿಯೂರ್ ದೇವರನ್ನು ಹಾಡಿ ಹರಿಸಿದ ಆಳ್ವಾರ್ ಎಂದು ಕೂಡ ಸ್ಮರಿಸಲಾಗಿದೆ. (ತಿರುವತ್ತಿಯೂರ್ ಆಳ್ವಾರೈ ಪಾಡಿಯರುಳಿನ ಶ್ರೀ ಪೂದತ್ತಾಳ್ವಾರ್) : 1227 ಹಾಗೂ 1451 ರ ಶಾಸನಗಳಲ್ಲಿಯೂ ಕೂಡ ವರದರಾಜ ಸ್ವಾಮಿಯ ಉಲ್ಲೇಖವಿದ್ದು ಮೊದಲನೆ ಶಾಸನದಲ್ಲಿ ಸ್ವಾಮಿಯನ್ನು “ವರಮ್‌ತರುಮ್‌ಪೆರುಮಾಳ್” ಎಂದು ಕೊಂಡಾಡಲಾಗಿದೆ. ವರದರಾಜ ಸ್ವಾಮಿಯ ಮೂಲ ನಾಮಧೇಯವು ಕೂಡ ಶಾಸನ ಹಾಗೂ ಸಾಹಿತ್ಯಗಳಲ್ಲಿ ವಿವಿಧ ರೂಪಗಳಲ್ಲಿ ಉಲ್ಲೇಖಿಸಲಾಗಿದೆ. ಕ್ರಮೇಣ ಇತರ ನಾಮಧೇಯಗಳು ವಿರಳವಾಗಿ ಉಪಯೋಗಿಸಲ್ಪಟ್ಟು, 'ವರದರಾಜ' ಎಂಬ ಹೆಸರು ಜನಪ್ರಿಯಗೊಂಡರೂ ಕೂಡ, ಚೋಳರ ಕಾಲದ ಶಾಸನಗಳಲ್ಲಿ ತಿರುವತ್ತಿಯೂರು ಆಳ್ವಾರ್, ಅತ್ತಿಯೂರು ಆಳ್ವಾರ್ ಅಥವಾ ತಿರುವತ್ತಿಯೂರು ನಿನ್ರರುಳಿಯ ಪೆರುಮಾಳ್ (ಅಂದರೆ ತಿರುವತ್ತಿಯೂರ್ ಅಧ್ಯಕ್ಷತೆ ವಹಿಸಿರುವ ದೇವರು) ಎಂದು ಸಂಬೋಧಿಸಲಾಗಿದೆ. ಆದರೆ ವಿಜಯನಗರದ ಕಾಲದ ವೇಳೆಗೆ ಈ ಹೆಸರುಗಳು ಕೇಳಿಬರುವುದಿಲ್ಲ. ಮೊದಲಿಗೆ ಬಳಕೆಯಲ್ಲಿದ್ದ ಇನ್ನಿತರ ತಮಿಳು ನಾಮಧೇಯಗಳನ್ನು ಕೆಲವು ಸಂದರ್ಭಗಳಲ್ಲಿ ಉಪಯೋಗಿಸಲಾಗಿವೆ. ಆಳ್ವಾರರು ತಮ್ಮ ಗ್ರಂಥಗಳಲ್ಲಿ ವಿಷ್ಣುವನ್ನು ವರ್ಣಿಸುವಾಗ ಅರುಳಾಳ ಪೆರುಮಾಳ್, ಪೇರರುಳಾಳರ್ ಎಂದೂ ವರದರಾಜ ಸ್ವಾಮಿಯನ್ನು ಕೊಂಡಾಡಿದ್ದಾರೆ. ಅರುಳ್ ಎಂದರೆ ಅನುಗ್ರಹ, ಅರುಳಾಳರ್ ಎಂದರೆ ಅನುಗ್ರಹಿಸುವ ದೇವರೆಂದು ಅರ್ಥೈಸಲಾಗಿದೆ. ವರಮ್ ತರುಮ್ ಪೆರುಮಾಳ್ ಎಂದು ಕೂಡ

ರೂಢಿಯಲ್ಲಿತ್ತು. ಕೂರತ್ತಾಳ್ವಾರ್ ಅವರು ವರದರಾಜಸ್ತವದಲ್ಲಿ ವರದ ಅಥವಾ ವರದ ರಾಜ ಎಂದು ಸಂಸ್ಕೃತ ಸಮಾನ ಪದವನ್ನು ಬಳಕೆಯಲ್ಲಿ ತಂದರು. ತಿರುಕಚ್ಚಿ ನಂಬಿಯು ದೇವರಾಜಾಷ್ಟಕದಲ್ಲಿ ದೇವರಾಜಾ ಅಥವಾ ಹಸ್ತಿಗಿರಿನಾಥ ಎಂದು ವರದರಾಜಸ್ವಾಮಿ ಯನ್ನು ಸಂಬೋಧಿಸಿದ್ದಾನೆ. ತಮಿಳು ಶಾಸನಗಳಲ್ಲಿ ವರದರಾಜ ಸ್ವಾಮಿಯನ್ನು ದೇವ ಪೆರುಮಾಳ್ ತೆಪ್ಪೆರುಮಾಳ್ ಎಂದೂ, ಕನ್ನಡ ಶಾಸನಗಳಲ್ಲಿ ಅಲ್ಲಾಳನಾಥ (ಅರುಳಾಳನಾಥ ಪದದ ಕನ್ನಡ ರೂಪಾಂತರ ಎಂದೂ ಇನ್ನು ಕೆಲವು ಇತ್ತೀಚಿನ ಶಾಸನ ಗಳಲ್ಲಿ ಕಾಂಚೀಪುರತ್ತು ಪೆರುಮಾಳ್ ಎಂದೂ ಕರೆಯಲಾಗಿದೆ.

ವರದರಾಜರ ಪ್ರಧಾನ ದೇವಿಯರಿಗೆ ಪ್ರತ್ಯೇಕ ಆಲಯವಿದ್ದು ಪೆರುಂದೇವಿ ತಾಯಾರ್ ಎಂದು ಕರೆಯಲಾಗಿತ್ತು. ಶ್ರೀವೈಷ್ಣವರಲ್ಲಿ ಶ್ರೀ ಅಥವಾ ಲಕ್ಷ್ಮಿ, ವಿಷ್ಣುವಿನ ಅರ್ಧಾಂಗಿಯನ್ನು ಮತ್ತು ಶೈವರಲ್ಲಿ ಅಮ್ಮನ್ ಎಂದು ಶಿವನ ಅರ್ಧಾಂಗಿ ಯನ್ನೂ ಸೂಚಿಸಿರುತ್ತದೆ. 1268ರ ಶಾಸನದಲ್ಲಿ ಪೆರಿಯ ಪೆರಾಟ್ಟಿಯಾರ್, ಹಾಗೂ 1487ರ ಶಾಸನದಲ್ಲಿ ಪೆರುಂದೇವಿಯಾರ್ ಎಂದು ಕರೆಯಲಾಗಿದೆ. (ಪೆರಾಟ್ಟಿ ಪೆರಾನ್ ಪದದ ಸ್ತ್ರೀಲಿಂಗ–ಸಾಮಾನ್ಯವಾಗಿ ವಿಷ್ಣುವಿನ ಅರ್ಧಾಂಗಿಗೆ ಉಪಯೋಗಿಸಲ್ಪಡುವುದು.)

ರಾಜಾಶ್ರಯ

ವರದರಾಜಸ್ವಾಮಿ ದೇವಾಲಯದಲ್ಲಿರುವ ಸುಮಾರು 350 ಶಿಲಾಶಾಸನಗಳ ಅಭ್ಯಾಸವು ಅತ್ತಿಯೂರು ಅಥವಾ ಕಾಂಚಿಯು ದಕ್ಷಿಣಭಾರತದ ರಾಜಕೀಯ ಇತಿಹಾಸ ದಲ್ಲಿ ಅನುಭವಿಸಿದ ಏರುಪೇರನ್ನು ತಿಳಿಯಲು ಅನುಕೂಲವಾಗಿದೆ. ತಮಿಳರ ರಾಜಕೀಯ ಇತಿಹಾಸದಲ್ಲಿ ಕಾಂಚಿಯು ಅವಿರತವಾಗಿ ಪ್ರಮುಖ ಪಾತ್ರವನ್ನು ವಹಿಸಿದ್ದಲ್ಲದೆ ಅದರ– ಸ್ವಾಮ್ಯತೆಗಾಗಿ ಅಲ್ಲಿಯ ಆಳರಸರು ಹಂಬಲಿಸಿದರು. ಚೋಳ, ಪಾಂಡ್ಯ, ಹೊಯ್ಸಳ, ಕಾಕತೀಯ ಹಾಗೂ ವಿಜಯನಗರ ಅರಸರಲ್ಲದೆ, ಸಣ್ಣ ಪುಟ್ಟ ವಂಶಜರಾದ ತೆಲುಗು ಚೋಡರು, ಕಾಡವರಾಯರು ಹಾಗೂ ಶಂಬುವರಾಯರು, ಇವರೆಲ್ಲರಿಗೂ ಸಂಬಂಧಪಟ್ಟ ಶಿಲಾಶಾಸನಗಳು ಕಾಂಚಿಯ ಬಹುಮುಖ ಪಾತ್ರವನ್ನು ವರ್ಣಿಸುತ್ತವೆ. ವಿಜಯನಗರದ ಆಳರಸರ ನಂತರ ಕಾಂಚಿಯು ತನ್ನ ರಾಜಕೀಯ ಪ್ರತಿಭೆಯನ್ನು ಕಳೆದುಕೊಂಡಿತು. ಮೂರನೆಯ ಶ್ರೀರಂಗನ ಕಾಲದಲ್ಲಿ ದಾಮರ್ಲ ವೆಂಕಟಪ್ಪ ಮೊದಲಾದ ಸಣ್ಣ ಪುಟ್ಟ ಪಾಳೆಯಗಾರರ ಅಂಕಿತಕ್ಕೆ ಕಾಂಚಿಯು ಒಳಪಟ್ಟಿತು. 17ನೆಯ ಶತಮಾನದ ಉತ್ತರಾರ್ಧಭಾಗದಲ್ಲಿ ಕ್ರಮವಾಗಿ ಕಾಂಚಿಯು ಗೋಲ್ಕೊಂಡ ಸುಲ್ತಾನರು, ಕರ್ನಾ ಟಕದ ನವಾಬರು ಹಾಗೂ ಮೊಗಲರ ಆಡಳಿತಕ್ಕೆ ಒಳಪಟ್ಟಿತು. ಇದೇ ಅವಕಾಶವನ್ನು ಉಪಯೋಗಿಸಿಕೊಂಡು ಶಿವಾಜಿಯು ಕಾಂಚಿಯನ್ನು ಸ್ವಲ್ಪಕಾಲ ತನ್ನ ವಶಕ್ಕೆ ತೆಗೆದು ಕೊಂಡಿದ್ದನು. 18ನೇ ಶತಮಾನದ ಆದಿ ಭಾಗದಲ್ಲಿ ಆಂಗ್ಲರು ಹಾಗೂ ಫ್ರೆಂಚರು ಇವರ ನಡುವೆ ನಡೆದ ಕರ್ನಾಟಕ ಯುದ್ಧಗಳಲ್ಲಿ ಕೆಲವು ಕದನಗಳು ಕಾಂಚಿಯಲ್ಲಿ ಸಂಭವಿಸಿದವು. 1761 ರ ವೇಳೆಗೆ ಫ್ರೆಂಚರು ಹೊಂದಿದ ಪರಾಜಯದ ಕಾರಣ

ಕಾಂಚಿಯು ಆಂಗ್ಲರ ವಶವಾಯ್ತು. ಹೈದರನ ಹಸ್ತಕ್ಷೇಪವನ್ನು ಬಿಟ್ಟರೆ, ಕಾಂಚಿಯು ಆಂಗ್ಲ ಈಸ್ಟ್ ಇಂಡಿಯ ಕಂಪನಿಯ ವಶದಲ್ಲಿಯೇ ದೀರ್ಘಕಾಲ ಉಳಿಯಿತು. ಮತ್ತು 1809ರ ವೇಳೆಗೆ ಆಂಗ್ಲರು ಕರ್ನಾಟಕ ನವಾಬರಿಂದ ಕಾಂಚಿಯನ್ನು ನ್ಯಾಯಬದ್ಧವಾಗಿ ಪಡೆದರು. ಕಾಂಚಿಯು ರಾಜಕೀಯ ಇತಿಹಾಸದ ಏರಿಳಿತಗಳಿಗೆ ಒಳಗಾಗಿದ್ದರೂ ಕೂಡ ಆಳರಸರು ವರದರಾಜಸ್ವಾಮಿಗೆ ತಮ್ಮ ಸೇವೆಯನ್ನು ಅವ್ಯಾಹತವಾಗಿ ಅನಾದಿಕಾಲ ದಿಂದಲೂ ಸಲ್ಲಿಸುತ್ತ ಬಂದಿರುವುದಕ್ಕೆ ಅವರ ಶಾಸನಗಳೇ ಸಾಕ್ಷಿ. ವಿಜಯವನ್ನು ಗಳಿಸಿದ ಪ್ರತಿಯೊಬ್ಬ ಅರಸನೂ ಕೂಡ ವರದರಾಜ ಸ್ವಾಮಿ ದೇವಸ್ಥಾನಕ್ಕೆ ತನ್ನ ದೇಣಿಗೆಯನ್ನು ಕಾಣಿಕೆ, ಕಟ್ಟಡ ಅಥವಾ ಭೂಮಿಯ ರೂಪದಲ್ಲಿ ನೀಡಿದ್ದಾನೆ. ಈ ದೇವಸ್ಥಾನವು ಕೂಡ ಇಂದಿನವರೆಗೂ ತನ್ನ ಪ್ರತಿಭೆಯನ್ನು ಕಾಯ್ದುಕೊಂಡು ಬಂದಿದೆ.

ಪಲ್ಲವರಕಾಲದಲ್ಲಿ ವರದರಾಜಸ್ವಾಮಿ ದೇವಾಲಯವು ಅಸ್ತಿತ್ವದಲ್ಲಿದ್ದಿತೆಂದು ಪೂದತ್ತಾಳ್ವಾರರ ಹಾಡು(ಪಾಡಲ್)ಗಳಿಂದ ಕಂಡು ಬಂದರೂ ಕೂಡ ಶಿಲಾಶಾಸನಗಳು ದೊರೆತಿರುವುದಿಲ್ಲ. ಚೋಳ ಅರಸ ಆದಿತ್ಯನು ಪಲ್ಲವರನ್ನು ಸೋಲಿಸಿ ತೊಂಡೈಮಂಡಲದ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸಿ ಕಂಚಿಯನ್ನು ತನ್ನ ವಶದಲ್ಲಿಟ್ಟುಕೊಂಡಿದ್ದನೆಂದು ಕಂಚಿ, ತಕ್ಕೋಲಂ ಹಾಗೂ ತಿರುಕ್ಕಳಿಕುಂಡ್ರಂ ಶಾಸನಗಳಿಂದ ವ್ಯಕ್ತವಾಗುತ್ತದೆ. ರಾಜ ರಾಜ (I) ಹಾಗೂ ರಾಜಾಧಿರಾಜನ ಕಾಲದಲ್ಲಿ (1012–1054) ಕಂಚಿಯನ್ನು ಚೋಳರ ಎರಡನೆ ರಾಜಧಾನಿಯೆಂದು ಪರಿಗಣಿಸಲಾಗಿತ್ತು ಮತ್ತು ಉತ್ತರದ ಕಡೆಗೆ ರಾಜ್ಯ ವಿಸ್ತರಣೆಯ ದೃಷ್ಟಿಯಿಂದ ಅದೊಂದು ಪ್ರಮುಖ ನಗರವಾಗಿತ್ತು. ಕಾಂಚಿಯಲ್ಲಿಯೇ ಚೋಳ–ಚಾಳುಕ್ಯರ ಶಾಂತಿ ಒಪ್ಪಂದವನ್ನು ಕೂಡ ವೀರರಾಜೇಂದ್ರನ (I) ಕಾಲದಲ್ಲಿ (1063–65) ಮಾಡಲಾಯಿತು. ಅಲ್ಲಿಯೇ ಕುಲೋತ್ತುಂಗನು (I) ರಾಜಸಭೆ ಯೊಂದನ್ನು ನಡೆಸಿದನೆಂದು ಕೂಡ ಜಯಂಗೊಂಡಾರ್ ಕವಿಯು ಕಳಿಂಗತ್ತುಪರಣಿಯಲ್ಲಿ ಉಲ್ಲೇಖಿಸಿದ್ದಾರೆ. ಕಳಿಂಗದ ಮೇಲೆ ಸಾಧಿಸಿದ ವಿಜಯವನ್ನು ಅನುಲಕ್ಷಿಸಿ ಈ ಸಭೆ ನಡೆ ದಿರಬಹುದು. ಕುಲೋತ್ತುಂಗನ 43ನೆಯ ಆಳ್ವಿಕೆಯ ವರ್ಷದಲ್ಲಿ ವಿಷ್ಣುಭಕ್ತೆಯೊಬ್ಬಳು ವರದರಾಜಸ್ವಾಮಿಗೆ ದೀಪವೊಂದನ್ನು ದತ್ತಿಯಾಗಿ ನೀಡಿದಳು. ವರದರಾಜಸ್ವಾಮಿ ದೇವಾಲಯದಲ್ಲಿ ಕುಲೋತ್ತುಂಗನಿಗೆ ಸಂಬಂಧಿಸಿದಂತೆ 5 ಶಾಸನಗಳಿವೆ. ಅವನ ಪ್ರಖ್ಯಾತ ಸೇನಾನಿ ನರಲೋಕ ವೀರನು ವರದರಾಜಸ್ವಾಮಿಗೆ ಪ್ರಾಕಾರ, ಮಂಟಪ, ಪಾಕಶಾಲೆ ಗಳನ್ನು ಕಟ್ಟಿಸಿ ಕೊಟ್ಟದ್ದಲ್ಲದೆ, ಹರಿಯ ಮೂರ್ತಿ ಮತ್ತು ಸುವರ್ಣಕಲಶವನ್ನು ಸ್ಥಾಪಿಸಿ ದನು. ಪುಷ್ಪವನ ಹಾಗೂ ನಂದಾದೀಪಕ್ಕೆ ಅವಶ್ಯಕವಾದ ದೇಣಿಗೆಯನ್ನು ಕೊಟ್ಟು ಸ್ವಾಮಿಗೆ ಅಪಾರ ಸೇವೆ ಸಲ್ಲಿಸಿದನೆಂದು ಸಂಸ್ಕೃತ ಶಾಸನವೊಂದರಿಂದ ವ್ಯಕ್ತವಾಗುತ್ತದೆ. ನರಲೋಕವೀರನು ಕುಲೋತ್ತುಂಗನ ಉತ್ತರಾಧಿಕಾರಿ ವಿಕ್ರಮ ಚೋಳನ (1118–1135) ಅಧೀನದಲ್ಲೂ ಸೇವೆಸಲ್ಲಿಸಿದನು. ಸ್ವತಃ ವಿಕ್ರಮ ಚೋಳನು ವಿಕ್ರಮ ಚೋಳ ವಿನ್ನಗರಾಳ್ವಾರ್ ವಿಗ್ರಹವನ್ನು ಪ್ರತಿಷ್ಠಿಸಿ ಭೂದಾನ ನೀಡಿದನು. ಶೈವಮತಾವಲಂಬಿ ಯಾದರೂ ಕೂಡ ವಿಕ್ರಮನು ವೈಷ್ಣವ ದೇವಾಲಯಗಳನ್ನು ಉಪೇಕ್ಷಿಸಿರಲಿಲ್ಲ. ಶ್ರೀರಂಗ

ದಲ್ಲಿ ರಂಗನಾಥಸ್ವಾಮಿ ದೇವಾಲಯಕ್ಕೆ 5ನೇ ಪ್ರಾಕಾರವಲ್ಲದೆ ಮತ್ತಿತರ ಕಟ್ಟಡಗಳನ್ನು ಕಟ್ಟಿಸಿದನು. ಕ್ರಿಮಿಕಂಠಚೋಳ ಅಥವಾ ಶ್ರೀರಾಮಾನುಜಾಚಾರ್ಯರನ್ನು ಶಿಕ್ಷೆಗೆ ಒಳಪಡಿಸಿದ ಕುಲೋತ್ತುಂಗನ (II) ಕಾಲದ ಒಂದೇ ಒಂದು ಶಾಸನವು ಈ ದೇವಸ್ಥಾನದಲ್ಲಿದೆ. ಅವನ ಉತ್ತರಾಧಿಕಾರಿ ಇಮ್ಮಡಿ ರಾಜರಾಜನ ಗಂಗಮಹಾಮಾಂಡಲಿಕ ಆಹವಮಲ್ಲರಸನು ದೇವಸ್ಥಾನಕ್ಕೆ ದತ್ತಿಬಿಟ್ಟನು. ವಿಶಾಲ ಚೋಳ ಸಾಮ್ರಾಜ್ಯವನ್ನು ಕಟ್ಟಿ ಮೆರೆದ ಕುಲೋತುಂಗ (III) ನ ಕಾಲದಲ್ಲಿ ಚೋಳರು ವಿಶೇಷ ಕಷ್ಟನಷ್ಟಕ್ಕೆ ಒಳಗಾಗಬೇಕಾಯಿತು. ವರದರಾಜಸ್ವಾಮಿ ದೇವಸ್ಥಾನದ ಆವಾರದಲ್ಲಿ ಕಂಡುಬರುವ ಕುಲೋತ್ತುಂಗನ ಅನೇಕ ಶಾಸನಗಳು ಅವನು ಮತ್ತು ಅವನ ಮಾಂಡಲಿಕ ಅರಸರು ಕೊಡಮಾಡಿದ ಉದಾರವಾದ ದೇಣಿಗಳನ್ನು ವ್ಯಕ್ತಗೊಳಿಸುತ್ತವೆ. ಕೋಲಾರದಲ್ಲಿ ಚೋಳರ ಗಂಗಮಾಂಡಲಿಕನಾಗಿದ್ದ ಚೋಳೇಂದ್ರಸಿಂಹನ ಮಗ ಸೀಯಗಂಗನು ದೇವರಿಗೆ ಸನ್ನಿದಿಯೊಂದನ್ನು ಕಟ್ಟಿಸಿಕೊಟ್ಟನು. ಮತ್ತು ತಮಿಳು ಕವಿ ವರನಂದಿಗೆ ಆಶ್ರಯವಿತ್ತನು. ಕುಲೋತ್ತುಂಗನ 1191ರ ಶಾಸನವು ನೆಟ್ಟೂರಿನ ಇಳೈಯಾಳ್ವಾರ್ ಕಾಳಿಂಗರಾಯನ್ ಎಂಬುವನ ದೇಣಿಗೆಯನ್ನು ಸ್ಮರಿಸುತ್ತದೆ. ಅದೇ ಕಾಲದಲ್ಲಿ ವರದರಾಜಸ್ವಾಮಿಗೆ ದಾನ ಮಾಡಿದ ಅನೇಕ ಸೈನ್ಯಾಧಿಕಾರಿಗಳ ಪೈಕಿ ಕೆಳಗಿನವರನ್ನು ಹೆಸರಿಸಲಾಗಿದೆ: ಅಮ್ಮೈಯಪ್ಪನ್, ಕನ್ನಡ್ಡೆ ಪೆರುಮಾಳ್ ಅಥವಾ ವಿಕ್ರಮ ಚೋಳ ಶಂಭುವರಾಯನ್, ತೆಲುಗು ಚೋಡ ಮಾಂಡಲಿಕ ಪೆದ್ದರಸರ್, ಹಾಗೂ ಬಾಣಮಾಂಡಲಿಕ ಮಹಾಬಲಿ ವಾಣರಾಯರ್. ಕಡೆಯ ಅರಸು ಕುಲೋತ್ತುಂಗ ವಿಳಗಂ ಎಂಬ ಹಳ್ಳಿಯನ್ನು ಕರ ವಿನಾಯತಿಗೊಳಿಸಿ ಅರ್ಪಿಸಿದನು.

ನೂತನವಾಗಿ ಉದಯಿಸುತ್ತಿದ್ದ ಪಾಂಡ್ಯರು ಹಾಗೂ ಚೋಳ ಮಾಂಡಲಿಕ ಅರಸರು ಚೋಳವಂಶದ ಕಟ್ಟಕಡೆಯ ಅರಸರಾದ ರಾಜರಾಜ (III) ಹಾಗೂ ರಾಜೇಂದ್ರರ ಅಧಿಕಾರವನ್ನು ಬಹಿರಂಗವಾಗಿ ಸ್ಪರ್ಧಿಸಿ ನೆಲಸಮಗೊಳಿಸಲು ಪ್ರಯತ್ನಿಸಿದರು. ಹೊಯ್ಸಳರು ಕೂಡ ತಮಿಳು ರಾಜಕೀಯದಲ್ಲಿ ಪ್ರವೇಶಿಸಿ ಆಂತರಿಕ ಕಲಹಗಳನ್ನು ತಮ್ಮ ಲಾಭಕ್ಕೆ ಉಪಯೋಗಿಸಹತ್ತಿದರು.. ಅದೇ ರೀತಿ ಕಾಕತೀಯರು ಕೂಡ ಕಾಂಚೀಪುರವನ್ನು ತಮ್ಮ ವಶವಲ್ಲಿರಿಸಿಕೊಂಡರು. ರಾಜರಾಜನು ಅಸಮರ್ಥ ಅರಸನಾಗಿದ್ದ ಕಾರಣ ಚೋಳರು ಮಾಂಡಲಿಕ ಅರಸರ ವಕ್ರದೃಷ್ಟಿಯನ್ನೆದುರಿಸಬೇಕಾಯ್ತು. ಪಾಂಡ್ಯ–ಚೋಳರ ಕದನದಲ್ಲಿ ಪ್ರವೇಶಿಸಿ ಹೊಯ್ಸಳ ವೀರನರಸಿಂಹನು ಚೋಳರ ಅಧಿಕಾರವನ್ನು ಸ್ಥಿರಗೊಳಿಸಿದ್ದಲ್ಲದೆ, ತಮಿಳುನಾಡಿನಲ್ಲಿ ತನ್ನ ಪ್ರಭಾವವನ್ನು ವರ್ಧಿಸಿಕೊಳ್ಳುವುದರಲ್ಲಿ ಯಶಸ್ವಿಯಾದನು. ಚೋಳರಾಜ್ಯದ ರಕ್ಷಣೆಯ ಭಾರವನ್ನು ಕೂಡ ವಹಿಸಿಕೊಂಡನು. ಇದೇ ರೀತಿ ತಮಿಳುನಾಡು ಹಾಗೂ ಕರ್ನಾಟಕದ ಪರಸ್ಪರ ಸಂಬಂಧವು ಹೊಯ್ಸಳರ ಮೂಲಕ ಕ್ರಮೇಣ ಬೆಳೆದುಬಂದಿತು. ರಾಜರಾಜನ ಆಳ್ವಿಕೆಗೆ ಸಂಬಂಧಿಸಿದ ಸುಮಾರು 50ಕ್ಕೂ ಮಿಕ್ಕ ಶಾಸನಗಳು ಕಾಂಚಿಯಲ್ಲಿ ಇವೆ ಅದೇ ಅವಧಿಯಲ್ಲಿ ಹೊಯ್ಸಳರು ಹಾಗೂ ತೆಲುಗು ಚೋಡರು ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರೆಂದು

ಶಾಸನಗಳಿಂದ ವ್ಯಕ್ತವಾಗುತ್ತವೆ. 1221ರ ಶಾಸನದ ಪ್ರಕಾರ ಹೊಯ್ಸಳರ ಸೇನೆಯು ಕಾಂಚಿಯಲ್ಲಿ ಬೀಡುಬಿಟ್ಟಿದ್ದು ಅವರ ಅಧಿಕಾರಿ ವರ್ಗದವರ ಹಾಗೂ ಸೈನ್ಯಾಧಿಕಾರಿಗಳ ಹೆಸರುಗಳು ಕೇಳಿಬರುತ್ತವೆ. ರಾಜೇಂದ್ರನು (III) ತನ್ನ ಪೂರ್ವಿಕರಿಗಿಂತ ಹೆಚ್ಚು ಧೈರ್ಯಶಾಲಿ ಅರಸನಾಗಿದ್ದನು. ಮತ್ತು ಚೋಳರ ಅಧಿಕಾರವನ್ನು ಊರ್ಜಿತಗೊಳಿಸಲು ಪ್ರಯತ್ನಿಸಿದನು. ಮಾರವರ್ಮ ಸುಂದರಪಾಂಡ್ಯ (III)ನನ್ನು ಸೋಲಿಸಿ ಚೋಳರ ಮಾಂಡಲಿಕತ್ವವನ್ನು ಅವನು ಒಪ್ಪುವಂತೆ ಮಾಡಿದನು. ಈ ಕದನದಲ್ಲಿ ಹೊಯ್ಸಳರು ಪಾಂಡ್ಯರ ಪರವಾಗಿಯೂ, ತೆಲುಗು ಚೋಡರು ಚೋಳರ ಪರವಾಗಿಯೂ ನೆರವು ನೀಡಿದ್ದಲ್ಲದೆ, ಚೋಡರು ಕಾಂಚಿಯ ಸುತ್ತಮುತ್ತ ಪ್ರದೇಶದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಆದರೆ ಜಟಾವರ್ಮ (II) ಸುಂದರ ಪಾಂಡ್ಯನ ಕಾಲದಲ್ಲಿ ಈ ಪ್ರದೇಶಗಳಲ್ಲಿ ಪಾಂಡ್ಯರ ಪ್ರಾಬಲ್ಯವು ಹೆಚ್ಚಿದ್ದ ಕಾರಣ, ಹೊಯ್ಸಳರು ಕ್ರಮೇಣ ತಮಿಳು ಪ್ರದೇಶದಿಂದ ಹಿಂತೆಗೆಯಬೇಕಾಯ್ತು ಮತ್ತು ಚೋಳರ ಅಧಿಕಾರವು ಕೂಡ ರಾಜೇಂದ್ರನ ನಂತರ ಕೊನೆಗೊಂಡಿತು. ಕಾಂಚಿಯು ಕೂಡ ಪಾಂಡ್ಯರ ಪ್ರಭಾವಕ್ಕೆ ಒಳಗಾಗಬೇಕಾಯ್ತು.

ವರದರಾಜ ಸ್ವಾಮಿ ದೇವಸ್ಥಾನದಲ್ಲಿ ಕಂಡುಬರುವ ಹೊಯ್ಸಳರ ಶಾಸನಗಳು ಅವರು ಮತ್ತು ಅವರ ಅಧಿಕಾರಿಗಳು ವರದರಾಜಸ್ವಾಮಿಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸುತ್ತವೆ. ವೀರನರಸಿಂಹನ ಕಾಲದಲ್ಲಿ ಅಮ್ಮಣ್ಣ ಹಾಗೂ ಮಲ್ಲಪ್ಪ ದಂಡನಾಯಕರು, ನಂತರ ವೀರಸೋಮೇಶ್ವರನ ಕಾಲದಲ್ಲಿ ಪೊಲವಿ ದಂಡನಾಯಕ, ಗೋಪಯ್ಯ ಹಾಗೂ ಕೇಶವ ದಂಡನಾಯಕರು ಮತ್ತಿತರ ಅಧಿಕಾರಿಗಳು ವರದರಾಜರಿಗೆ ದಾನ ಮಾಡಿದರು. ನೆಲ್ಲೂರಿನ ತೆಲುಗು ಚೋಡರು ಕಾಂಚಿಯನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದ ಅವಧಿಯಲ್ಲಿ ಗಂಡ ಗೋಪಾಲನು (1223-50) ಗಂಡ ಗೋಪಾಲ ಸಂಧಿ ಎಂಬ ಸೇವೆಯನ್ನು ಪ್ರಾರಂಭಿಸಿದ್ದಲ್ಲದೆ, ಅದರ ವೆಚ್ಚಕ್ಕೆ ಕೆಲವು ಹಳ್ಳಿಗಳನ್ನು ಬಿಟ್ಟುಕೊಟ್ಟು ವರದರಾಜ ಸ್ವಾಮಿಯ ಪರಮ ಭಕ್ತನೆಂದೆನಿಸಿಕೊಂಡನು. ಅವನ ಅರಸಿ ಲಕ್ಷ್ಮಿದೇವಿಯು ನಂದನವನದ ಅಭಿವೃದ್ಧಿಗಾಗಿ ದೇಣಿಗೆ ನೀಡಿದಳು. ಗಂಡ ಗೋಪಾಲನ ಹೆಸರಿನಲ್ಲಿ ಗಂಡ ಗೋಪಾಲ ಪೆರುಂತರು ಎಂಬ ರಸ್ತೆ ಹಾಗೂ ಗಂಡ ಗೋಪಾಲ ಚತುರ್ವೇದಿ ಮಂಗಲಂ ಎಂಬ ಗ್ರಾಮವೊಂದು ಕೂಡ ಇದ್ದವು. ಗಂಡ ಗೋಪಾಲನು ಕಾಂಚಿಯ ಅನಭಿಷಿಕ್ತ ದೊರೆಯಾಗಿದ್ದನು. ತೆಲುಗು ಚೋಡ ತಿಕ್ಕನು (I), ಹೊಯ್ಸಳರನ್ನು ಬದಿಗೊತ್ತಿ ಚೋಳ ಅರಸರನ್ನು ಸ್ವಸ್ಥಾನದಲ್ಲಿ ಕೂಡಿಸಿ "ಚೋಳ ಸ್ಥಾಪನಾಚಾರ್ಯ" ಎಂದು ಬಿರುದನ್ನು ಪಡೆದನು. ಇದೇ ಕಾರಣಕ್ಕಾಗಿ 1240 ರ ನಂತರ ಕಾಂಚಿಯಲ್ಲಿ ಹೊಯ್ಸಳರ ಹೆಸರು ಕೇಳಿ ಬರುವುದಿಲ್ಲ. 1249ರ ವರೆಗೆ ತಿಕ್ಕನು ಚೋಳರ ಮಾಂಡಲಿಕನಾಗಿದ್ದನು : ಆದರೇ ಅದೇ ವರ್ಷ ಕಾಕತೀಯ ಗಣಪತಿಯು ಕಾಂಚಿಯನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದರ ಫಲವಾಗಿ ಚೋಡರು ಕಾಕತೀಯರ ಮಾಂಡಲೀಕರಾಗಬೇಕಾಯ್ತು. ಮನುಮಸಿದ್ಧ (II) ಅಥವಾ ವಿಜಯ

ಗಂಡ ಗೋಪಾಲನು ತನ್ನ ಶಾಸನಗಳಲ್ಲಿ ಕಾಂಚಿಯ ಒಡೆಯ ಎಂದು ಹೇಳಿಕೊಂಡಿರುವು ದಲ್ಲದೆ ತ್ರಿಭುವನ ಚಕ್ರವರ್ತಿ ಎಂಬ ಬಿರುದನ್ನು ಕೂಡ ಗಳಿಸಿದ್ದನು. ಬಹುಮಟ್ಟಿಗೆ ಅವನು ಸ್ವತಂತ್ರ್ಯ ಅರಸನಾಗಿದ್ದನು. ಅವನ ಆಳ್ವಿಕೆಯ ಕಾಲದಲ್ಲಿ (1250-91) ಕಾಂಚಿಯು ಅನೇಕ ಅರಸರ ಅಧೀನದಲ್ಲಿ ಬಂತು. ಗಂಡ ಗೋಪಾಲನ ಸುಮಾರು 20 ಶಾಸನಗಳು ಕಾಂಚಿಯಲ್ಲಿವೆ. ಇದೇ ಕಾಲದಲ್ಲಿ ಪಾಂಡ್ಯರು ಪ್ರಾಬಲ್ಯಕ್ಕೆ ಬಂದಿದ್ದ ಕಾರಣ ಕಾಂಚೀಯ ರಾಜಕೀಯ ವಲಯದಲ್ಲಿ ಏರುಪೇರುಗಳಾದವು. ಜಟಾವರ್ಮ (II) ಸುಂದರಪಾಂಡ್ಯನು 1260ರಲ್ಲಿ ಕಾಂಚಿಯನ್ನು ಗೆದ್ದುದಲ್ಲದೆ ಅಲ್ಲಿಯೇ ಪಟ್ಟಾಭಿಷಿಕ್ತನಾದನು. ವಿಜಯ ಗಂಡ ಗೋಪಾಲನ ಅಧಿಕಾರಿಯೊಬ್ಬನು ವರದರಾಜ ಸ್ವಾಮಿಗೆ ಗ್ರಾಮವೊಂದನ್ನು ದಾನಮಾಡಿದನು. ಹಾಗೂ ರಾಹುತ್ತರಾಯ ಸಂಧಿ ಸೇವೆಯನ್ನು ಕೂಡ ಪ್ರಾರಂಭಿಸಿದನು. ಮಲೆಯ ಮಂಡಲದ ನಾಯಕರನೇಕರು ವರದರಾಜ ಸ್ವಾಮಿಗೆ ದೇಣಿಗೆ ನೀಡಿದ್ದಾರೆ. ಪ್ರಾಯಶಃ ಇವರು ಪಶ್ಚಿಮ ಕರಾವಳಿ ಅಥವಾ ಮಲೈನಾಡು ಪ್ರದೇಶದ ಅರಸರಾಗಿದ್ದು, ಚೇರನಾಡಿನ ಸೈನ್ಯಾಧಿಕಾರಿಗಳಾಗಿ ಜಟಾವರ್ಮನೊಡನೆ ಕೇರಳವನ್ನು ಗೆದ್ದ ನಂತರ ಬಂದಿರಬೇಕು. ವಿಷ್ಣು ಕಾಂಚಿಯಲ್ಲಿ ಇಂದಿಗೂ ಕೂಡ ಮಲೆಯಾಳ ಬೀದಿಯಿರುವುದು. ಕೊಪ್ಪೆರುಂಜಿಂಗನ ಕಾಲದಲ್ಲಿ ಕಾಡವರಾಯರು ಉಚ್ಛ್ರಾಯ ಸ್ಥಿತಿಯಲ್ಲಿದ್ದರು. 1253ರ ಸುಮಾರಿಗೆ ಆ ಕಾಡವರಾಯನು ಕಂಚಿ ದಂಡಯಾತ್ರೆಯನ್ನು ಕೈಕೊಂಡನು. 1262ರವರೆಗೆ ಕಂಚಿಯಲ್ಲಿ ಕಂಡು ಬರುವ ಅವನ ಶಾಸನಗಳಲ್ಲಿ ಕೊಪ್ಪೆರುಂಜಿಂಗನನ್ನು ಸಕಲ ಭುವನ ಚಕ್ರವರ್ತಿಯೆಂದು ಸಂಬೋಧಿಸಲಾಗಿದೆ ಮತ್ತು ಇವನ ದಂಡಯಾತ್ರೆಯಲ್ಲಿ ನೆರವು ನೀಡಿದ ಇವನ ಮಗ ಕಾಡವನ್ ಕುವರನ್ ಸಂಬುವನನ್ನು ಮಲ್ಲೈ ಮಯಿಲೈ ಕಾಂಚಿ ಮತ್ತು ತೊಂಡಮಂಡಲದ ಸ್ವಾಮಿಯೆಂದು ಕರೆಯಲಾಗಿದೆ. ಆದರೆ ಕೊಪ್ಪೆರುಂಜಿಂಗನ ಅಧಿಕಾರವನ್ನು ಪಾಂಡ್ಯರು ಮುರಿದು ಹಾಕಿದರು. ಕಾಡವರು ಅವರ ಅಡಿಯಾಳಾಗಬೇಕಾಯ್ತು. ಕಾಡವರಾಯನ ಸ್ಥಳೀಯ ಅಧಿಕಾರಿಗಳಾಗಿದ್ದ ಕೊಡಕನ್ ಮತ್ತು ಅರುಣಾಗಿರಿ ವರದರಾಜ ಸ್ವಾಮಿಯ ಶಿವಾಲಯಕ್ಕೆ ದೇಣಿಗೆ ನೀಡಿದರು

ಪೂರ್ವಗಂಗರು ಕಾಂಚೀಪ್ರದೇಶದ ಮೇಲೆ ರಾಜಕೀಯ ಪ್ರಭುತ್ವವನ್ನು ಸ್ಥಾಪಿಸದಿದ್ದರೂ ಕೂಡ ಅದೇ ವಂಶದ ಅನಂಗ ಭೀಮ (III) ಮತ್ತು ಅವನ ಅರಸಿ ಸೋಮಲದೇವಿಯು ವರದರಾಜ ಸ್ವಾಮಿಗೆ ದಾನ ನೀಡಿದ್ದಾರೆ. ಅನಂಗ ಭೀಮನ 19 ನೆಯ ಆಳ್ವಿಕೆಯ ವರ್ಷದಲ್ಲಿ (1203) ಸೋಮಲದೇವಿಯು ಉಡ್ಡೆಯ ಕಾಮನ್ ಎಂಬ ಹಳ್ಳಿಯನ್ನು ಅಲ್ಲಾಳನಾಥನಿಗೆ ದಾನ ಮಾಡಿದಳು. 1235ರಲ್ಲಿ 128 ಹಸುಗಳನ್ನು ಅನಂಗ ಭೀಮನು ದೇವಸ್ಥಾನಕ್ಕೆ ಕೊಟ್ಟನು.

ಪಾಂಡ್ಯರ ಅಧಿಕಾರವು ಮಹಮ್ಮದೀಯರ ದಂಡಯಾತ್ರೆಯ ಕಾರಣದಿಂದ, ಕಾಂಚಿಯಲ್ಲಿ ಸ್ಥಿರವಾಗಿ ನೆಲಸಿರದಿದ್ದರೂ ಕೂಡ, ಜಟಾವರ್ಮ ಸುಂದರ ಪಾಂಡ್ಯನು ಕಾಂಚಿಯನ್ನು ತನ್ನ ಎರಡನೆ ರಾಜಧಾನಿಯನ್ನಾಗಿ ಮಾಡಿಕೊಂಡು "ಕಾಂಚೀಪುರವ

ರಾಧೀಶ್ವರ," "ಕಾಂಚೀಪುರಂ ಕೊಂಡಾನ್" ಎಂಬ ಬಿರುದುಗಳನ್ನು ವಹಿಸಿಕೊಂಡನು. ಅಲ್ಲಿಯ ಮಾಂಡಲಿಕ ಅರಸರು ಅವನ ಸ್ವಾಮ್ಯತ್ವವನ್ನು ಒಪ್ಪಬೇಕಾಯಿತು. ವರದ ರಾಜ ಸ್ವಾಮಿ ದೇವಾಲಯವಲ್ಲಿರುವ ಪಾಂಡ್ಯರ ಶಾಸನಗಳು ಅವರ ಮಾಂಡಲಿಕರಿಗೆ ಸಂಬಂಧಿಸಿವೆ. ಎರಡನೆ ಸಾರಿ 1312ರಲ್ಲಿ ಕಾಂಚಿಯಲ್ಲಿ ಪಟ್ಟಾಭಿಷಿಕ್ತನಾದ ಚೇರ ರವಿ ವರ್ಮ ಕುಲಶೇಖರನು ಅಲ್ಲಾಳ ಪೆರುಮಾಳಿಗೆ ದತ್ತಿ ಬಿಟ್ಟದಲ್ಲದೆ, ಅಲ್ಲಿಯ ಶಾಸನದಲ್ಲಿ ವೇಗವತಿ ನಾಥನೆಂದು ಹೇಳಿಕೊಂಡಿದ್ದಾನೆ. ಆದರೆ ಸ್ವಲ್ಪಕಾಲದಲ್ಲಿಯೇ ಕಾಕತೀಯ ಪ್ರತಾಪರುದ್ರನ (II) ಸೈನ್ಯಾಧಿಕಾರಿ ಮುಪ್ಪಡಿ ನಾಯಕನು 1316ರಲ್ಲಿ ಕಾಂಚಿ ಯನ್ನು ವಶಪಡಿಸಿಕೊಂಡು 1002 ಗುಡ ಗೋಪಾಲ ಮಾಡೈಯನ್ನು ವರದರಾಜ ಸ್ವಾಮಿಗೆ ದಾನವಾಗಿ ಕೊಟ್ಟನು.

ಮಹಮ್ಮದೀಯರು ದಕ್ಷಿಣ ಭಾರತದಲ್ಲಿ ಕೈಕೊಂಡ ದಂಡಯಾತ್ರೆ ಮತ್ತು ಅದರ ಪರಿಣಾಮವಾಗಿ ಮಧುರೆಯಲ್ಲಿ ಸ್ಥಾಪಿಸಲ್ಪಟ್ಟ ಸುಲ್ತಾನರ ಆಳ್ವಿಕೆಯು ತಮಿಳುನಾಡಿನ ಗ್ರಹಗತಿಯನ್ನು ಅಸ್ತವ್ಯಸ್ತಗೊಳಿಸಿತು. ಕಾಂಚಿಯು ಕೂಡ ಇತರ ದಿವ್ಯಕ್ಷೇತ್ರಗಳಂತೆ ನಾಶಗೊಂಡು ಗೊಂದಲಮಯ ವಾತಾವರಣ ಕಾಣಿಸಿಕೊಂಡಿತು. ಮಧುರೆಯ ಸುಲ್ತಾ ನರ ವಿರುದ್ಧ ಹೋರಾಡಿ ಮಡಿದ ವೀರ ಬಲ್ಲಾಳನು (III) ಕಂಚಿಗೆ 1335ರಲ್ಲಿ ಸಂದರ್ಶನ ಕೊಟ್ಟನು. ಅವನ ದಂಡನಾಯಕ ಕಪ್ಪಯ್ಯನು ವರದರಾಜಸ್ವಾಮಿಗೆ ದಾನ ಮಾಡಲು ಮರೆಯಲಿಲ್ಲ. ಬಲ್ಲಾಳನು ಕೂಡ ರಾಜಸಭೆಯೊಂದನ್ನು ಕೂಡಿಸಿದನು. ಹೊಯ್ಸಳ ಹಾಗೂ ಚೋಳರ ಪ್ರಾಬಲ್ಯವು ಕಡಿಮೆಯಾದಂತೆ ಶಂಬುವರಾಯರ ಅಧಿ ಕಾರವು ಅಭಿವೃದ್ಧಿಗೊಂಡಿತು. ವಿಜಯನಗರದ ಅರಸರ ಕಾಲದವರೆಗೂ ಅವರು ಅಧಿಕಾರ ದಲ್ಲಿದ್ದರು. ರಾಜನಾರಾಯಣ ಹಾಗೂ ಪೆರುಮಾಳ್ ಕೊಂಡ ಶಂಬುವರಾಯನ್ ಕಾಂಚಿಯಲ್ಲಿ ಸ್ವತಂತ್ರವಾಗಿ ಆಳುತ್ತಿದ್ದರಲ್ಲದೆ, ಅವರಲ್ಲೊಬ್ಬರಾದ ರಾಜರಾಜ ಶಂಭುವರಾಯನು 1247ರಲ್ಲಿ ಅಳಪ್ಪಿರಂದಾನ್ ಸನ್ನಿಧಿ ಸೇವೆಯನ್ನು ಪ್ರಾರಂಭಿಸಿ ಅದಕ್ಕೆ ಅವಶ್ಯವಾದ ದೇಣಿಗೆಯನ್ನು ನೀಡಿದನು.

ವಿಜಯನಗರದ ಅರಸರು ತಮ್ಮ ಅಧಿಕಾರವನ್ನು ತಮಿಳು ಪ್ರದೇಶದ ಮೇಲೆ ಕ್ರಮೇಣ ವಿಸ್ತರಿಸಿದರೆಂದು ವರದರಾಜ ಸ್ವಾಮಿ ದೇವಾಲಯದಲ್ಲಿ ಕಂಡು ಬರುವ ಶಾಸನಗಳಿಂದ ವ್ಯಕ್ತವಾಗುತ್ತದೆ. ಕುಮಾರ ಕಂಪಣನ ದಿಗ್ವಿಜಯದ ನಂತರ ಕಾಂಚಿ ಪ್ರದೇಶದೊಡನೆ ವಿಜಯನಗರ ಅರಸರ ಸಂಪರ್ಕವು ಅಧಿಕಗೊಂಡಿತು. ಹರಿಹರನು (II) ವರದರಾಜಸ್ವಾಮಿ ದೇವಾಲಯದ ವೈಷ್ಣವ ಮಠವೊಂದಕ್ಕೆ ನೀಡಿದ ದೇಣಿಗೆಯನ್ನು ಅಲ್ಲಿಯ ಶಾಸನವು ಸ್ಮರಿಸುತ್ತದೆ. ಆದರೆ ಮುಂದೆ ಕೆಲವು ಕಾಲದವರೆಗೆ ಕಾಂಚಿಯು ಚೋಲನು ಮಾಂಡಳಿಕ ವಸಂತರಾಯನ ವಶದಲ್ಲಿತ್ತು. 1437ರಲ್ಲಿ ಅವನು ಎರಡು ದ್ವಾರಪಾಲಕರ ವಿಗ್ರಹಗಳನ್ನು ದೇವರಿಗೆ ದತ್ತಿ ಬಿಟ್ಟನೆಂದು ಅವನ ಶಾಸನದಿಂದ ವ್ಯಕ್ತ ವಾಗುತ್ತದೆ. ಮತ್ತು ಇದೇ ಅವಧಿಯಲ್ಲಿ ವಿಜಯನಗರ ಅರಸರ ಶಾಸನಗಳು ಕಾಂಚಿ ಯಲ್ಲಿ ಕಂಡು ಬರುವುದಿಲ್ಲ. ಒಡಿಸ್ಸಾದ ಗಜಪತಿಗಳ ದಂಡಯಾತ್ರೆಯ ಕಾವು ಕಾಂಚಿಯ

ವರಿಗೂ ಹರಡಿದ್ದರೂ ಮಲ್ಲಿಕಾರ್ಜುನನ ಅಧಿಕಾರವನ್ನು ತಮಿಳುನಾಡಿನಲ್ಲಿ ಪುರಸ್ಕರಿಸ ಲಾಯಿತೆಂದು ವರದರಾಜ ಸ್ವಾಮಿ ದೇವಸ್ಥಾನದ ಶಾಸನಗಳಿಂದ ವ್ಯಕ್ತವಾಗುತ್ತದೆ. ಅಲ್ಲಿಯೇ ಇರುವ ವಿರೂಪಾಕ್ಷನ (II) ಎರಡು ಶಾಸನಗಳ ಪೈಕಿ (1467–71) ಒಂದ ರಿಂದ, ವಿಜಯನಗರ ಸೇನೆಯು ಕಾಂಚಿಯ ನೆರೆಹೊರೆಯ ಪ್ರದೇಶದಲ್ಲಿತ್ತೆಂದು ಕಂಡು ಬರುತ್ತದೆ. ಸಾಳುವ ನರಸಿಂಹನು, ಮತ್ತೊಮ್ಮೆ ವಿಜಯನಗರದ ಸಾಮ್ರಾಜ್ಯದ ವಿರುದ್ಧ ದಂಡೆತ್ತಿ ಬಂದು ಕಾಂಚಿಪುರದವರೆಗೂ ತಮ್ಮ ಪ್ರಾಬಲ್ಯತೆಯನ್ನು ಹರಡಿದ್ದ ಗಜಪತಿಗಳನ್ನು ಹೊಡೆದೋಡಿಸಿದನು. ಬಹಮನಿ ಸುಲ್ತಾನನು ಕೂಡ ಕಾಂಚಿಯ ವೈಭವವನ್ನು ಕೇಳಿ ತನ್ನ ಕೊಂಡವೀಡು ಶಿಬಿರದಿಂದ ಕಾಂಚಿಯನ್ನು ಹೊಕ್ಕು ಅಲ್ಲಿಯ ಆಸ್ತಿಪಾಸ್ತಿಯನ್ನು ದೋಚಿಕೊಂಡು ಹೋಗಲು ಯತ್ನಿಸಿದನು. ಆದರೆ ಸಾಳುವ ನರ ಸಿಂಹನ ಸೇನಾನಿ ಈಶ್ವರನು ಅವನನ್ನು ಅಡ್ಡಗಟ್ಟಿ ದರೋಡೆ ಮಾಡಿದ ಆಸ್ತಿಯ ಕೆಲವು ಭಾಗವನ್ನು ಹಿಂದಕ್ಕೆ ಪಡೆದನು. ವಿರೂಪಾಕ್ಷನನ್ನು ಪದಚ್ಯುತಗೊಳಿಸಿ ಅಧಿಕಾರಕ್ಕೆ ಬಂದ ಸಾಳುವ ನರಸಿಂಹನು ವೈಷ್ಣವ ಭಕ್ತನಾಗಿದ್ದನು. ತಿರುಪತಿ ಹಾಗೂ ಕಾಂಚಿ ದೇವಾಲಯಗಳಿಗೆ ಅಧಿಕ ಪ್ರಮಾಣದಲ್ಲಿ ನೆರವು ನೀಡಿದನು. ಶ್ರೀವೈಷ್ಣವ ಮುಖಂಡ ರೆನಿಸಿಕೊಂಡಿದ್ದ ಕಂದಾಡೈ ರಾಮಾನುಜಯ್ಯಂಗಾರ್ಯರು ಸಾಳುವ ನರಸಿಂಹನ ಸೇವೆ ಯಲ್ಲಿದ್ದರು. ಕಾಂಚಿ ಮತ್ತು ಇತರ ದಿವ್ಯ ಕ್ಷೇತ್ರಗಳಿದ್ದ ವೈಷ್ಣವ ದೇವಾಲಯಗಳಿಗೆ ನರಸಿಂಹನಿಂದ ಉದಾರ ದೇಣಿಗೆಯನ್ನು ದೊರಕಿಸಿಕೊಟ್ಟರು. ತುಳುವ ಅರಸ ವೀರ ನರಸಿಂಹನ (1505–9) ಶಾಸನವು (1509) ವರದರಾಜ ಸ್ವಾಮಿ ದೇವಾಲಯದ ಅಭಿಷೇಕ ಮಂಟಪದ ಪೂರ್ವ ಗೋಡೆಯಲ್ಲಿದೆ. ಅವನು ನರಸಿಂಗರಾಯಪುರವೆಂಬ ಗ್ರಾಮವನ್ನು ಸ್ವಾಮಿಗೆ ಬಿಟ್ಟುಕೊಟ್ಟನು.

ಕೃಷ್ಣದೇವರಾಯನ ಆಳ್ವಿಕೆಗೆ ಸಂಬಂಧಿಸಿದಂತೆ 16 ಶಾಸನಗಳು ವರದರಾಜ ಸ್ವಾಮಿ ದೇವಸ್ಥಾನದಲ್ಲಿವೆ. ಕೃಷ್ಣದೇವರಾಯನ ಕಾಲದ ರಾಜಕೀಯ ವಾತಾವರಣವು ಶಾಂತರೀತಿಯಲ್ಲಿದ್ದ ಕಾರಣ, ಅವನು ತಿರುಪತಿ, ಕಾಂಚಿ ಹಾಗೂ ಕಾಳಹಸ್ತಿ ಮೊದ ಲಾದ ದಿವ್ಯಕ್ಷೇತ್ರಗಳನ್ನು ಅನೇಕ ಸಲ ಸಂದರ್ಶಿಸುವ ಅವಕಾಶವನ್ನು ಕಲ್ಪಿಸಿಕೊಂಡು ಅಲ್ಲಿಯ ದೇವಾಲಯಗಳಿಗೆ ದತ್ತಿಯನ್ನು ಬಿಟ್ಟನು. ಕಾಂಚಿಗೆ ಭೇಟಿ ನೀಡಿದಾಗ ನಾಗಲಾದೇವಿ ಹಾಗೂ ನರಸನಾಯಕನ ಹೆಸರಿನಲ್ಲಿ ನೀಡಿದ ದಾನದ ಬಕ್ಕಣಿಕೆಯನ್ನು ತಮಿಳು, ತೆಲುಗು ಹಾಗೂ ಕನ್ನಡ ಭಾಷೆಯನ್ನೊಳಗೊಂಡ ಶಾಸನದಲ್ಲಿ ಹಾಕಿಸ ಲಾಯ್ತು. ಅಧಿಕಾರಂ ರಾಯಸಂ ಅಯ್ಯಪ್ಪರಸರ್ ಹಾಗೂ ರಾಯಸಂ ಶ್ರೀಪತಯ್ಯ ನವರು ಅದೇ ದೇವಸ್ಥಾನಕ್ಕೆ ಬಿಟ್ಟ ದತ್ತಿಗಳನ್ನು ಕೂಡ ಕೆಲವು ಶಾಸನಗಳು ಸ್ಮರಿಸಿವೆ. ಶಾ.ಶ. 1438 (1516)ರಲ್ಲಿ ಕೃಷ್ಣದೇವನು ಸುಮಾರು 1500 ವರಾಹ ವರಮಾನ ಕೊಡಿ ಬರುವ 5 ಹಳ್ಳಿಗಳನ್ನು ಅದೇ ಸ್ವಾಮಿಗೆ ದಾನಮಾಡಿದನು. ಮೂರು ತಿಂಗಳ ನಂತರ ಮತ್ತೊಮ್ಮೆ ಕಾಂಚಿಯನ್ನು ಸಂದರ್ಶಿಸಿ, ವರದರಾಜ ಸ್ವಾಮಿ ಹಾಗೂ ಏಕಾಂಬರೇಶ್ವರರಿಗೆ ದೇಣಿಗೆ ಕೊಟ್ಟನು. ವರದರಾಜ ಸ್ವಾಮಿ ದೇವಾಲಯದಲ್ಲಿ

ಅಚ್ಯುತರಾಯನಿಗೆ (1530–42) ಸಂಬಂಧಪಟ್ಟ 23 ಶಾಸನಗಳಿವೆ. 1532ರಲ್ಲಿ ತೆಲುಗು, ತಮಿಳು ಹಾಗೂ ಕನ್ನಡ ಭಾಷೆಗಳಲ್ಲಿ ಹಾಕಿಸಲ್ಪಟ್ಟ ಶಾಸನದ ಪ್ರಕಾರ, ಅಚ್ಯುತರಾಯನು ತನ್ನ ಅರಸಿ ವರದಾದೇವಿ ಹಾಗೂ ಕುಮಾರ ವೆಂಕಟಾದ್ರಿಯರೊಡನೆ ವರದರಾಜ ಸ್ವಾಮಿ ದೇವಸ್ಥಾನವನ್ನು ಸಂದರ್ಶಿಸಿ ಅನೇಕ ಬಳುವಳಿಗಳನ್ನು ನೀಡಿದನು. 17 ಗ್ರಾಮಗಳು ಮತ್ತು 1000 ಪಶುಗಳ ದಾನವಲ್ಲದೆ "ಮುಕ್ತತುಲಾಭಾರ" ಸಮಾರಂಭವನ್ನು ಕೂಡ ನೆರವೇರಿಸಿದನು. ಇದೇ ವಿಷಯವನ್ನು ಅಚ್ಯುತರಾಯಾಭ್ಯುದಯದಲ್ಲಿ ಕೂಡ ಉಲ್ಲೇಖಿಸಲಾಗಿದೆ. 1533ರ ಮತ್ತೊಂದು ಶಾಸನದ ಪ್ರಕಾರ ಅಚ್ಯುತರಾಯನು ತನ್ನ ಪಟ್ಟಾಭಿಷೇಕ ಮಹೋತ್ಸವದ ಸ್ಮರಣಾರ್ಥವಾಗಿ ದತ್ತಿಯಾಗಿ ಬಿಟ್ಟ ಗ್ರಾಮವನ್ನು ವರದರಾಜ ಸ್ವಾಮಿ ಹಾಗೂ ಏಕಾಂಬರೇಶ್ವರ ದೇವರ ನಡುವೆ ಸರಿಸಮಾನವಾಗಿ ಹಂಚಿಕೊಡಲಾಯಿತು. ಆದರೆ ಅಲ್ಲಿಯ ಸ್ಥಳೀಯ ಅಧಿಕಾರಿ ಸಾಳುವ ನಾಯಕರು ಈ ನಿಯಮವನ್ನು ಉಲ್ಲಂಘಿಸಿ ಶಿವದೇವಾಲಯಕ್ಕೆ ಹೆಚ್ಚು ಭಾಗವನ್ನು ಬಿಟ್ಟುಕೊಟ್ಟರು. ಮತ್ತು ಈ ಅಕ್ರಮ ವ್ಯವಹಾರವು ಅಚ್ಯುತರಾಯನ ಅವಗಾಹನೆಗೆ ಬರಲು ಮತ್ತೊಮ್ಮೆ, ದಾನಮಾಡಿದ ಹಳ್ಳಿಗಳನ್ನು ಸರಿಯಾಗಿ ತನ್ನ ಸಮಕ್ಷಮದಲ್ಲಿ ಹಂಚಿಕೊಟ್ಟು ಕ್ರಯಪತ್ರಗಳನ್ನು ಬರೆಸಿದನು. ಮತ್ತೊಮ್ಮೆ ಅಚ್ಯುತರಾಯನು ದಂಗೆಕೋರ ಅಧಿಕಾರಿ ಚೆಲ್ಲಪ್ಪನನ್ನು ಸದೆ ಬಡಿಯಲು ಕೈಕೊಂಡ ದಕ್ಷಿಣ ದೇಶದ ದಂಡಯಾತ್ರೆಯ ಸಂದರ್ಭದಲ್ಲಿ ತಿರುಪತಿ ಹಾಗೂ ಕಾಳಹಸ್ತಿ ಕ್ಷೇತ್ರಗಳನ್ನು ಸಂದರ್ಶಿಸಿದನು. ತನ್ನ ಸೈನ್ಯದೊಡನೆ ಕಾಂಚಿಯನ್ನು ಪ್ರವೇಶಿಸಿ ಮುಕ್ತ ತುಲಾಭಾರವನ್ನು ನಡೆಸಿ ದಾನಮಾಡಿದನು. ರಾಯಸಂಸರಸಯ್ಯನು ಕೂಡ ವಿರೂಪಾಕ್ಷ ದಣ್ಣಾಯಕ ಕುಮಾರನ ಪರೋಕ್ಷಕ್ಕಾಗಿ ದೇವಸ್ಥಾನಕ್ಕೆ ಬಳುವಳಿಕೊಟ್ಟನು. ಸದಾಶಿವನ (1544–62) ಅನೇಕ ಶಾಸನಗಳು ವರದರಾಜಸ್ವಾಮಿ ದೇವಸ್ಥಾನದಲ್ಲಿ ಕಂಡುಬಂದಿವೆ. ಅರವೀಡು ಅಥವಾ ತೆಲುಗು ಚೋಡ ವಂಶದವರು ಪದಾಧಿಕಾರಿಗಳಾಗಿದ್ದರೆಂಬ ಅಂಶವು ಈ ಶಾಸನಗಳಿಂದ ತಿಳಿದುಬರುತ್ತದೆ. ಅವರಲ್ಲನೇಕರು ವರದರಾಜಸ್ವಾಮಿಗೆ ದಾನಮಾಡಿದ್ದಾರೆ. ದಳವಾಯಿ ತಿಮ್ಮರಾಜನು ಅದೇ ಸ್ವಾಮಿಗೆ ಗ್ರಾಮದಾನ ಮಾಡಿದನು. ಅರವೀಟಿ ಚಿಕ್ಕಯ್ಯ ರಾಜನ ಮಗ ರಾಮರಾಜನು ವರದರಾಜಸ್ವಾಮಿಯ ವಾರ್ಷಿಕ ಉತ್ಸವಗಳನ್ನು ನಡೆಸುತ್ತಿದ್ದನು. ರಾಯಸಂ ವೆಂಕಟಾದ್ರಿ ಮತ್ತಿತರರು ಈ ಅವಧಿಯಲ್ಲಿ ಉದಾರ ದಾನವನ್ನು ನೀಡಿದ್ದಲ್ಲದೆ ಈ ಕಾಲವು ವರದರಾಜಸ್ವಾಮಿ ದೇವಸ್ಥಾನದ ಪರ್ವಕಾಲವಾಗಿತ್ತೆಂದು ಹೇಳಬಹುದು. ಅನೇಕ ಉತ್ಸವಗಳು, ಪೊನ್ನಾಮರ್ಪೈ ಕೆರೆಯ ದುರಸ್ತಿ, ಪುಷ್ಪವನದ ಸಂರಕ್ಷಣೆ ಮತ್ತು ದಾನಧರ್ಮಗಳಿಗೆ ಹೇರಳವಾಗಿ ನೆರವು ದೊರೆಯಿತು.

ಅರವೀಡು ವಂಶದ ಮೊದಲನೆ ಅರಸ ತಿರುಮಲನು (1570–71) ತಿರುಪತಿ ವೆಂಕಟೇಶ್ವರನ ಭಕ್ತನಾಗಿದ್ದನು. ಶ್ರೀರಂಗನ (I) 5 ಶಾಸನಗಳು ವರದರಾಜಸ್ವಾಮಿ ದೇವಸ್ಥಾನದಲ್ಲಿವೆ. ತಂಜಾವೂರು ಅಚ್ಯುತಪ್ಪನಾಯಕನ ಪರೋಕ್ಷವಿನಯಕ್ಕಾಗಿ ದೇವಸ್ಥಾನದ ಸ್ಥಾನಪತಿಗಳು ಪಂಚಗ್ರಾಮಗಳನ್ನಲ್ಲದೆ ವೈಯ್ಯಾಸಿ ತಿಂಗಳಲ್ಲಿ ಉತ್ಸವ

ಗಳನ್ನು ನಡೆಯಿಸಲು ದಾನಕೊಟ್ಟರು. ವೆಂಕಟನು (II) ಚಂದ್ರಗಿರಿಯ ಪ್ರಾಂತ್ಯಾಧಿಕಾರಿಯಾಗಿದ್ದಾಗ ಅವನ ಹೆಸರಿನಲ್ಲಿ ಪೂಜಾವಿಧಿಗಳನ್ನು ನೆರವೇರಿಸಲು ಮಾರ್ಗನಿರೂಪಣೆ ಮಾಡಲಾಗಿತ್ತೆಂದು ಶಾಸನಗಳು ತಿಳಿಸಿವೆ, ಅದೇ ಕಾಲದಲ್ಲಿ ಎಟ್ಟೂರು ಕುಮಾರ ತಾತಾಚಾರ್ಯರು ದೇವಸ್ಥಾನದ ಯಜಮಾನ್ಯ ನಡೆಯಿಸುತ್ತಿದ್ದರೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ಇದೇ ವೆಂಕಟನ (1589–1614) ಆಳ್ವಿಕೆಯ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯವು ತನ್ನ ಶಕ್ತಿಯನ್ನು ಬಹುಮಟ್ಟಿಗೆ ಸಂವರ್ಧಿಸಿಕೊಂಡಿತು. ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೂಡ ಕಾಣುತ್ತೇವೆ. ರಾಜಗುರುಗಳಾಗಿದ್ದ ಎಟ್ಟೂರು ಕುಮಾರ ತಾತಾಚಾರ್ಯರು ದೇವಸ್ಥಾನದ ಪಾರುಪತ್ಯವನ್ನು ಮುಂದುವರಿಸಿದ್ದಲ್ಲದೆ ದಕ್ಷಿಣದ ಅನೇಕ ದೇವಾಲಯದ ಯಜಮಾನ್ಯವನ್ನು ವಹಿಸಿದ್ದರು. ಮೂರನೆಯ ವೆಂಕಟನ (1630–42) ಶಾಸನವೊಂದು ತೆಲುಗು ಭಾಷೆಯಲ್ಲಿದೆ ಮತ್ತು ತಮ್ಮಪ್ಪ ಅಥವಾ ತಮ್ಮ ಭೂಪತಿಯ ದೇಣಿಗೆಯನ್ನು ಸೂಚಿಸುತ್ತದೆ. ಈ ವೇಳೆಗಾಗಲೆ ವಿಜಯನಗರ ಸಾಮ್ರಾಜ್ಯವು ತನ್ನ ಪ್ರಭಾವವನ್ನು ಕಳೆದುಕೊಂಡಿತ್ತು ಮತ್ತು ಅನೇಕ ಮಾಂಡಲಿಕ ಅರಸರು ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಲು ಪ್ರಾರಂಭಿಸಿದ್ದರು. ತಮಿಳುನಾಡಿನಲ್ಲಿ ಮಧುರೆ, ತಂಜಾವೂರು ಮತ್ತು ಜಿಂಜಿ ನಾಯಕರು ಸ್ವತಂತ್ರ ಅರಸರಾಗಿ ವರ್ತಿಸಹತ್ತಿದರು. ಕಾಂಚಿ ಮತ್ತು ಸುತ್ತಮುತ್ತ ಪ್ರದೇಶಗಳು ವೆಂಕಟರಾಯನ ನೇರ ಆಡಳಿತಕ್ಕೆ ಒಳಗಾಗಿದ್ದರೂ ಕೂಡ ಅವನು ನಾಮ ಮಾತ್ರ ಅರಸನಾಗಿದ್ದನು. 1645ರ ವೇಳೆಗೆ ಶ್ರೀರಂಗನ (III) ಅಧಿಕಾರವು ಗೋಲ್ಕೊಂಡ ಸುಲ್ತಾನರ ದಾಳಿಗಳಿಂದ ಜರ್ಝರಿತಗೊಂಡಿತು. ಶ್ರೀರಂಗನ ಕಾಲದಲ್ಲಿ ಉದ್ಭವಿಸಿದ ರಾಜಕೀಯ ಗೊಂದಲಮಯ ಹಾಗೂ ಅನಿಶ್ಚಿತ ವಾತಾವರಣದ ಕಾರಣಕ್ಕಾಗಿಯೋ ವರದರಾಜಸ್ವಾಮಿ ದೇವಸ್ಥಾನದಲ್ಲಿ ಅವನ ಕಾಲಕ್ಕೆ ಸಂಬಂಧಿಸಿದ ಶಾಸನಗಳಿದ್ದರೂ ಕೂಡ ಅವುಗಳು ಆ ಅರಸರ ಹೆಸರನ್ನು ನಮೂದಿಸಿಲ್ಲ. ಮುಸ್ಲಿಮರು ನಡೆಯಿಸಿದ ಹಾವಳಿಯ ಅವಧಿಯಲ್ಲಿ ಕೊತ್ತಪಲ್ಲಿ ಧರ್ಮಯ್ಯನ ಮಗ ವೆಂಕಟಾದ್ರಿಯು ದೇವಸ್ಥಾನದ ಯಜಮಾನ್ಯವನ್ನು ಯಶಸ್ವಿಯಾಗಿ ನಡೆಸಿದ್ದ ಕಾರಣ ಅವನಿಗೆ ಮರ್ಯಾದೆ ಸವಲತ್ತುಗಳನ್ನು ಕೊಡಲಾಯಿತು.

1672ರ ನಂತರ ಕಾಂಚಿಯು ಗೋಲ್ಕೊಂಡ ಸುಲ್ತಾನರ ಅಧೀನಕ್ಕೆ ಒಳಪಟ್ಟಿತು. ಮಾದಣ್ಣನು ತನ್ನ ಸೋದರಳಿಯ ಲಿಂಗಣ್ಣನನ್ನು ಅಲ್ಲಿಯ ಸ್ಥಳೀಯ ಅಧಿಕಾರಿಯನ್ನಾಗಿ ನೇಮಿಸಿದನು. ಅವನು ಕೆಲವು ರಸ್ತೆಗಳನ್ನು ನಿರ್ಮಿಸಿದನು. ಅಲ್ಲಿಯ ಒಂದು ಬೀದಿಗೆ ಅವನ ಹೆಸರನ್ನು ಕೂಡ ಇಡಲಾಗಿದೆ. ಔರಂಗಜೇಬನು ಶಿವಾಜಿಯ ವಿರುದ್ಧ ನಡೆಸಿದ ದಾಳಿಯಲ್ಲಿ ಕಾಂಚಿಯು ಅನೇಕ ಕಷ್ಟನಷ್ಟಗಳನ್ನು ಅನುಭವಿಸಿತು. ಕ್ರಮೇಣ ಇಡೀ ದಕ್ಷಿಣ ಭಾರತವು ಮುಸ್ಲಿಮರ ಆಳ್ವಿಕೆಗೆ ಬಂದಿದ್ದ ಕಾರಣ ಕಾಂಚಿಯು ಕೂಡ ಅನೇಕ ಕಷ್ಟನಷ್ಟಗಳಿಗೆ ಒಳಗಾಗಬೇಕಾಯ್ತು. ಔರಂಗಜೇಬನ ಧಾರ್ಮಿಕ ನೀತಿಯ ಬಗ್ಗೆ ಸಾಕಷ್ಟು ತಿಳುವಳಿಕೆ ಹೊಂದಿದ್ದ ಕಾರಣ, ಕಾಂಚಿಯ ವರದರಾಜಸ್ವಾಮಿ, ಕಾಮಾಕ್ಷಿ

ಹಾಗೂ ಏಕಾಂಬರೇಶ್ವರ ವಿಗ್ರಹಗಳನ್ನು ಗುಪ್ತವಾಗಿ ನಗರದ ಹೊರಗೆ ಸಾಗಿಸಿ ಸುರಕ್ಷಿತವಾಗಿ ಬಚ್ಚಿಡಲಾಯ್ತು. ವರದರಾಜಸ್ವಾಮಿ ಹಾಗೂ ಅವರ ಪ್ರಿಯತಮೆಯರ ಮೂರ್ತಿಗಳನ್ನು ತಿರುಚ್ಚಿರಾಪಳ್ಳಿಯ ಉಡೈಯಾರ್ ಪಾಳ್ಯಂ ಎಂಬಲ್ಲಿಗೆ ಸಾಗಿಸಲಾಯ್ತು. 1710ರಲ್ಲಿ ಈ ವಿಗ್ರಹಗಳನ್ನು ಪುನಃ ಕಾಂಚಿಗೆ ತರಬೇಕೆಂದು ನಿರ್ಧರಿಸಿದಾಗ ಉಡೈಯಾರ್ ಪಾಳ್ಯದ ನಾಯಕನು ವಿರೋಧಿಸಿದನು. ಆದರೆ ಶ್ರೀ ವೈಷ್ಣವ ಅತ್ತಾನ್ ಜೀಯರ್ ಅವರ ಅನುಜ್ಞೆಯ ಮೇರೆಗೆ ಅವರ ಭಕ್ತನಾಗಿದ್ದ ಲಾಲಾ ತೋದರಮಲ್ ಶಸ್ತ್ರಸ್ತ್ರವುಳ್ಳ ಬೆದರಿಕೆ ಹಾಕಿದ್ದರಿಂದ ಈ ವಿಗ್ರಹಗಳನ್ನು ಸುಗಮವಾಗಿ ಕಂಚಿಗೆ ತರಲಾಯಿತು. ತಾಯಾರ್ ಸನ್ನಿಧಿಯ ಹತ್ತಿರವಿರುವ 1710ರ ಶಿಲಾಶಾಸನದಲ್ಲಿ ಈ ವಿವರಣೆಗಳನ್ನು ಕೊಡಲಾಗಿದೆ. ಇಂದಿಗೂ ಕೂಡ ಈ ಘಟನೆಯನ್ನು "ಉಡಯಾರ್ ಪಾಳ್ಯಂ" ವಾರ್ಷಿಕ ಉತ್ಸವದಲ್ಲಿ ಸ್ಮರಿಸಲಾಗುತ್ತಿದೆ. ಅತ್ತಾನ್ ಜೀಯರ್ ಅಥವಾ ಶ್ರೀನಿವಾಸದಾಸರು ಅಕ್ಕಣ್ಣ ಹಾಗೂ ಮಾದಣ್ಣನ ನೆಂಟರಾಗಿದ್ದರು. ಅವರು ಔರಂಗಜೇಬನು ಗೋವಲಕೊಂಡಕ್ಕೆ ಧಾಳಿಯಿಟ್ಟ ಕಾಲದಲ್ಲಿ ಕಾಂಚಿಗೆ ಬಂದಿರಬೇಕು. ಇದೇ ಶ್ರೀನಿವಾಸದಾಸರನ್ನು 1715ರ ತಾಮ್ರ ಶಾಸನವೊಂದರಲ್ಲಿ ತೋದರ ಮಲ್ಲನ ಗುರುವೆಂದು ಸ್ಮರಿಸಲಾಗಿದೆ. ತೋದರಮಲ್ಲನು ಕರ್ನಾಟಕ ನವಾಬರ ಕೆಳಗೆ ಸೈನ್ಯಾಧಿಕಾರಿಯಾಗಿದ್ದನು. ಮತ್ತು ಜಿಂಜಿ ಮುತ್ತಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ರಾಜಕೀಯ ವಾತಾವರಣವು ತಿಳಿಯಾದ ಕೂಡಲೆ ವರದರಾಜಸ್ವಾಮಿ ಮತ್ತಿತರ ವಿಗ್ರಹಗಳನ್ನು ಕಾಂಚಿಗೆ ತರಲಾಯಿತು. 1723ರಲ್ಲಿ ಕಂಡುಬರುವ ಕಡೆಯ ಶಾಸನದಲ್ಲಿ ಕಾಂಚಿಪುರವು ಸಾದತುಲ್ಲಾಖಾನನ ಆಡಳಿತಕ್ಕೆ ಒಳಪಟ್ಟಿತೆಂದು ತಿಳಿದುಬರುತ್ತದೆ. ಅನಂತರ ಕಾಂಚಿಯು ಇತರ ನಗರಗಳಂತೆ ಮರಾಠರು, ನಿಜಾಮರು, ಆಂಗ್ಲರು ಹಾಗೂ ಫ್ರೆಂಚರ ದಾಳಿಗೆ ತುತ್ತಾಯಿತು. ಆಂಗ್ಲರು ಕರ್ನಾಟಕ ನವಾಬರಿಂದ ಕಾಂಚಿಯನ್ನು ಪಡೆದುಕೊಂಡು ಚೆಂಗಲ್ಪಟ್ಟು ವಿಭಾಗವನ್ನಾಗಿಸಿದರು. 1780ರ ವೇಳೆಗೆ ಆಂಗ್ಲರ ಈಸ್ಟ್ ಇಂಡಿಯ ಕಂಪನಿಯ ನೇರ ಆಡಳಿತಕ್ಕೆ ಒಳಪಟ್ಟ ಚೆಂಗಲ್ಪಟ್ಟು ವಿಭಾಗವಾಗಿ ಮುಂದುವರೆಯಿತು.

ಸಾಮಾಜಿಕ ವ್ಯವಸ್ಥೆ

ಇತ್ತೀಚೆಗೆ ವಿಷ್ಣುಕಾಂಚಿಯೆಂದು ಪ್ರಸಿದ್ಧಿಹೊಂದಿರುವ ಅತ್ತಿಯೂರು ಗ್ರಾಮವು ತಿರುವೇಖ, ಅಷ್ಟಭುಜ ಮತ್ತು ವರದರಾಜಸ್ವಾಮಿ ದೇವಸ್ಥಾನಗಳ ಸುತ್ತುಮುತ್ತಲೂ ಸುವ್ಯವಸ್ಥಿತ ಗ್ರಾಮವಾಗಿ ಬೆಳೆದುಬಂದಿದೆ. ಅದೇರೀತಿ ಏಕಾಂಬರೇಶ್ವರ ಹಾಗೂ ಕಾಮಾಕ್ಷಿ ಅಮ್ಮನ ದೇವಸ್ಥಾನಗಳ ಸುತ್ತಲೂ ಶಿವ ಕಾಂಚಿಯು ಮತ್ತು ಶಿವ ಬ್ರಾಹ್ಮಣರ ನಿವೇಶನಗಳು ಬೆಳೆದಿವೆ. ಅತ್ತಿಯೂರು ಗ್ರಾಮ ನಿವಾಸಿಗಳು ಕೇವಲ ಬ್ರಾಹ್ಮಣ ವರ್ಗಕ್ಕೆಷ್ಟೆ ಸೇರಿದವರಾಗಿರುವುದಿಲ್ಲ. ವರದರಾಜಸ್ವಾಮಿ ದೇವಸ್ಥಾನದಲ್ಲಿ ಸೇವೆಸಲ್ಲಿಸುವ ಸೇವಕರೆಲ್ಲರಿಗೂ ವಸತಿಸೌಕರ್ಯವನ್ನು ಒದಗಿಸಿಕೊಡಲಾಗಿದೆ.

ದೇವಸ್ಥಾನದ ಭೂಮಿಯ ಬೇಸಾಯದ ಕೆಲಸವನ್ನು ಮಾಡುವ ವೆಲ್ಲಾಳರು, ಹೂವಿನ ತೋಟವನ್ನು ನೋಡಿಕೊಳ್ಳುವ ದಾಸನಂಬಿಯರು, ಗೋವುಗಳನ್ನು ರಕ್ಷಿಸುವ ಮನ್ರಾಡಿಯರು, ಮನರಂಜನೆಯನ್ನು ಒದಗಿಸುವ ಓಲಗ ವಾದ್ಯದವರು, ನೃತ್ಯ ಗೀತದವರು, ಶಿಲ್ಪಿಗಳು ಮತ್ತು ವೈಶ್ಯ ವ್ಯಾಪಾರಿಗಳು ಅತ್ತಿಯೂರು ಅರ್ಥಾತ್ ಕಾಂಚಿ ಗ್ರಾಮದ ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿದ್ದಾರೆ.

ಬ್ರಾಹ್ಮಣನಿವಾಸಿಗಳಲ್ಲಿ ಪ್ರಮುಖರೆಂದೆನಿಸಿಕೊಂಡ ಶ್ರೀ ವೈಷ್ಣವರ ನಿತ್ಯಜೀವನವು ವರದರಾಜಸ್ವಾಮಿಯ ಕೈಂಕರ್ಯಕ್ಕೆ ಮೀಸಲಾಗಿದೆ. ಸ್ವಾಮಿಯ ಅರ್ಚನೆ, ಈಯಲ್ ಅಥವಾ ತಿರುವಾಯ್ ಮೊಳಿ ಮೊದಲಾದ ಪ್ರಬಂಧಗಳನ್ನು ಹಾಡುವುದು, ಸ್ವಾಮಿಯ ಅಭಿಷೇಕದ ಸಲುವಾಗಿ ತೀರ್ಥವನ್ನು ತರುವುದು, ಅಥವಾ ಪರಿಚಾರಕ ವರ್ಗದಲ್ಲಿ ಸೇವೆ ಸಲ್ಲಿಸುವುದು ಪ್ರತಿಯೊಬ್ಬ ಶ್ರೀವೈಷ್ಣವನ ಕರ್ತವ್ಯವೆಂದು ರಾಮಾನುಜಾಚಾರ್ಯರು ತಿಳಿಸಿಕೊಟ್ಟಿರುವರಲ್ಲದೆ ಅವರ ಕಾಲದಿಂದ ಇಂದಿನವರೆಗೂ ಅವ್ಯಾಹತವಾಗಿ ನಡೆದು ಬಂದಿದೆ. ಕೆಲವು ಶ್ರೀವೈಷ್ಣವ ಭಕ್ತಾದಿಗಳು ಹೊರನಾಡಿನಲ್ಲಿ ಉದ್ಯೋಗದಲ್ಲಿ ತೊಡಗಿದ್ದರೂ ಕೂಡ, ಸ್ವಾಮಿಯ ವಿಶೇಷ ಉತ್ಸವಗಳಲ್ಲಿ ಬಂದು ಸೇರಿ ಸ್ವಯಂಸ್ಫೂರ್ತಿಯಿಂದ ಸೇವೆ ಸಲ್ಲಿಸುವ ಪರಿಪಾಠವನ್ನು ಇಟ್ಟುಕೊಂಡಿದ್ದಾರೆ. ಶ್ರೀವೈಷ್ಣವನಿವಾಸಿಗಳಿಗೆ– ಯಾವುದೇ ಪಂಗಡಕ್ಕೆ ಸೇರಿರಲಿ– ವರದರಾಜಸ್ವಾಮಿಯು ಕರುಣಾಮಯ ಹಾಗೂ ಸುಂದರ ಮೂರ್ತಿ. ಶ್ರೀವೈಷ್ಣವಧರ್ಮಸ್ಥರು ತೆಂಗಲೈ ಮತ್ತು ವಡಗಲೈ ಎಂದು ಎರಡು ಪಂಗಡಗಳಾಗಿ ವಿಭಾಗಗೊಂಡಿದ್ದಾರೆ ಮತ್ತು ತೆಂಗಲೈ ವಂಶಜರು ಪೂರ್ವ, ಉತ್ತರ ಹಾಗೂ ದಕ್ಷಿಣ ಮಾಡ ಬೀದಿಗಳಲ್ಲಿಯೂ ಮತ್ತು ವಡಗಲೈ ಸಂಪ್ರದಾಯದವರು ಪಶ್ಚಿಮ ಸನ್ನಿಧಿಬೀದಿ, ಅನ್ನೆಕಟ್ಟೆಬೀದಿ ಹಾಗೂ ಇನ್ನೂ ಕೆಲವರು ದಕ್ಷಿಣ ಬೀದಿಯಲ್ಲಿ ವಾಸಿಸುತ್ತಾರೆ. ತೆಂಗಲೈ ಪಂಗಡದ ಪ್ರಮುಖ ವ್ಯಕ್ತಿಗಳಾಗಿದ್ದ ಅಳಗಿಯ ಮನವಾಳಜೀಯರ್, ಪ್ರತಿವಾದಿಭಯಂಕರಂ ಅಣ್ಣಂಗರಾಚಾರ್ಯ, ಕಂದಾಡೈ ವಂಶಜರು ವಡಗಲೈ ಪಂಗಡದ ತಾತಾಚಾರ್ಯ ವಂಶಜರು ತಮ್ಮ ಜೀವಿತದ ಬಹುಭಾಗವನ್ನು ವರದರಾಜಸ್ವಾಮಿಯ ಸೇವೆಯಲ್ಲಿಯೇ ಕಳೆದರಲ್ಲದೆ ಸೌಹಾರ್ದತೆಯಿಂದ ಇದ್ದರೆಂದು ಕಂಡುಬರುತ್ತದೆ. ತಾತಾಚಾರ್ಯರು ವಾಸಿಸುತ್ತಿದ್ದ ಪಶ್ಚಿಮ ಬೀದಿಯಲ್ಲಿ ತೆಂಗಲೈ ಕಂದಾಡೈ ರಾಮಾನುಜಯ್ಯನ್, ಮತ್ತು ಅನಂತಾಂಪಿಳ್ಳೈ ವಂಶಜರು ಇದ್ದರು. ಅದೇಬೀದಿಯಲ್ಲಿ ರಾಮಾನುಜ ಕೂಟ ಹಾಗೂ ವಾನಮಾಮಲೈ ಮಠವು ಕೂಡ ಇವೆ. ಪೂರ್ವಿಕರಲ್ಲಿ ಮಠ ಜೀವನವು ಕೇವಲ ವಿದ್ವತ್ ವರ್ಗಕ್ಕೆ ಸೀಮಿತವಾಗಿದ್ದು ಎರಡೂ ಪಂಗಡಗಳ ನಡುವೆ ಸಮಾಜ ಕಟ್ಟಳೆ ಅಥವಾ ನಿರ್ಬಂಧಗಳಿರಲಿಲ್ಲ. ಆದರೆ ಎರಡು ಶತಮಾನಗಳಿಂದೀಚೆಗೆ ಸಂಸ್ಕೃತಿ ಹಾಗೂ ವಿದ್ವನ್ಮಣಿಗಳ ಕೇಂದ್ರವಾದ ಕಾಂಚಿಯಲ್ಲಿ ಈ ಎರಡು ಪಂಗಡಗಳ ನಡುವೆ ಕಲುಷಿತ ವಾತಾವರಣವು ಏರ್ಪಟ್ಟಿರುವುದು ಒಂದು ಶೋಚನೀಯ ಪರಿಸ್ಥಿತಿಯನ್ನುಂಟುಮಾಡಿದ್ದರೂ ಕೂಡ ಇತ್ತೀಚಿನ ಪೀಳಿಗೆಯವರು ನಿತ್ಯವಿಧಿಗಳ ಬಂಧನಕ್ಕೆ ಒಳಗಾಗದೆ ಮತದ್ವೇಷದಲ್ಲಿ ಆಸ್ಥೆ ವಹಿಸುತ್ತಿಲ್ಲ.

ಶ್ರೀರಂಗಂ, ಶ್ರೀಪೆರಂಬದೂರು ಮಾದರಿಯಲ್ಲಿ ಅತ್ತಿಯೂರು ಅಥವಾ ಕಾಂಚಿ ಗ್ರಾಮದಲ್ಲಿ ಬ್ರಾಹ್ಮಣೇತರ ಶ್ರೀವೈಷ್ಣವ ನಿವಾಸಿಗಳು ಕೂಡ ವಾಸ ಮಾಡುತ್ತಾ ಬಂದಿದ್ದಾರೆ. ಅವರ ಪೈಕಿ ಸಾತ್ತಾದ ಶ್ರೀ ವೈಷ್ಣವರನ್ನು ಸಾಹಿತ್ಯ ಹಾಗೂ ಶಿಲಾ ಶಾಸನಗಳಲ್ಲಿ ಸಂಬೋಧಿಸಲಾಗಿದ್ದು ಈ ವೈಷ್ಣವರು ಯಜ್ಞೋಪವೀತವನ್ನು ಧರಿಸುವು ದಿಲ್ಲ. ಇವರಂತೆಯೇ ಯಜ್ಞೋಪವೀತವನ್ನು ಧರಿಸುವ ಸಾತ್ತಿನ ಶ್ರೀವೈಷ್ಣವರು ಇವೆರಡೂ ಸಂಗಡದವರು ಕೋಯಿಲ್ ಶ್ರೀ ವೈಷ್ಣವರೆಂದು ಪ್ರಖ್ಯಾತರಾಗಿದ್ದಾರೆ. ವರದರಾಜ ಸ್ವಾಮಿ ದೇವಸ್ಥಾನದಲ್ಲಿ ಕಂಡು ಬರುವ ಶಾಸನಗಳ ಪ್ರಕಾರ ಸಾತ್ತಾದ ಶ್ರೀ ವೈಷ್ಣವರಿಗೆ ಪ್ರಸಾದ ಭಾಗವನ್ನು ಅವರು ಸಲ್ಲಿಸಿದ ಸೇವೆಗೆ ಕೊಡ ಮಾಡುವ ಹಕ್ಕನ್ನು ಪಡೆದರು. ಸಾಳುವ ನರಸಿಂಹನ ಕಾಲದಲ್ಲಿ ಇದೇ ವರ್ಗಕ್ಕೆ ಸೇರಿದ್ದ ಕಂದಾಡೈ ರಾಮಾನುಜಯ್ಯನು ಕಾಂಚಿ, ಶ್ರೀರಂಗ ಮತ್ತು ತಿರುಪತಿ ದೇವಸ್ಥಾನಗಳಲ್ಲಿ ತನ್ನ ಶಿಷ್ಯ ವರ್ಗದವನನ್ನು ನೇಮಿಸಿ ಅವರಿಗೆ ಅನೇಕ ಸವಲತ್ತುಗಳನ್ನು ದೊರಕಿಸಿ ಕೊಟ್ಟನು. ದೇವರಿಗೆ ಕರ್ಪೂರ, ಸುಗಂಧ ದ್ರವ್ಯವನ್ನು ಒದಗಿಸಿಕೊಡುವ ಹಕ್ಕನ್ನು ಸಂಪಾದಿಸಿದನು. ಹಾಗೂ ದೇವಸ್ಥಾನದ ಅಧಿಕಾರ ವರ್ಗದವರ ಮೇಲೆ ಅವನ ಪ್ರಭಾವವು ಪರಿಣಾಮಕಾರಿಯಾಗಿತ್ತು.

ವೈಶ್ಯರ ಜನಸಂಖ್ಯೆಯು ಕೂಡ ತಮಿಳುನಾಡಿನಲ್ಲಿ ಅಧಿಕವಾಗಿತ್ತು. ಅವರನ್ನು ಚೆಟ್ಟಿಯಾರ್ ಅಥವಾ ನಗರತ್ತಾರ್ ಎಂದು ಕರೆಯಲಾಗಿತ್ತು. ಅವರಿಗಾಗಿ ವಿಷ್ಣು ಕಾಂಚಿಯಲ್ಲಿ ಪ್ರತ್ಯೇಕ ಚೆಟ್ಟಿವೀದಿ ಇದೆ. ಇವರು ಪ್ರಮುಖವಾಗಿ ವೈಶ್ಯ ವೃತ್ತಿಯನ್ನು ಅನುಸರಿಸುತ್ತಿದ್ದರು ಮತ್ತು ದಕ್ಷಿಣ ಭಾರತದ ವಿವಿಧ ಭಾಗಗಳೊಡನೆ ಸಂಪರ್ಕವನ್ನು ಇಟ್ಟುಕೊಂಡಿದ್ದರು. ದೇಶವಿದೇಶಗಳೊಡನೆಯೂ ಕೂಡ ಶ್ರೇಣಿಗಳ ಮೂಲಕ ವ್ಯಾಪಾರ ನಡೆಯಿಸಿ ಹೇರಳ ಹಣವನ್ನು ಸಂಪಾದಿಸಿದ್ದಾರೆ. ಮತ್ತು ಕಾಂಚಿಯ ವರದ ರಾಜ ಸ್ವಾಮಿ ದೇವಾಲಯಕ್ಕೆ ವಿವಿಧ ರೂಪದಲ್ಲಿ ದೇಣಿಗೆಗಳನ್ನು ಆಚಾರ್ಯ ಹಾಗೂ ಆಳ್ವಾರರಿಗೆ ಸಲ್ಲಿಸುತ್ತಾ ಬಂದಿದ್ದಾರೆ. ತಿರುಕ್ಕಚ್ಚಿ ನಂಬಿಗಾಗಿ ಪ್ರತ್ಯೇಕ ದೇವಸ್ಥಾನ ವನ್ನು ಕಟ್ಟಿಸಿಕೊಟ್ಟರು. ಅಯ್ಯನ್‌ಚೆಟ್ಟಿಯಾರ್ ಅವರ ಮಗಳಾದ ಸೆಟ್ಟಿ ರಾಜ ಮಾನಿಕ್ಕತ್ತಾರ್ ಅಥವಾ ವೀರನುಳಂಬದೇವಿಯಾರ್ ಅವರು ಸ್ವಾಮಿಗೆ ಕೊಡ ಮಾಡಿದ್ದ ಚಿಂಡೋಲಿ ಹಾಗೂ ಕುರಿಯೊಂದನ್ನು 1050ರ ಶಾಸನವೊಂದರಲ್ಲಿ ಸ್ಮರಿಸ ಲಾಗಿದೆ. ರಾಜರಾಜನ (III) 22ನೆಯ ಆಳ್ವಿಕೆಯ ವರ್ಷದ ಶಾಸನವೊಂದರ ಪ್ರಕಾರ ಪುರುಷಮಾಣಿಕ್ಯ ಶೆಟ್ಟಿಯು 33 ಆಕಳನ್ನು ದೇವರಿಗೆ ದಾನಮಾಡಿದನು. ಅದೇ ರೀತಿ 1532ರಲ್ಲಿ ವೈಸಿಕ ಗೋತ್ರದ ಕೋನಪ್ಪ ಸೆಟ್ಟಿಯು ಒಂದುನೂರು ಹೊನ್ನು ಗಳನ್ನು ದೇವಸ್ಥಾನದಲ್ಲಿ ನೈವೇದ್ಯಕ್ಕಾಗಿ ಬಿಟ್ಟುಕೊಟ್ಟನು. ನೆಡುಕಟ್ಟಗೋತ್ರದ ನಾರಾಯಣಸೆಟ್ಟಿಯಾರ್ 1535ರಲ್ಲಿ 530 ಚಿನ್ನದ ನಾಣ್ಯಗಳನ್ನು ದೇವಸ್ಥಾನಕ್ಕೆ ಬಿಟ್ಟುಕೊಟ್ಟು ಅದರ ಮೇಲಿನ ಬಡ್ಡಿಯನ್ನು ಆಳ್ವಾರರ ಉತ್ಸವ ಹಾಗೂ ವರದರಾಜ ಸ್ವಾಮಿಯ ನೈವೇದ್ಯಕ್ಕೆ – ತಿರುಕಚ್ಚಿನಂಬಿ ದೇವಸ್ಥಾನದ ಮುಂದೆ ಉತ್ಸವ

ಮೂರ್ತಿಯು ಬಿಜಯಂಗೈದಾಗ – ಉಪಯೋಗಿಸಬೇಕೆಂದು ವಿಧಿಸಿದನು. ಪಾಂಡವ ಪೆರುಮಾಳ್ ದೇವಸ್ಥಾನದಲ್ಲಿ ಕೆತ್ತಿಸಿರುವ 11 ನೇ ಶತಮಾನದ ಶಾಸನದ ಪ್ರಕಾರ ಪೆರುಳಾಳದಾಸನ್ ಎಂಬ ವರ್ತಕನು ದೇವರಿಗೆ ದೇಣಿಗೆ ನೀಡಿದನು. ಅವನು ಅರುಮೊಳಿ ದೇವನ್ ವೀದಿಯಲ್ಲಿ ವಾಸಿಸುತ್ತಿದ್ದನು. ಸೆಟ್ಟಿಯೂರ್ ವಂಶಕ್ಕೆ ಸೇರಿದ್ದ ಎಣ್ಣೆ ವರ್ತಕರು ಮುಮ್ಮುಡಿ ಚೋಳ ಪೆರುಂತೆರು ಹಾಗೂ ಕುರುಸನಿಪೆರುಂತೆರು ಬೀದಿಗಳಲ್ಲಿ ವಾಸಮಾಡುತ್ತಿದ್ದರೆಂದು ಗಂಡ ಗೋಪಾಲನ 1241ರ ಎರಡು ಶಾಸನಗಳಿಂದ ತಿಳಿದು ಬರುತ್ತದೆ.

ಸಾತ್ತಾದ ಶ್ರೀ ವೈಷ್ಣವರ ಪ್ರಮುಖ ಗುಂಪಿನವರಾಗಿದ್ದ ದಾಸನಂಬಿಗಳು ದೇವಸ್ಥಾನದ ತೋಟವನ್ನು ನೋಡಿಕೊಳ್ಳುತ್ತಿದ್ದರು. ಮತ್ತು ದೇವಸ್ಥಾನಕ್ಕೆ ಅವಶ್ಯಕವಾದ ಹೂಮಾಲೆ ಮತ್ತು ಪುಷ್ಪವನ್ನು ಕ್ರಮವಾಗಿ ಒದಗಿಸಿಕೊಡುವ ಜವಾಬ್ದಾರಿಯನ್ನು ವಹಿಸಿದ್ದರು. ಅವರನ್ನು ಪುಂಡರೀಕದಾಸ ಅಥವಾ ತಾತ ನಂಬಿಗಳೆಂದು ಕೂಡ ಕರೆಯಲಾಗುತ್ತಿತ್ತು. ಚೋಳರ ಕಾಲದ ಅನೇಕ ಶಾಸನಗಳಲ್ಲಿ ಅವರನ್ನು ತಿರುನಂದವನ್ ಕುಡಿ ಅಥವಾ ಬೃಂದಾವನದ ಸೇವಕ ವರ್ಗಕ್ಕೆ ಸೇರಿದವರೆಂದು ಸಂಬೋಧಿಸಲಾಗಿದೆ. ದೇವಸ್ಥಾನದಲ್ಲಿ ಅವರಿಗೆ ವಿಶಿಷ್ಟ ಸ್ಥಾನವನ್ನು ಕೊಡಲಾಗಿತ್ತು. ನಿಸ್ವಾರ್ಥ ಸೇವೆಗೆ ಹೆಸರಾಗಿದ್ದ ಅವರು ಭೂ ಕಂದಾಯದಿಂದ ವಿನಾಯಿತಿ ಪಡೆದಿದ್ದರು. ಅವರ ಮುಖ್ಯಸ್ಥನನ್ನು ಪೆರಿಯ ಪೆರುಮಾಳ್ ದಾಸನ್ ಎಂದು ಕರೆಯಲಾಗಿತ್ತೆಂದು 1245ರ ಶಾಸನವೊಂದರಿಂದ ವ್ಯಕ್ತವಾಗುತ್ತದೆ. ದಾಸನಂಬಿಗಳು ತಮ್ಮ ಹೆಸರನ್ನು ಕೂಡ ವರದರಾಜಸ್ವಾಮಿಯ ತರುವಾಯ ಧರಿಸಿದ್ದರು – ದೇವಪ್ಪೆರುಮಾಳ್ ತಾತನ್, ಉತ್ತರ ವೇದಿ ಅಳಗಿಯರ್, ಗರುಡನ್ ಮೇಲ್ ಅಳಗಿಯರ್ ಹಾಗೂ ಅಳಗಿಯ ಪೆರುಮಾಳ್ ದಾಸನ್ ಇತ್ಯಾದಿ.

ಗೋಪಾಲಕರು ಅಥವಾ ಮನ್ರಾಡಿ ನಿವಾಸಿಗಳು ವರದರಾಜ ಸ್ವಾಮಿ ದೇವಸ್ಥಾನಕ್ಕೆ ಸೇರಿದ್ದ ಮತ್ತೊಂದು ಸೇವಕ ವರ್ಗದವರಾಗಿದ್ದರು. ತಮಿಳು ಸಾಹಿತ್ಯದಲ್ಲಿ ಕೂಡ ಅವರ ನಿವಾಸಸ್ಥಾನಗಳಿಗೆ ಸಂಬಂಧಿಸಿದ ಉಲ್ಲೇಖವಿದ್ದು ಅವುಗಳನ್ನು ಆಯರ್ ಪ್ಪಾಡಿ ಎಂದು ಕರೆಯಲಾಗುತ್ತಿತ್ತು. ಮನ್ರಾಡಿಯರು ದೇವಸ್ಥಾನಕ್ಕೆ ಸಲ್ಲಿಸುತ್ತಿದ್ದ ಸೇವೆಯನ್ನು ಅಲ್ಲಿಯ ಶಾಸನಗಳು ಸ್ಮರಿಸಿವೆ. ಅವರು ದೇವಸ್ಥಾನಕ್ಕೆ ಭಕ್ತಾದಿಗಳು ದಾನವಾಗಿ ನೀಡಿದ ಪಶು, ಕುರಿ ಮತ್ತು ಎಮ್ಮೆ ಇವುಗಳ ಯಾಜಮಾನ್ಯ ಹಾಗೂ ರಕ್ಷಣೆಯನ್ನು ವಹಿಸಿಕೊಂಡು ದೇವರಿಗೆ ಅವಶ್ಯಕವಾದ ಹಾಲು, ತುಪ್ಪ, ಮೊಸರು ಮತ್ತು ಬೆಣ್ಣೆಯನ್ನು ಇಂತಿಷ್ಟು ಪ್ರಮಾಣದಲ್ಲಿ ಶಾಸನಗಳಲ್ಲಿ ನಮೂದಿಸಿರುವಂತೆ ಒದಗಿಸುತ್ತಿದ್ದರು. ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಕೂಡ ಕೊಬ್ಬು ಪದಾರ್ಥಗಳನ್ನು ದೊರಕಿಸುವ ಪರಿಪಾಠವನ್ನು ಇಟ್ಟುಕೊಂಡಿದ್ದರು. 1242ರ ಶಾಸನದ ಪ್ರಕಾರ 115 ಕುರಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ತುಪ್ಪ ಹಾಗೂ ಮೊಸರನ್ನು ದೇವಸ್ಥಾನದ ಅಡಿಗೆ ಮನೆಗೆ ನಿತ್ಯವೂ ಒದಗಿಸುವ ಕರಾರನ್ನು ಅನುಸರಿಸುತ್ತಿದ್ದರು. ದೇವಸ್ಥಾನದ ಆಳ

ತೆಯ ಪ್ರಮಾಣವಲ್ಲಿ ಒದಗಿಸಬೇಕಾಗಿತ್ತು. ಮತ್ತೊಂದು ಶಾಸನವು ಬೇರೆ ಬೇರೆ ಗುಂಪಿನ ಪಶುಗಳನ್ನು ಒದಗಿಸಿಕೊಟ್ಟ ಪಟ್ಟಿಯನ್ನು ಕೂಡ ಸೂಚಿಸಿದೆ. ಗೋಪಾಲಕರು ಪ್ರತಿ ನಿತ್ಯವೂ ಒಂದು ಉಳಕ್ಕು ತುಪ್ಪ ಹಾಗೂ ಒಂದು ನಾಳಿ ಮೊಸರನ್ನು ಮತ್ತು ಅದೇ ರೀತಿ ಉತ್ಸವಾದಿ ದಿನಗಳಲ್ಲಿಯೂ ಒಪ್ಪಿಸುತ್ತಿದ್ದರು. ಗೋದಾನವನ್ನು ಸ್ವೀಕರಿಸುವ ಉದ್ದೇಶವು ದೇವಸ್ಥಾನಕ್ಕೆ ಅವಶ್ಯಕವಾದ ಕೊಬ್ಬು ಪದಾರ್ಥಗಳನ್ನು ಒದಗಿಸಿಕೊಡುವು ದಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಗ್ರಾಮಾಭಿವೃದ್ಧಿಯ ದೃಷ್ಟಿಯಿಂದ ಕೂಡ ದೇವಸ್ಥಾನದ ಅಧಿಕಾರಿಗಳು ಜಾನುವಾರು ಸಂಖ್ಯೆಯ ಪ್ರಮಾಣವನ್ನು ಹೆಚ್ಚಿಸಲು ಅವಕಾಶ ನೀಡು ತ್ತಿದ್ದರು. ಮನ್ರಾಡಿಗಳು ಅಥವಾ ಗೋಪಾಲಕರು ವೈಷ್ಣವ ಮತಾವಲಂಬಿಗಳಾಗಿದ್ದಾರೆಂದು ಅವರು ಧರಿಸಿರುವ ದಾಸನಾಮಗಳಿಂದ ವ್ಯಕ್ತವಾಗುತ್ತದೆ. ಶಿಲಾಶಾಸನಗಳಲ್ಲಿ ಕಂಡು ಬರುವ ಹೆಸರುಗಳು ಇಂತಿವೆ. ಆಳ್ವಾರ್ ಕೋನ್, ಪೆರುಮಾಳ್ ಕೋನ್, ದಾಮೋದರ ಕೋನ್, ತಿರುವತ್ತಿಯೂರು ಕೋನ್, ವರಮ್‌ತರುವಾನ್ ಪೆರುಮಾಳ್ ಕೋನ್, ಪೇರರುಳಾನ್ ಕೋನ್–ಇವುಗಳಲ್ಲಿ ಕೊನೆಯ ಎರಡು ಹೆಸರುಗಳು ವರದರಾಜ ಸ್ವಾಮಿಯ ನಾಮರೂಪವನ್ನು ಸೂಚಿಸುತ್ತವೆ. ಇಂದಿಗೂ ಕೂಡ ಮನ್ರಾಡಿಗಳು ಕೃಷ್ಣಭಕ್ತರು. ವಿಷ್ಣು ಕಾಂಚಿಯ ಪೂರ್ವ ಹಾಗೂ ದಕ್ಷಿಣ ಭಾಗದಲ್ಲಿ ವಾಸಮಾಡು ತ್ತಾರೆ. ದೇವಸ್ಥಾನದ ಆಕಳುಗಳನ್ನು ಮೇಯಿಸಲು ಪ್ರತ್ಯೇಕ ಹುಲ್ಲುಗಾವಲನ್ನು ಉಚಿತವಾಗಿ ಒದಗಿಸಲಾಗುತ್ತಿತ್ತೆಂದು ಅದೇ ದೇವಸ್ಥಾನದ ಶಾಸನಗಳಿಂದ ವ್ಯಕ್ತ ವಾಗುತ್ತದೆ.

ಮಧ್ಯಕಾಲೀನ ದಕ್ಷಿಣ ಭಾರತದಲ್ಲಿ ಮಹಿಳೆಯರು ಸಾಮಾನ್ಯವಾಗಿ ತಮ್ಮ ಚಟುವಟಿಕೆಗಳನ್ನು ಗೃಹಕೃತ್ಯಕ್ಕೆ ಸೀಮಿತಗೊಳಿಸಿದರು. ಆದರೂ ಕೂಡ ಶ್ರೀವೈಷ್ಣವ ಸಂಪ್ರದಾಯದ ಪ್ರಕಾರ ಮಹಿಳೆಯರು ಕೂಡ ಆಳ್ವಾರರ ದಿವ್ಯಪ್ರಬಂಧವನ್ನು ಕಲಿಯುವ ಅವಕಾಶ ಪಡೆದಿದ್ದರು. ಮತ್ತು ದೇವಸ್ಥಾನದ ಕೈಂಕರ್ಯಗಳಲ್ಲಿ ಉತ್ಸವಮೂರ್ತಿಯ ಮುಂದೆ ಸಾಮೂಹಿಕವಾಗಿ ತನಿಯನ್‌ಗಳನ್ನು ಹಾಡುತ್ತಿದ್ದರೆಂದು 13 ನೇ ಶತಮಾನದ ಶಾಸನಗಳಿಂದ ವ್ಯಕ್ತವಾಗುತ್ತದೆ. ಅವರ ಪೋಷಣೆಗಾಗಿ ತೆಲುಗು ಚೋಡರ ಗಂಡ ಗೋಪಾಲನು ವಿಶೇಷ ದತ್ತಿಯನ್ನು ಬಿಟ್ಟಿದ್ದನು. ಅದೇ ರೀತಿ 1535ರ ಶಾಸನ ವೊಂದರ ಪ್ರಕಾರ ಅವರಿಗೆ ಪ್ರಸಾದದ ಒಂದು ಭಾಗವನ್ನು ಬಿಟ್ಟುಕೊಡಬೇಕೆಂದು ವಿಧಿಸಲಾಗಿತ್ತು. ಆದರೆ ಇಂದು ಮಹಿಳೆಯರು ಕೇವಲ ಪ್ರೇಕ್ಷಕರ ವರ್ಗಕ್ಕೆ ಸೇರಿದ್ದಾರೆ ಮತ್ತು ತನಿಯನ್‌ಗಳನ್ನು ಪುರುಷವರ್ಗದವರು ಮಾತ್ರ ಹಾಡುತ್ತಾರೆ. ಕೆಲವು ಸಣ್ಣ ಪುಟ್ಟ ಸೇವೆಗಳನ್ನು ಮಹಿಳೆಯರಿಗೆ ಇಂದಿನವರೆಗೂ ವಹಿಸಿಕೊಡಲಾಗುತ್ತಿದೆ. ಸೇವಕಿಯರಲ್ಲಿ ಕೆಲವರು ಶ್ರೀಮಂತರಾಗಿದ್ದರಲ್ಲದೆ ಅವರು ದೇವರಿಗೆ ದೇಣಿಗೆಯನ್ನು ನೀಡಿದ್ದ ಉದಾಹರಣೆಗಳು ಶಾಸನಗಳಿಂದ ದೊರೆತಿವೆ. ತೆಲುಗುಚೋಡರ ಗಂಡ ಗೋಪಾಲನ ಸೇವಕಿಯೊಬ್ಬಳು ಸಂದಾದೀಪಕ್ಕೆ ದಾನಮಾಡಿದ್ದಳು. ಕೆಲವು ಸ್ತ್ರೀಯರು ಸನ್ಯಾಸಾಶ್ರಮವನ್ನು ಸ್ವೀಕರಿಸಿದ ನಿದರ್ಶನಗಳು ಕೂಡ ಇವೆ. ಅವರನ್ನು ಕೊರ್ರಿಗಳೆಂದು ಕರೆಯ

ಲಾಗುತ್ತಿತ್ತು. ಅವರು ತುಳಸಿ ಮಾಲೆ ಹಾಗೂ ನಾಮವನ್ನು ಧರಿಸುತ್ತಿದ್ದರು. ರಾಮಾನುಜರ ಶಿಷ್ಯವರ್ಗದಲ್ಲಿ ಅಂತಹ ಕೆಲವು ಸನ್ಯಾಸಿನಿಯರಿದ್ದರು. 13 ನೇ ಶತಮಾನದಲ್ಲಿ ಜೀವಿಸಿದ್ದ ಪೆರುಳಾಳನ್ ಕೋರಿ ಎಂಬ ಸ್ತ್ರೀ ಸನ್ಯಾಸಿನಿಯೊಬ್ಬಳು ಬರೆದಿಟ್ಟ ಉಯಿಲಿನ ಪ್ರಕಾರ ಅವಳ ಆಭರಣಗಳನ್ನು ಮಾರಿಬಂದ ಹಣದಲ್ಲಿ 100 ಕುಳಿ ಭೂಮಿಯನ್ನು ಕೊಂಡುಕೊಂಡು ತನ್ನ ಮೃತ್ಯುವಿನ ನಂತರ ದೇವಸ್ಥಾನಕ್ಕೆ ಬಿಟ್ಟುಕೊಡಬೇಕೆಂದು ಆದೇಶ ನೀಡಿದ್ದಳು. ಅದೇ ರೀತಿ ತಿರುವತ್ತಿಯೂರು ಕೋರಿಯೆಂಬ ಇನ್ನೊಬ್ಬ ಸನ್ಯಾಸಿನಿಯು ದೇವಸ್ಥಾನದ ನಂದಾದೀಪಕ್ಕೆ ಆಕಳನ್ನು ದಾನ ಮಾಡಿದಳು.

ದಕ್ಷಿಣ ಭಾರತದ ಇತರ ದೇವಾಲಯಗಳಂತೆ ವರದರಾಜ ಸ್ವಾಮಿ ದೇವಾಲಯದಲ್ಲಿಯೂ ಕೂಡ "ದೇವರಡಿಯಾಳ್" ಅಥವಾ ದೇವದಾಸಿ ಪದ್ಧತಿಯು ಅಸ್ತಿತ್ವದಲ್ಲಿತ್ತು. ದೇವದಾಸಿಯರು ನಿಯಮಿತ ವೇಳೆಗಳಲ್ಲಿ ಸ್ವಾಮಿಯ ಮುಂದೆ ಹಾಡಿ ನೃತ್ಯ ಮಾಡುತ್ತಿದ್ದರು ಮತ್ತು ಉತ್ಸವಕಾಲದಲ್ಲಿ ಸ್ವಾಮಿಯನ್ನು ಅನುಸರಿಸುತ್ತಿದ್ದರು. ಇಂತಹ ಸಮಯಗಳಲ್ಲಿ ಸಾರ್ವಜನಿಕವಾಗಿ ಪ್ರದರ್ಶನ ನೀಡಬೇಕಾಗಿತ್ತು. ಸಂಗೀತ ಹಾಗೂ ನೃತ್ಯದಲ್ಲಿ ಪರಿಣತರಾಗಿದ್ದರು. ಆದರೆ ಅವರನ್ನು ವರದರಾಜ ಸ್ವಾಮಿ ದೇವಸ್ಥಾನದಲ್ಲಿ ಎಂದಿನಿಂದ ನೇಮಿಸಲಾಗಿತ್ತೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ಕೂಡ, 1558 ರಲ್ಲಿ ಮೊದಲ ಬಾರಿಗೆ ಅವರ ಉಲ್ಲೇಖವಿದೆ. ಅದರಲ್ಲಿ ಅವರಿಗೆ ಪ್ರಸಾದದ ನಿರ್ದಿಷ್ಟ ಭಾಗವನ್ನು ಕೊಡಬೇಕೆಂದು ನಿಶ್ಚಯಿಸಲಾಗಿತ್ತು. ಮೂಲತಃ ದೇವದಾಸಿಯರನ್ನು ದೇವರ ಮನರಂಜನೆಗಾಗಿ ನಿಯಮಿಸಲಾಗಿತ್ತು. ಮತ್ತು ಸಮಾಜದಲ್ಲಿ ಅವರು ಗೌರವಸ್ಥಾನವನ್ನು ಗಳಿಸಿದರು. ಶ್ರೀಮಂತ ವರ್ಗದವರು ಕೂಡ ತಮ್ಮ ಮಕ್ಕಳನ್ನು ಸ್ವಾಮಿಯ ಸೇವೆಗೆ ಬಿಟ್ಟು ಕೊಡುತ್ತಿದ್ದರೆಂದು ಚೋಳರ ಕಾಲದ ಶಾಸನಗಳಿಂದ ವ್ಯಕ್ತವಾಗುತ್ತದೆ. ಅವರಿಗಾಗಿ ಯೋಗ್ಯ ಪರಿಹಾರಧನ ಹಾಗೂ ಭೂಸ್ವಾಮ್ಯತ್ವವನ್ನು ಕೊಡಲಾಗಿತ್ತು. ದೇವದಾಸಿ ಪದ್ಧತಿಯಲ್ಲಿ ಕ್ರಮೇಣ ಎಷ್ಟೇ ಲೋಪದೋಷಗಳು ಕಂಡುಬಂದರೂ ದೇವದಾಸಿಯರು ಸಂಗೀತ ಹಾಗೂ ನೃತ್ಯ ಕಲೆಯನ್ನು ಪರಂಪರಾಗತವಾಗಿ ಪೋಷಿಸಿ ಅವರ ಬೆಳವಣಿಗೆಯಲ್ಲಿ ಮಹತ್ವಪಾತ್ರವನ್ನು ವಹಿಸಿದ್ದಾರೆ. ದೇವಸ್ಥಾನದವರು ಕೂಡ ಈ ವರ್ಗದವರಿಂದ ಕಾಲಕಾಲಕ್ಕೆ ಸೇವೆಯನ್ನು ಉತ್ಸವಾದಿ ಕಾಲದಲ್ಲಿ ಪಡೆದುಕೊಂಡು ಅವರಿಗೆ ಯೋಗ್ಯಪುರಸ್ಕಾರ ನೀಡಿ ಕಲೆಯ ನೆಲೆಗೆ ಕಾರಣರಾಗಿದ್ದಾರೆ.

ದೇವಾಲಯದ ಉದ್ಯೋಗ ವರ್ಗದಲ್ಲಿ ಅನೇಕ ಸಂಗೀತ ವಿದ್ವಾಂಸರಿದ್ದರೆಂದು 1558ರ ಶಾಸನವೊಂದರಿಂದ ತಿಳಿದುಬರುತ್ತದೆ. ಉತ್ಸವಾದಿಕಾಲದಲ್ಲಿ ದೇವರ ಮುಂದೆ ಶಾಸ್ತ್ರೀಯ ಸಂಗೀತವನ್ನು ಹಾಡುತ್ತಿದ್ದರು. ಸಂಗೀತವಿದ್ವಾಂಸರಲ್ಲಿ ನಾಗಸ್ವರ ವಿದ್ವಾಂಸರು ಬಹುಮುಖ್ಯ ಸೇವಾವರ್ಗದವರಾಗಿದ್ದರು. ನಾಗಸ್ವರವಾದ್ಯವು ಶುಭ ಸೂಚಕವೆಂದು ಪರಿಗಣಿಸಲಾಗಿದ್ದು, ಬೆಳಗು ಮುಂಜಾನೆ ನಡೆಸುತ್ತಿದ್ದ ಸೇವಾಕಾಲದಲ್ಲಿ ಸ್ವಾಮಿಯ ಮುಂದೆ ಅದನ್ನು ನುಡಿಸಲಾಗುತ್ತಿತ್ತು. ಪಂಚಲೋಹಕಾರರು, ಕಲ್ಲುಕುಟಿ

ಗರು, ಸ್ಥಪತಿ ಹಾಗೂ ಶಿಲ್ಪಿ ವರ್ಗದವರಿಗೆ ತಮ್ಮ ಕಲಾಕುಶಲತೆಯನ್ನು ವ್ಯಕ್ತಪಡಿಸಲು ದೇವಸ್ಥಾನವು ಸಾಕಷ್ಟು ಅವಕಾಶ ಹಾಗೂ ಯೋಗ್ಯಪುರಸ್ಕಾರವನ್ನು ನೀಡುತ್ತಿತ್ತು.

ವರದರಾಜಸ್ವಾಮಿ ದೇವಸ್ಥಾನಕ್ಕೆ ಸೇರಿದಂತೆ ಅನೇಕ ಮಠಗಳಿದ್ದು ವಿದ್ಯಾದಾನ ವನ್ನು ಕೂಡ ಮಾಡುವ ಜವಾಬ್ದಾರಿಯನ್ನು ವಹಿಸಿದ್ದುವು. ಕುಲೋತ್ತುಂಗನ (I) ಕಾಲ ದಲ್ಲಿ ಆದಿಕೇಶವನ್ ಮಠವು ಒಂದು ಪ್ರಖ್ಯಾತ ವಿದ್ಯಾಕೇಂದ್ರವಾಗಿತ್ತು. ಅಲ್ಲಿ ವಿದ್ವಾಂಸರು ಚರ್ಚೆ ಗೋಷ್ಠಿ ಹಾಗೂ ಕವಿಯರ್ ಸಂವೇಗಾಗಿ ಸೇರುತ್ತಿದ್ದರು. ಪೆರಿಯ ಕೋಯಿಲ್ ಮಹಾಮುನಿಯು ಅದರ ಅಧ್ಯಕ್ಷತೆಯನ್ನು ವಹಿಸಿದ್ದರು. ಅಲ್ಲಿಯ ನೆರೆ ಹೊರೆಯ ನಿವಾಸಿಗಳು ಮಠಕ್ಕಾಗಿ ದಾನ ನೀಡಿದ್ದರು. ಅದೇ ರೀತಿ 1359ರ ಮತ್ತೊಂದು ಶಾಸನವು ವೈಷ್ಣವದಾಸ ಅಥವಾ ಬ್ರಹ್ಮತಂತ್ರಸ್ವತಂತ್ರರ ಅಧ್ಯಕ್ಷತೆಯಲ್ಲಿ ಕಂಚಿಯಲ್ಲಿದ್ದ ಇನ್ನೊಂದು ಮಠವನ್ನು ಉಲ್ಲೇಖಿಸಿದೆ. ವೈಷ್ಣವಭಕ್ತಾದಿಗಳಲ್ಲಿ ರಾಮಾನುಜದರ್ಶನದ ತತ್ವಗಳನ್ನು ಪ್ರಚುರಪಡಿಸುವುದೇ ಈ ಮಠದ ಮುಖ್ಯ ಉದ್ದೇಶ ವಾಗಿತ್ತು. ಈ ಮಠವು ವೈದಿಕ ಹಾಗೂ ಸಾಹಿತ್ಯಾಭ್ಯಾಸ ಕೇಂದ್ರವಾಗಿತ್ತು. ಬ್ರಹ್ಮ ತಂತ್ರರು ವೇದಾಂತದೇಶಿಕ ಹಾಗೂ ನಯನಂವರದಾಚಾರ್ಯರ ಶಿಷ್ಯರು ಹಾಗೂ ಘನ ವಿದ್ವಾಂಸರಾಗಿದ್ದರು. ಅದೇ ಕಾಲದಲ್ಲಿ ಶ್ರೀ ಪಾದಸ್ವಾಮಿಗಳ ಅಧ್ಯಕ್ಷತೆಯಲ್ಲಿ ವರದ ರಾಜಸ್ವಾಮಿ ದೇವಸ್ಥಾನದಲ್ಲಿ ವೇದಮಠವಿತ್ತು. ವೇದಪಾಠದಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದ ಈ ಮಠಕ್ಕೆ ವಿಶೇಷವಾಗಿ ಮಾಧ್ವಧರ್ಮದವರು ಪ್ರೋತ್ಸಾಹ ನೀಡುತ್ತಿದ್ದಂತೆ ಕಾಣುತ್ತದೆ. ದ್ವೈತಸಂಪ್ರದಾಯದ ಮುಖಂಡರಾಗಿದ್ದ ವ್ಯಾಸತೀರ್ಥರು ಹಾಗೂ ಸತ್ಯ ವಿಜಯತೀರ್ಥರು ಕೂಡ ದೇವಸ್ಥಾನದ ವ್ಯವಹಾರದಲ್ಲಿ ಹೆಚ್ಚು ಆಸ್ಥೆವಹಿಸಿದ್ದರೆಂದು ವಿಜಯನಗರದ ಕಾಲದ ಶಾಸನಗಳಿಂದ ವ್ಯಕ್ತವಾಗುತ್ತದೆ. 1511ರ ಶಾಸನದ ಪ್ರಕಾರ ಮಧ್ವಗುರುಗಳು ವರದರಾಜಸ್ವಾಮಿಗಾಗಿ ನಾಗವಾಹನ ಹಾಗೂ ಗ್ರಾಮವೊಂದನ್ನು ಸಮರ್ಪಿಸಿದರಲ್ಲದೆ ಕೃಷ್ಣದೇವನ ಗೌರವಾರ್ಥವಾಗಿ ಉತ್ಸವವನ್ನು ಕೂಡ ಏರ್ಪಡಿಸಿ ದರು. 1726ರ ಮತ್ತೊಂದು ಶಾಸನದಲ್ಲಿ ಉಲ್ಲೇಖಿಸಿರುವಂತೆ, ಉತ್ತರಾದಿಮಠದ ಮಧ್ವಗುರು ಸತ್ಯವಿಜಯತೀರ್ಥರು ದೇವಸ್ಥಾನದಲ್ಲಿ ಗೌರವಸ್ಥಾನವನ್ನು ಗಳಿಸಿದ್ದರಲ್ಲದೆ ಕೆಲವು ಹಕ್ಕುಗಳನ್ನು ಕೂಡ ಅನುಭವಿಸುತ್ತಿದ್ದರು.

ಅಳಗಿಯ ಮನವಾಳಜೀಯರ ಮಠವು ದೇವಸ್ಥಾನದ ಅಂಗವಾಗಿತ್ತು. ಈ ಮಠದ ಜೀಯರ್‌ಗಳು ದೇವಸ್ಥಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಘನ ವಿದ್ವಾಂಸರೆಂದೆನಿಸಿಕೊಂಡಿದ್ದರು. ಇಂದಿಗೂ ಕೂಡ ಈ ಮಠವು ವೈದಿಕ ಹಾಗೂ ಆಧ್ಯಾತ್ಮಿಕ ಕೇಂದ್ರವಾಗಿ ಮುಂದುವರಿದಿದೆ.

ಬಡವರ ಬಂಧುವೆಂದು ಕೂಡ ಪ್ರಖ್ಯಾತಿ ಪಡೆದ ಕಂಚಿ ಹಾಗೂ ಇತರ ದಿವ್ಯ ಕ್ಷೇತ್ರಗಳಲ್ಲಿ ಉತ್ಸವಾದಿಗಳು, ವಿವಾಹ ಹಾಗೂ ಇತರ ಸಮಾರಂಭಗಳಲ್ಲಿ ಬಡವರಿಗೆ ಅನ್ನದಾನ, ಪ್ರವಾಸಿಗರಿಗೆ ವಸತಿ ಸೌಕರ್ಯ ಮತ್ತು ತರಿಯಾರಾಧನೆ, ಇತ್ಯಾದಿ ಗಳ ವ್ಯವಸ್ಥೆ ಮಾಡುವುದು ಒಂದು ಪವಿತ್ರ ಕರ್ತವ್ಯವೆಂದು ಅಲ್ಲಿಯ ಕೌಟುಂಬಿಕ

ನಿವಾಸಿಗಳು, ಅಹೋಬಲ ಮತ್ತು ವಾನಮಾಮಲೈ ಮಠಸ್ಥರು ಅರಿತು ಇಂದಿಗೂ ನಡೆಸಿಕೊಂಡು ಬಂದಿದ್ದಾರೆ. 15 ನೇ ಶತಮಾನದಿಂದೀಚೆಗೆ ಅಂದರೆ ಸಾಳುವ ನರಸಿಂಹ ಹಾಗೂ ಕಂದಾಡೆ ರಾಮಾನುಜ ಅಯ್ಯಂಗಾರ್ ಅವರ ಮುಂದಾಳುತ್ವದ ಕಾರಣ ತಿರುಪತಿ, ಕಾಂಚಿ, ಶ್ರೀರಂಗಂ ಹಾಗೂ ಶ್ರೀಪೆರಂಬದೂರು ಮೊದಲಾದ ದಿವ್ಯ ಕ್ಷೇತ್ರಗಳಲ್ಲಿ ರಾಮಾನುಜ ಕೂಟವು ಈ ಕರ್ತವ್ಯವನ್ನು ಯೋಗ್ಯರೀತಿಯಿಂದ ನೆರವೇರಿಸುತ್ತಿದೆ. ದೇಶಾಂತರಿಗಳಿಗೂ ಸ್ಥಳೀಯ ನಿವಾಸಿಗಳಿಗೂ ಇದೊಂದು ವರದಾನವಾಗಿದೆ.

— o —

ಕೃತಜ್ಞತೆ

ಡಾ|| ಕೆ. ವಿ. ರಾಮನ್ ಅವರ "Sri Varadarajaswami Temple of Kanchi" ಗ್ರಂಥವು ಈ ಲೇಖನವನ್ನು ಬರೆಯುವುದಕ್ಕೆ ಅಧಿಕ ಪ್ರಮಾಣದಲ್ಲಿ ಉಪಯುಕ್ತವಾಗಿದೆ. ಅವರಿಗೆ ನಾನು ಚಿರಋಣಿಯಾಗಿದ್ದೇನೆ.

ಟಿ. ಆರ್. ನಾಗಪ್ಪ

ರಾಷ್ಟ್ರೀಯ ವಯಸ್ಕರ ಶಿಕ್ಷಣ ಸಾಧನೆ (1979-80)

ಕಳೆದ ಐದು ಪಂಚವಾರ್ಷಿಕ ಯೋಜನೆಗಳಲ್ಲಿ ಭಾರತ ಸರಕಾರ ತನ್ನ ರಾಷ್ಟ್ರದ ಅಭಿವೃದ್ಧಿಗೆ 96,911 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ಆದರೂ ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡ 46 ಮಂದಿ ಇನ್ನೂ ಬಡತನದ ರೇಖೆಯ ಅಂಚಿನಲ್ಲಿ ಇದ್ದಾರೆ. ಅವರ ಉದ್ಧಾರಕ್ಕೆ ಕೆಳಗೆ ಕಂಡ ಕನಿಷ್ಠ ಕಾರ್ಯಕ್ರಮಗಳು ಆಗತ್ಯ.

1. ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸ ಯೋಜನೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದು.
2. ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ಸುಧಾರಣೆ.
3. ಕುಡಿಯುವ ನೀರಿನ ವ್ಯವಸ್ಥೆ
4. ರಸ್ತೆಗಳ ನಿರ್ಮಾಣ ಮತ್ತು ದುರಸ್ತಿ
5. ಗ್ರಾಮೀಣರ ವಸತಿ ಸೌಕರ್ಯ
6. ವಿದ್ಯುಚ್ಛಕ್ತಿಯ ಸರಬರಾಜು
7. ಪೌಷ್ಠಿಕ ಆಹಾರ ಯೋಜನೆ
8. ನಗರದ ಕೊಳಚೆ ಪ್ರದೇಶಗಳ ಸುಧಾರಣೆ
9. ವಯಸ್ಕರ ಶಿಕ್ಷಣ

ಮೇಲೆ ವಿವರಿಸಿರುವ ಗುರಿಗಳನ್ನು ಸಾಧಿಸಲು ಎಲ್ಲ ಅಭಿವೃದ್ಧಿ ಇಲಾಖೆಗಳೂ ಒಟ್ಟಾಗಿ ಸೇರಿ ಕೆಲಸಮಾಡಬೇಕಾಗಿದೆ. ಈ ಇಲಾಖೆಗಳ ಸೇವೆಯ ಪ್ರತಿಫಲ ಎಲ್ಲರನ್ನೂ ಮುಟ್ಟಬೇಕಾಗಿದೆ. ಅದರೆ, 'ಬಾಯುಳ್ಳವನು ಬರದಲ್ಲಿ ಗೆದ್ದ' ಎಂಬಂತೆ ಕೇವಲ ಹಲವಾರು ವಾಚಾಳಿಗಳು ಮತ್ತು ಪ್ರತಿಭಾವಂತರು ಸರಕಾರದ ಸೌಲಭ್ಯಗಳನ್ನು ಪಡೆಯುತ್ತಿದ್ದರೆ ಆಶ್ಚರ್ಯವೇನಲ್ಲ. ಜೊತೆಗೆ ಇನ್ನು ಕೆಲವರಿಗೆ ಸರಕಾರದ ಸೌಲಭ್ಯಗಳ ಪರಿಚಯವೇ ಇಲ್ಲ, ಎಂದು ಹೇಳಿದಲ್ಲಿ ಉತ್ಪ್ರೇಕ್ಷೆ ಆಗಲಾರದು.

ಜನತೆ ಅದರಲ್ಲೂ ದೀನದುರ್ಬಲ ವರ್ಗದವರು ಮತ್ತು ಮಹಿಳೆಯರು ಸರಕಾರದ ವಿವಿಧ ಅಭಿವೃದ್ಧಿ ಇಲಾಖೆಗಳು ನೀಡುವ ಸೌಲಭ್ಯವನ್ನು ಪಡೆದು ತಮ್ಮ ಪ್ರಗತಿಯನ್ನು ಸಾಧಿಸಬೇಕಾಗಿದೆ. ಇದು ರಾಷ್ಟ್ರೀಯ ವಯಸ್ಕರ ಶಿಕ್ಷಣದ ಗುರಿ. ಸ್ವಾತಂತ್ರ್ಯ ಸಂದ 30 ವರ್ಷಗಳಲ್ಲಿ ಸರಕಾರ ವಯಸ್ಕರ ಶಿಕ್ಷಣಕ್ಕೆ ಸಾಕಷ್ಟು ಗಮನ ನೀಡಲಿಲ್ಲ.

1977ನೆಯ ಏಪ್ರಿಲ್ ಏಳನೆಯ ತಾರೀಖು ಭಾರತದ ವಯಸ್ಕರ ಶಿಕ್ಷಣ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯುವ ದಿನ. ಅಂದು ಎಲ್ಲ ರಾಜಕೀಯ ಪಕ್ಷಗಳು ಒಟ್ಟಾಗಿ ಭಾರತ ಸರಕಾರ ರೂಪಿಸಿದ್ದ ವಯಸ್ಕರ ಶಿಕ್ಷಣ ಯೋಜನೆಗೆ ತಮ್ಮ ಅಂಗೀಕಾರ ಮುದ್ರೆಯನ್ನೊತ್ತಿದವು. ಇದೊಂದು ಶುಭಸೂಚನೆ. ಇಂದಿನ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ಹಲವಾರು ರೀತಿಗಳಲ್ಲಿ ಹಿಂದಿನ ಯೋಜನೆಗಳಿಗಿಂತ ವೈಶಿಷ್ಟ್ಯಪೂರ್ಣ. ಮೊದಲನೆಯದಾಗಿ ಭಾರತ ಸರಕಾರ ನಿರೂಪಿಸಿದ ಯೋಜನೆ ಮೇಲೆ ತಿಳಿಸಿದಂತೆ ಎಲ್ಲ ರಾಜಕೀಯ ಪಕ್ಷಗಳ ಅಂಗೀಕಾರ ಮುದ್ರೆಯನ್ನು ಪಡೆದಿದೆ. ಎರಡನೆಯದಾಗಿ ಇದೊಂದು ಬೃಹತ್ ಯೋಜನೆ. ಐದು ವರ್ಷಗಳಲ್ಲಿ 15–35 ವಯೋಮಿತಿಯ 10 ಕೋಟಿ ಅನಕ್ಷರಸ್ಥ ವಯಸ್ಕರಿಗೆ ಯೋಜನೆ ಅನ್ವಯವಾಗಲಿದೆ. ಮೂರನೆಯದಾಗಿ ಇದು ಕೇವಲ ವಿದ್ಯಾಇಲಾಖೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲ ಅಭಿವೃದ್ಧಿ ಇಲಾಖೆಗಳು ಈ ಕಾರ್ಯಕ್ರಮದಲ್ಲಿ ತೊಡಗಬೇಕು. ನಾಲ್ಕನೆಯದಾಗಿ ಇದು ಜನತಾ ಚಳುವಳಿಯ ಸ್ವರೂಪ ತಾಳಲಿದೆ. ಈ ದೃಷ್ಟಿಯಿಂದ ಖಾಸಗಿ ಸಂಘಸಂಸ್ಥೆಗಳು ಹೆಚ್ಚಿನ ರೀತಿಯಲ್ಲಿ ಸೇವೆ ಸಲ್ಲಿಸಲು ಅವಕಾಶ ಮತ್ತು ಹೆಚ್ಚಿನ ಪ್ರೋತ್ಸಾಹವನ್ನು ಭಾರತ ಸರಕಾರ ನೀಡಲಿದೆ. ಐದನೆಯದಾಗಿ ಶಿಕ್ಷಣಾರ್ಥಿಗಳ ಅಗತ್ಯ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ನಡೆಯಬೇಕಾದ ಕಾರ್ಯಕ್ರಮ. ಆರನೆಯದಾಗಿ ದೀನದುರ್ಬಲವರ್ಗದವರಿಗೆ ಮತ್ತು ಮಹಿಳೆಯರಿಗೆ ಈ ಯೋಜನೆಯಲ್ಲಿ ಪ್ರಾಶಸ್ತ್ಯ ದೊರಕಲಿದೆ.

ಯೋಜನೆಯನ್ನು ರೂಪಿಸುವ ಮುನ್ನ ವಯಸ್ಕರ ಶಿಕ್ಷಣ ತಜ್ಞರ, ಕಾರ್ಮಿಕ ಸಂಘದ ಪ್ರತಿನಿಧಿಗಳ, ಉಪಾಧ್ಯಾಯರ, ಸ್ವಯಂಸೇವಾಸಂಸ್ಥೆಗಳ ಹಾಗೂ ಯುವಕ ಸಂಘಗಳ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆದಿದೆ. ವಿಶ್ವವಿದ್ಯಾನಿಲಯದ ಧನ ಸಹಾಯ ಮಂಡಲಿ ಮತ್ತು ಅಖಿಲಭಾರತ ವಿಶ್ವವಿದ್ಯಾನಿಲಯಗಳ ಸಂಘವು ಈ ಯೋಜನೆಯನ್ನು ಅಂಗೀಕರಿಸಿವೆ. ಮೇಲಾಗಿ ವಿವಿಧ ರಾಜ್ಯಗಳ ವಿದ್ಯಾಮಂತ್ರಿಗಳ ಸಭೆಯು ದೀರ್ಘವಾಗಿ ಪರಿಶೀಲಿಸಿ ತನ್ನ ಅಂಗೀಕಾರ ಮುದ್ರೆಯನ್ನು ಒತ್ತಿದೆ.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯ ಗುರಿ ಏನು?

ಸಾರ್ವಜನಿಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣ ಒಂದೇ ನಾಣ್ಯದ ಎರಡು ಮುಖಗಳು. ಈ ಎರಡು ಕಾರ್ಯಕ್ರಮಗಳು ಒಟ್ಟಾಗಿ ಪರಿಣಾಮಕಾರಿಯಾಗಿ ನಡೆಯತಕ್ಕದ್ದು.

ನಿರಕ್ಷರತೆ ವ್ಯಕ್ತಿಯ ಪ್ರಗತಿಗೆ ಹಾಗೂ ರಾಷ್ಟ್ರದ ಪ್ರಗತಿಗೆ ಮಾರಕ. ಈ ದೃಷ್ಟಿಯಿಂದ ಇದು ಅಗತ್ಯವಾಗಿ ಆಗಬೇಕಾದ ಕಾರ್ಯಕ್ರಮ.

ಶಿಕ್ಷಣ ಕೇವಲ ಶಾಲೆಗೆ ಸೀಮಿತವಾದುದಲ್ಲ. ಅದು ಜೀವನದ ಒಂದು ಭಾಗ.

ಶಿಕ್ಷಣ ಜೀವನ ಪರ್ಯಂತ (ಲೈಫ್ ಲಾಂಗ್ ಎಜುಕೇಷನ್) ಸಾಗುವ ಒಂದು ಕಾರ್ಯಚಟುವಟಿಕೆ. ಅದು ಜೀವನ ಶಿಕ್ಷಣವಾದಾಗ ಮಾತ್ರ ಹೆಚ್ಚು ಅರ್ಥಪೂರ್ಣವಾದೀತು.

ದೀನದುರ್ಬಲವರ್ಗದವರು ಹಾಗೂ ನಿರಕ್ಷರರು ವಿಚಾರವಿನಿಮಯ, ಸಾಕ್ಷರತಾ ಕಾರ್ಯಕ್ರಮ ಹಾಗೂ ಇತರ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿಯೂ ಹಾಗೂ ಪರಿಣಾಮಕಾರಿಯಾಗಿಯೂ ಪಾಲುಗೊಳ್ಳುವುದರ ಮೂಲಕ ತಮ್ಮ ಪ್ರಸಕ್ತ ಶೋಚನೀಯ ಪರಿಸ್ಥಿತಿಯಿಂದ ಮುಕ್ತರಾಗಲು ಸಾಧ್ಯ. ಆದರೆ,

ನೀಡಲಿರುವ ಶಿಕ್ಷಣ ವಯಸ್ಕರ ವಾತಾವರಣ ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿರತಕ್ಕದ್ದು. ಆದ್ದರಿಂದ ಮೊದಲಾಗಿ ಕಲಿಯುವವರ ಪರಕಾಯ ಪ್ರವೇಶಮಾಡಿ ಅವರ ಅಗತ್ಯ ಮತ್ತು ಅಭಿರುಚಿಗಳನ್ನು ತಿಳಿಯತಕ್ಕದ್ದು.

ಪಠ್ಯಸೂಚಿ, ಪಾಠೋಪಕರಣಗಳ ರಚನೆ ಹಾಗೂ ಬೋಧನಾವಿಧಾನಗಳಲ್ಲಿ ವೈವಿಧ್ಯತೆ ಇರತಕ್ಕದ್ದು.

ಕಾರ್ಯಕ್ರಮ ಶಾಸ್ತ್ರೀಯವಾಗಿ ಕ್ರಮವಾಗಿದ್ದು ವ್ಯವಸ್ಥೆ ಸಂಪೂರ್ಣವಾಗಿರತಕ್ಕದ್ದು.

ಪಠ್ಯವಸ್ತು ಸಾಧ್ಯವಾದಷ್ಟು ಆಯಾ ಕ್ಷೇತ್ರದ ನಿರಕ್ಷರ ಕುಕ್ಷಿಗಳ ಆಡುಭಾಷೆಯಲ್ಲಿರಬೇಕು.

ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ರೂಪಿಸುವಾಗ ದೀನದುರ್ಬಲರಿಗೆ ಹರಿಜನ ಗಿರಿಜನರಿಗೆ ಮತ್ತು ಮಹಿಳೆಯರಿಗೆ ಪ್ರಾಧಾನ್ಯತೆ ನೀಡಬೇಕು.

ಭಾರತ ಸರಕಾರ ವಯಸ್ಕರ ಶಿಕ್ಷಣ ಯೋಜನೆಗೆ 686 ಕೋಟಿ ರೂಪಾಯಿಗಳನ್ನು ನಿಗದಿಮಾಡಿದೆ. ಕೇಂದ್ರ ಸರಕಾರ ಈಗಾಗಲೇ 200 ಕೋಟಿ ರೂಪಾಯಿಗಳನ್ನು ಮೊದಲನೆಯ ಕಂತನ್ನಾಗಿ ಬಿಡುಗಡೆಮಾಡಿದೆ. ಈ ಹಣದಲ್ಲಿ ಅರ್ಧಭಾಗವನ್ನು ರಾಜ್ಯ ಸರಕಾರಗಳು ವಿನಿಯೋಗಿಸಬೇಕು. ಉಳಿದರ್ಧವನ್ನು ಕೇಂದ್ರ ಸರಕಾರ ವಹಿಸಲಿದೆ. ಖಾಸಗಿ ಸಂಸ್ಥೆಗಳ ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸಲಿದೆ. ವಯಸ್ಕರ ಶಿಕ್ಷಣ ಕೇಂದ್ರದ ಅವಧಿ 10 ತಿಂಗಳು : 300–350 ಗಂಟೆಗಳು.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ 1978ರ ಅಕ್ಟೋಬರ್ ಎರಡರಂದು ಔಪಚಾರಿಕವಾಗಿ ಪ್ರಾರಂಭವಾಯಿತಷ್ಟೆ. ಈ ಸಂದರ್ಭದಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೆ ಸಾವಿರಾರು ಪ್ರಚಾರಸಭೆಗಳು ನಡೆದುದಾಗಿ ವರದಿಯಾಗಿದೆ. ಆದರೂ ಇನ್ನೂ ಅನೇಕ ಗ್ರಾಮಗಳಲ್ಲಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯ ಸ್ವರೂಪ ತಿಳಿದಿಲ್ಲ ;

ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳು ಈ ಯೋಜನೆಯಲ್ಲಿ ತಮ್ಮ ಪಾತ್ರವೇನೆಂಬುದನ್ನು ತಿಳಿಯಬೇಕಾಗಿದೆ.

ವಯಸ್ಕರ ಶಿಕ್ಷಣ ಕಾರ್ಯಕ್ರಮ ಆಯಾ ರಾಜ್ಯ ಸರಕಾರಗಳ ಜವಾಬ್ದಾರಿ. ಅದನ್ನು ನಿರ್ವಹಿಸಲು ರಾಜ್ಯ ಸರಕಾರಗಳು ಒಪ್ಪಿವೆ. ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ಕೇವಲ ಓದುಬರಹ ಕಲಿಯುವಿಕೆಗೆ ಮಾತ್ರ ಸೀಮಿತವಲ್ಲ ಎಂಬ ಅಂಶವನ್ನು ರಾಜ್ಯ ಸರಕಾರಗಳು ಮನಗಂಡಿವೆ. ಆದರೂ ಈ ಕಾರ್ಯಕ್ರಮ ಎಲ್ಲ ರಾಜ್ಯಗಳಲ್ಲೂ ಒಂದೇರೀತಿಯಾಗಿ ನಡೆಯುತ್ತಿಲ್ಲ. ಬಿಹಾರ, ಗುಜರಾತು, ಅರುಣಾಚಲ ಪ್ರದೇಶ, ನಾಗಾಲ್ಯಾಂಡು, ಜಮ್ಮು ಮತ್ತು ಕಾಶ್ಮೀರ ರಾಜ್ಯಗಳು ಕೇಂದ್ರಸರಕಾರದ ನೆರವಿನ ಜೊತೆಗೆ ತಮ್ಮ ರಾಜ್ಯದ ಸಂಪನ್ಮೂಲಗಳನ್ನು ಕೂಡಿಸಿಕೊಂಡು ಒಳ್ಳೆಯ ಕೆಲಸಮಾಡುತ್ತಿವೆ. ಉತ್ತರಪ್ರದೇಶ, ರಾಜಾಸ್ಥಾನ, ಮಹಾರಾಷ್ಟ್ರ, ಆಂಧ್ರ, ಕರ್ನಾಟಕ, ಹರಿಯಾಣ, ಮಣಿಪುರ ಮತ್ತು ಸಿಕ್ಕಿಂ ರಾಜ್ಯಗಳು ಯೋಜನೆಯನ್ನು ಕಾರ್ಯಗತಗೊಳಿಸಲು ನಿಗದಿಯಾದ ಆಡಳಿತದ ಚೌಕಟ್ಟು ಮತ್ತು ಸಿಬ್ಬಂದಿಯ ಬಗ್ಗೆ ಆಲೋಚಿಸುತ್ತಿವೆ. ಉಳಿದ ರಾಜ್ಯಗಳಲ್ಲಿ ಇನ್ನೂ ವಾಸ್ತವಿಕ ಕಾರ್ಯಕ್ರಮಗಳನ್ನು ರೂಪಿಸುವ ಬಗ್ಗೆ ಪ್ರಯತ್ನಗಳು ನಡೆಯುತ್ತಿವೆ. ಉತ್ತರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಗೆ ನಿಗದಿಯಾಗಿರುವ ಹಣ ಖೋತಾ ಆಗಿದೆ. ತತ್ಪರಿಣಾಮವಾಗಿ ಆ ರಾಜ್ಯಗಳ ಯೋಜನೆ ಬಹುಮಟ್ಟಿಗೆ ಕುಂಠಿತವಾಗಿದೆ.

ಖಾಸಗಿ ಸಂಘಸಂಸ್ಥೆಗಳ ಪಾತ್ರ

ವಯಸ್ಕರ ಶಿಕ್ಷಣ ಹೆಚ್ಚಾಗಿ ಖಾಸಗಿ ಸಂಘಸಂಸ್ಥೆಗಳಿಂದ ಆಗಬೇಕಾದ ಕಾರ್ಯ ಎಂಬ ನೀತಿಗೆ ಭಾರತ ಸರಕಾರ ಬದ್ಧ. ಭಾರತ ಸರಕಾರದ ಹೊಸ ಅನುದಾನದ ನೀತಿಯಿಂದಾಗಿ ಅನೇಕ ಖಾಸಗಿ ಸಂಸ್ಥೆಗಳು ವಯಸ್ಕರ ಶಿಕ್ಷಣ ಕಾರ್ಯ ಕೈಗೊಳ್ಳಲು ಮುಂದೆ ಬಂದಿವೆ. ಇದುವರೆವಿಗೆ 17 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 603 ಖಾಸಗಿ ಸಂಘ ಸಂಸ್ಥೆಗಳು ವಯಸ್ಕರ ಶಿಕ್ಷಣ ಯೋಜನೆಯಲ್ಲಿ ತೊಡಗಿವೆ. ಭಾರತದಂತಹ ವಿಶಾಲ ರಾಷ್ಟ್ರದಲ್ಲಿ ಈಗ ಮುಂದೆ ಬಂದಿರುವ ಸಂಘಸಂಸ್ಥೆಗಳ ಸಂಖ್ಯೆ ಹೆಚ್ಚೇನಲ್ಲ. ಈ ಸಂಸ್ಥೆಗಳು ಕೆಲಸಮಾಡುವ ಉತ್ಸಾಹದ ಭರದಲ್ಲಿ ತಪ್ಪುಹೆಜ್ಜೆ ಇಡಲು ಸಾಧ್ಯ. ಕೆಲವು ಸಂಸ್ಥೆಗಳು ಸ್ಥಳೀಯ ವಾತಾವರಣ ತಿಳಿಯದೆ ಮತ್ತು ಮುಖಂಡರಲ್ಲಿ ಆಲೋಚಿಸದೆ ಕಾಗದದ ಯೋಜನಾಕುಸುಮಗಳನ್ನು ತಯಾರಿಸಿದ್ದಲ್ಲಿ ಆಶ್ಚರ್ಯವೇನಿಲ್ಲ. ಹೀಗಾಗದಂತೆ ಪರಿಣಾಮಕಾರಿಯಾದ ತಾಂತ್ರಿಕ ಮಾರ್ಗದರ್ಶನ ಅಗತ್ಯ. ಸೇವೆ ಸಲ್ಲಿಸುತ್ತಿರುವ ಖಾಸಗಿ ಸಂಘಸಂಸ್ಥೆಗಳ ವಿಚಾರದಲ್ಲಿ ಮಹಾರಾಷ್ಟ್ರ, ಗುಜರಾತು, ಬಿಹಾರ, ರಾಜಾಸ್ಥಾನ ಮತ್ತು ಮಣಿಪುರ ರಾಜ್ಯಗಳಿಗೆ ಮೊದಲನೆಯ ಸ್ಥಾನ.

ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಪಾತ್ರ

ವಿಶ್ವವಿದ್ಯಾನಿಲಯ, ಧನಸಹಾಯ ಮಂಡಲಿ ಹಾಗೂ ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಸಂಘವು ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ಭಾಗವಹಿಸುವಂತೆ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಿಗೆ ಕರೆಕೊಟ್ಟಿದೆ. ಜೊತೆಗೆ ವಿಶ್ವವಿದ್ಯಾನಿಲಯ ಧನಸಹಾಯಮಂಡಲಿ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ಕೆಲವು ಮಾರ್ಗದರ್ಶನಗಳನ್ನು ನೀಡಿವೆ. ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ನಿರತರಾಗಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ಯೋಜನೆ ಮೀಸಲು. ಅದು ಸಲ್ಲದು. ಉತ್ಸಾಹ ಮತ್ತು ವಿಶ್ವಾಸದಿಂದ ಸೇವೆ ಸಲ್ಲಿಸಲು ಮುಂದೆ ಬರುವ ಎಲ್ಲ ವಿದ್ಯಾರ್ಥಿಗಳಿಗೂ ಈ ಯೋಜನೆಗೆ ಪ್ರವೇಶ ನೀಡುವುದು ಒಳ್ಳೆಯದು.

ಕೆಲವು ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿ ವಯಸ್ಕರ ಶಿಕ್ಷಣಕ್ಕೆ ಪ್ರತ್ಯೇಕ ವಿಭಾಗವನ್ನು ತೆರೆಯಬೇಕೆಂಬ ಯೋಚನೆ ಇದೆ. ಆದರೆ ಇದು ಸಾಧುವಲ್ಲ. ರಾಷ್ಟ್ರೀಯ ಸೇವಾ ಯೋಜನೆಯೊಂದಿಗೆ ವಯಸ್ಕರ ಶಿಕ್ಷಣ ಯೋಜನೆಯನ್ನೂ ಸಹ ಐಕ್ಯಗೊಳಿಸುವುದು ಒಳಿತು.

ಅಖಿಲಭಾರತ ವ್ಯವಸಾಯ ಸಂಶೋಧನಾ ಮಂಡಲಿಯು ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯನ್ನು ಅಂಗೀಕರಿಸಿದೆ. ಅದು ತನ್ನ ಆಶ್ರಯದಲ್ಲಿರುವ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಮತ್ತು ಕೃಷಿವಿಜ್ಞಾನಕ್ಕೆ ಸಂಬಂಧಪಟ್ಟ ಸಂಸ್ಥೆಗಳಿಗೆ ಯೋಜನೆಯನ್ನು ಕಾರ್ಯಗತಮಾಡುವ ಬಗ್ಗೆ ಸೂಕ್ತ ಸೂಚನೆಯನ್ನು ನೀಡಿದೆ. ಕೆಲವು ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳು ಪಾಠೋಪಕರಣಗಳನ್ನು ತಯಾರಿಸಲು ಮುಂದೆ ಬಂದಿವೆ. ಅವು ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯನ್ನು ಸಂಶೋಧನಾ ದೃಷ್ಟಿಯಿಂದ ಶಾಸ್ತ್ರೀಯವಾಗಿ ನಡೆಸುವುದು ಒಳ್ಳೆಯದು. ಮೇಲಾಗಿ ವಿಶ್ವವಿದ್ಯಾನಿಲಯಗಳು ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ಮತ್ತು ಮೌಲ್ಯಮಾಪನೆಯಲ್ಲಿ ತೊಡಗುವುದು ಒಳ್ಳೆಯದು.

ಮಹಾರಾಷ್ಟ್ರ, ಬಿಹಾರ ಮತ್ತು ತಮಿಳುನಾಡಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳು ಮುಂದೆ ಬಂದಿವೆ. ಇಡೀ ಭಾರತದಲ್ಲಿ ಪಾಲುಗೊಂಡಿರುವ ವಿಶ್ವವಿದ್ಯಾನಿಲಯಗಳ ಒಟ್ಟು ಸಂಖ್ಯೆ 80. ಮತ್ತು ಕಾಲೇಜುಗಳ ಒಟ್ಟು ಸಂಖ್ಯೆ 2000. ಅವುಗಳ ಪೈಕಿ 49 ವಿಶ್ವವಿದ್ಯಾನಿಲಯಗಳು ಮತ್ತು 515 ಕಾಲೇಜುಗಳು ಕಾರ್ಯಕ್ರಮ ಕೈಗೊಳ್ಳಲು ಧನಸಹಾಯ ಪಡೆದಿವೆ.

ನೆಹರು ಯುವಕ ಕೇಂದ್ರಗಳು

ಭಾರತಾದ್ಯಂತ 138 ನೆಹರು ಯುವಕ ಕೇಂದ್ರಗಳಿವೆ. ಪ್ರತಿಯೊಂದು ಕೇಂದ್ರದ ಆಶ್ರಯದಲ್ಲಿ 30 ರಿಂದ 100 ಚೇತನ ಸಂಘಗಳಿವೆ. ಕೆಲವು ನೆಹರು ಯುವಕ ಸಂಘ

ಗಳು ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆದಿವೆ. ಅವು ಯಶಸ್ವಿಯಾಗಿ ಸೇವೆಸಲ್ಲಿಸಲು ಕಾಲಕ್ಕೆ ಸರಿಯಾಗಿ ಹಣ ಬಿಡುಗಡೆ ಆಗುತ್ತಿಲ್ಲ ಎಂಬ ಕೂಗಿದೆ.

ಉದ್ಯೋಗಪತಿಗಳ ಪಾತ್ರ

ಕಾರ್ಖಾನೆಗಳ ಮಾಲೀಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ತೊಡಗಿರುವ ಉದ್ಯೋಗಿಗಳಿಗೆ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಬಹುದು. ಉದಾಹರಣೆಗೆ, ಕೋಲ್ ಇಂಡಿಯಾ ಕಂಪನಿ (ಕಲ್ಲಿದ್ದಲು ಗಣಿ)ಯ ಆಡಳಿತ ವ್ಯಾಪ್ತಿ ನಾಲ್ಕು ರಾಜ್ಯಗಳಿಗೆ ಸೀಮಿತವಾಗಿದೆ. ಅದು ತನ್ನ ಆಶ್ರಯದಲ್ಲಿರುವ ಅನಕ್ಷರಸ್ಥ ಕಾರ್ಮಿಕರಿಗೆ ಹಾಗೂ ಹೆಚ್ಚಿನ ಕರ್ಮಕೌಶಲ್ಯವಿಲ್ಲದವರಿಗೆ ಓದುಬರಹ ಕಲಿಸಲು ಮುಂದೆಬಂದಿದೆ. ಅಷ್ಟೇ ಅಲ್ಲ ಉದ್ಯೋಗಿಗಳ ಸಂಸಾರಕ್ಕೂ ಸಹ ಶಿಕ್ಷಣ ಸೌಲಭ್ಯ ನೀಡಲು ಯೋಚಿಸುತ್ತಿದೆ.

ಸಿಂಗರೇಲಿಯಲ್ಲಿ 2000 ಮೆಗಾವ್ಯಾಟಿನ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರ 300 ಕೋಟಿ ರೂ. ವೆಚ್ಚದಲ್ಲಿ ಸ್ಥಾಪನೆ ಆಗಲಿದೆ. ಗುಡ್ಡಗಾಡು ಜನರ ಕ್ಷೇತ್ರ ಅದು. ಈ ಕೇಂದ್ರದಲ್ಲಿ ನಿರತರಾದ ಉದ್ಯೋಗಿಗಳಿಗೆ ಮತ್ತು ಇತರರಿಗೆ ಅನುಕೂಲವಾಗುವಂತೆ ಶ್ರಮಿಕ ವಿದ್ಯಾಪೀಠ ಯೋಜನೆಯನ್ನು ಕೈಗೊಳ್ಳಲಾಗುವುದು.

ಅಖಿಲ ಭಾರತ ಬುಕ್ಕಿನ ಸಂಸ್ಥೆ ತನ್ನ ಆಶ್ರಯದಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಹಾಗೂ ಸಾಕಷ್ಟು ಕರ್ಮಕೌಶಲ್ಯವಿಲ್ಲದಿರುವವರಿಗೆ ಕ್ರಿಯಾತ್ಮಕ ಶಿಕ್ಷಣ ನೀಡುವಂತೆ ಕರೆಕೊಟ್ಟಿದೆ. ಅಷ್ಟೇ ಅಲ್ಲ. ಕಾರ್ಖಾನೆಯಿರುವ ಅಲ್ಲಿಯ ಜನರಿಗೂ ಸಹ ದೊರೆಯಲಿದೆ.

ಸಂಪನ್ಮೂಲಗಳ ಅಭಿವೃದ್ಧಿ

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ಪಠ್ಯಸೂಚಿರಚನೆ, ಬೋಧನಾ ಸಾಮಾಗ್ರಿಗಳ ತಯಾರಿಕೆ, ತರಬೇತು ಮತ್ತು ಮೌಲ್ಯಮಾಪನೆಗೆ ಆದ್ಯತೆಯುಂಟು. ಪಠ್ಯಸೂಚಿ ಮತ್ತು ಪಾಠೋಪಕರಣಗಳ ತಯಾರಿಕೆ, ಕಲಿಯುವವರ ಆಸಕ್ತಿ ಮತ್ತು ಅಭಿರುಚಿಗೆ ತಕ್ಕಂತೆ ಇರಬೇಡವೆ? ಅವರ ತಯಾರಿಕೆ ಅಷ್ಟೇನು ಸುಲಭ ಸಾಧ್ಯವಾದ ಕಾರ್ಯವಲ್ಲ. ವಯಸ್ಕರ ಶಿಕ್ಷಣ ಕಾರ್ಯಕರ್ತರಿಗೆ ಇದೊಂದು ಸವಾಲು. ಈ ಕಾರ್ಯದಲ್ಲಿ ಅಖಿಲಭಾರತ ವಯಸ್ಕರ ಶಿಕ್ಷಣ ನಿರ್ದೇಶನಾಲಯ ಮತ್ತು ರಾಜ್ಯ ಸಂಪನ್ಮೂಲ ಕೇಂದ್ರಗಳು ನಿರತವಾಗಿವೆ.

ಭಾರತಾದ್ಯಂತ 19 ರಾಜ್ಯಗಳಲ್ಲಿ 15 ರಾಜ್ಯ ಸಂಪನ್ಮೂಲ ಕೇಂದ್ರಗಳು ಕೆಲಸ ಮಾಡುತ್ತಿವೆ. ವಿಶ್ವವಿದ್ಯಾನಿಲಯ ಹಾಗೂ ಇತರ ಖಾಸಗಿ ಸಂಘ ಸಂಸ್ಥೆಗಳ ಆಶ್ರಯದಲ್ಲಿ ನಾಲ್ಕು ಕೇಂದ್ರಗಳಿವೆ.

ರಾಜ್ಯ ಸಂಪನ್ಮೂಲ ಕೇಂದ್ರಗಳ ಕಾರ್ಯ

1. ಕಲಿಯುವವರ ಆಸಕ್ತಿಗೆ ಅನುಗುಣವಾದ ಪಠ್ಯಸೂಚಿ ರಚನೆ, ಪಾಠೋಪಕರಣಗಳ ತಯಾರಿಕೆ ಹಾಗೂ ಈ ವಿಚಾರವಲ್ಲಿ ಕೈಪಿಡಿ ಪ್ರಕಟಣೆ.

2. ಸ್ಥಿರೀಕರಣ ಸಾಹಿತ್ಯ ರಚನೆ ಮತ್ತು ಹಾಲಿ ಇರುವ ಸಾಹಿತ್ಯದ ಮೌಲ್ಯಮಾಪನೆ, ಹೊಸ ಸಾಹಿತ್ಯ ಪ್ರಕಟಣೆ, ಸಾಹಿತ್ಯರಚನೆಯ ಬಗ್ಗೆ ಕೈಪಿಡಿಯ ಪ್ರಕಟಣೆ.

3. ವಿವಿಧ ಹಂತದ ಕಾರ್ಯಕರ್ತರಿಗೆ ತರಬೇತು.

4. ತರಬೇತಿ ನೀಡಲು ಅನುಕೂಲವಾಗುವಂತೆ ಜಿಲ್ಲಾ ಮಟ್ಟದಲ್ಲಿ ಅನುಭವಶಾಲಿಗಳ ತಂಡದ ರಚನೆ.

5. ಚಿತ್ರಪಟ, ಭಿತ್ತಿಪತ್ರ, ಸಾಮೂಹಿಕ ಪ್ರಸಾರ ಮಾಧ್ಯಮ, ಪ್ರಚಾರ ಸಾಹಿತ್ಯ ಮತ್ತು ಪ್ರದರ್ಶನಗಳ ಮೂಲಕ ವಯಸ್ಕರ ಶಿಕ್ಷಣ ಯೋಜನೆಗೆ ಸೂಕ್ತವಾತಾವರಣ ಕಲ್ಪಿಸುವುದು.

6. ಸಂಶೋಧನೆ ಮತ್ತು ಮೌಲ್ಯಮಾಪನೆ

7. ಕೇಂದ್ರ ವಯಸ್ಕರ ಶಿಕ್ಷಣ ನಿರ್ದೇಶನಾಲಯದ ಪ್ರಕಟಣೆಗಳನ್ನು ಸ್ಥಳೀಯ ಭಾಷೆಗಳಿಗೆ ಭಾಷಾಂತರಿಸಿ ಪ್ರಕಟಿಸುವುದು.

ಮೇಲೆ ಹೇಳಿದ ಎಲ್ಲ ಕಾರ್ಯಕ್ರಮಗಳನ್ನು ಎಲ್ಲ ರಾಜ್ಯ ಸಂಪನ್ಮೂಲ ಕೇಂದ್ರಗಳು ಕೈಗೊಳ್ಳಲು ಆಗದಿರಬಹುದು. ಆದರೆ ಬೋಧನಾ ಸಾಮಗ್ರಿಗಳ ತಯಾರಿಕೆ ಮತ್ತು ಕಾರ್ಯಕರ್ತರ ತರಬೇತಿಗೆ ಎಲ್ಲ ಕೇಂದ್ರಗಳು ಗಮನ ಇತ್ತಿವೆ. ಬೋಧನಾಸಾಮಗ್ರಿಗಳ ಬಗ್ಗೆ ಪ್ರಯೋಗ ನಡೆಸಲು ರಾಜ್ಯ ಸಂಪನ್ಮೂಲ ಕೇಂದ್ರಗಳು ಹಲವಾರು ಕೇಂದ್ರಗಳನ್ನು ನಡೆಸುತ್ತಿವೆ. ಕೆಲವು ಆತುರಾತರದಲ್ಲಿ, ಉತ್ಸಾಹಭರದಲ್ಲಿ ತಾವು ರಚಿಸಿದ ಪಠ್ಯಪುಸ್ತಕಗಳ ಮೌಲ್ಯಮಾಪನೆ ಶಾಸ್ತ್ರೀಯವಾಗಿ ನಡೆಸುತ್ತಿಲ್ಲ. ಕೇಂದ್ರದ ಕಾರ್ಯದಲ್ಲಿ ಹೊಂದಾಣಿಕೆ ಅಗತ್ಯ. ಹೀಗಾಗಿ ಕೇಂದ್ರದ ತಜ್ಞರ ಸೇವೆ ಸರಿಯಾಗಿ ಬಳಕೆಯಾಗುತ್ತಿಲ್ಲ. ಇದಕ್ಕೆಲ್ಲಾ ಕೆಲವು ಕಡೆಗಳಲ್ಲಿ ಕೇಂದ್ರದ ಸಮನ್ವಯಾಧಿಕಾರಿಗಳ ಸ್ವಪ್ರತಿಷ್ಠೆ ಮತ್ತು ದೂರದೃಷ್ಟಿಯ ಅಭಾವ ಅಡ್ಡಿ ಬಂದಿದ್ದಲ್ಲಿ ಆಶ್ಚರ್ಯವೇನಿಲ್ಲ.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ವಿಸ್ತಾರವಾಗುತ್ತಿದೆ. ಇಷ್ಟೊಂದು ಕೆಲಸವನ್ನು ರಾಜ್ಯ ಸಂಪನ್ಮೂಲ ಕೇಂದ್ರ ಒಂದೇ ನಿರ್ವಹಿಸಲು ಸಾಧ್ಯ ಆಗುತ್ತಿಲ್ಲ. ಆದ್ದರಿಂದ ಜಿಲ್ಲಾಮಟ್ಟದಲ್ಲಿ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವ ಅಗತ್ಯವಿದೆ. ಆದರಲ್ಲೂ ಉಪಾಧ್ಯಾಯರ ತರಬೇತನ್ನು ನಡೆಸಲು ಜಿಲ್ಲಾಮಟ್ಟದಲ್ಲಿ ಅನುಭವಶಾಲಿಗಳ ತಂಡದ ರಚನೆ ಅನಿವಾರ್ಯ. ಸ್ಥಳೀಯ ಮಟ್ಟದಲ್ಲಿ ಪಠ್ಯಪುಸ್ತಕಗಳ ರಚನೆ ಆಗಬೇಕಾಗಿದೆ. ಈ ಕಾರ್ಯದಲ್ಲಿ ಜಿಲ್ಲಾ ಸಂಪನ್ಮೂಲ ಕೇಂದ್ರಗಳು ತಮ್ಮ ಕಾಣಿಕೆಯನ್ನು ಸಲ್ಲಿಸಬೇಕಾಗಿದೆ.

ಬಿಹಾರಿನ ರಾಂಚಿ ಮತ್ತು ಮಾಂಘೈರ್, ರಾಜಾಸ್ಥಾನದ ಬಿಕನೀರ್, ಉದಯಪುರ, ಮತ್ತು ಬರೋಡದ ಖಾಸಗಿ ಸಂಘಸಂಸ್ಥೆಗಳು ಪರಸ್ಪರ ತಾಂತ್ರಿಕ ನೆರವನ್ನು

ಪಡೆಯಲು ತಮ್ಮತಮ್ಮಲ್ಲಿ ಸಹಕಾರಸಂಘಗಳನ್ನು ರಚಿಸಿಕೊಂಡಿವೆ. ಇಂತಹ ಏರ್ಪಾಡು ಎಲ್ಲಕಡೆಯೂ ಅಗತ್ಯ. ಈ ಕಾರ್ಯವನ್ನು ಜಿಲ್ಲಾ ವಯಸ್ಕರ ಶಿಕ್ಷಣ ಅಧಿಕಾರಿಗಳು ಮತ್ತು ರಾಜ್ಯ ಸಂಪನ್ಮೂಲ ಕೇಂದ್ರದ ಅಧಿಕಾರಿಗಳು ಮಾಡಬೇಕು.

ತರಬೇತು

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ನಿರತನಾದ ಪ್ರತಿಯೊಬ್ಬ ಕಾರ್ಯಕರ್ತನಿಗೂ ಯೋಜನೆಯ ಪೂರ್ಣಮಾಹಿತಿ ಇರಬೇಕು. ಇಲ್ಲದಿದ್ದಲ್ಲಿ ಕಾರ್ಯಕ್ರಮ ಕುಂಠಿತವಾಗುವುದು. ಉಪಕರಣವಿಲ್ಲದ ಗಾರೆ ಕೆಲಸಗಾರನಂತೆ ಆಗುವುದು. ರಾಜ್ಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಿಂದ ಹಿಡಿದು ಉಪಾಧ್ಯಾಯನ ಮಟ್ಟದವರೆವಿಗೆ ತರಬೇತಿ ಅಗತ್ಯ. ಈ ತೆರನಾದ ತರಬೇತಿ ನಡೆಸಲು ಹಲವಾರು ಸಂಸ್ಥೆಗಳಿವೆ. ನೀತಿ ನಿಯಮಗಳು ರಚಿತವಾಗಿವೆ. ಆದರೆ ವಾಸ್ತವಿಕವಾಗಿ ನಡೆಯುತ್ತಿರುವುದೇ ಬೇರೆ. ಒಟ್ಟಿನಲ್ಲಿ ತರಬೇತಿ ಇನ್ನೂ ಹೆಚ್ಚಿಗೆ ಪರಿಣಾಮಕಾರಿಯಾಗಿರಬೇಕು. ತರಬೇತಿ ಪಡೆಯುವವರನ್ನು ತರಬೇತಿ ನೀಡುವ ಸಂಸ್ಥೆಗಳ ಕಾರ್ಯಕರ್ತರು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ತರಬೇತಿಯ ಬಗ್ಗೆ ಅವರು ಸೂಚಿಸುವ ಕೊರತೆಗಳ ಬಗ್ಗೆ ಗಮನ ನೀಡಬೇಕು. ಈಗ ತರಬೇತಿ ಶಿಬಿರದ ಮುಕ್ತಾಯ ಸಮಾರಂಭಗಳಲ್ಲಿ ತರಬೇತಿ ಪಡೆದ ಕಾರ್ಯಕರ್ತರ ಪ್ರತಿನಿಧಿಗಳು ಔಪಚಾರಿಕವಾಗಿ ತರಬೇತನ್ನು ಮತ್ತು ಅದನ್ನು ನೀಡಿದವರ ಬಗ್ಗೆ ಮೆಚ್ಚುಗೆ ಸೂಚಿಸುವ ಸಂಪ್ರದಾಯವಿದೆ. ಇದು ಎಷ್ಟು ಬೇಗ ತಪ್ಪಿದರೆ ಅಷ್ಟು ಒಳ್ಳೆಯದು. ಬದಲಾಗಿ ತರಬೇತಿ ಕಾರ್ಯಕ್ರಮದ ಶಾಸ್ತ್ರೀಯ ಮೌಲ್ಯಮಾಪನೆಯನ್ನು ಜಾರಿಗೆ ತರುವುದು ಫಲಕಾರಿ.

ಉಪಾಧ್ಯಾಯರ ತರಬೇತಿಯ ಅವಧಿ 3 ವಾರಗಳು. ಅದನ್ನು ಎರಡು ಹಂತಗಳಲ್ಲಿ ಏರ್ಪಡಿಸಲು ಅಖಿಲಭಾರತ ವಯಸ್ಕರ ಶಿಕ್ಷಣ ನಿರ್ದೇಶನಾಲಯ ಒಪ್ಪಿದೆ. ಆದರೆ ಈ ಶಿಬಿರದ ಅವಧಿ 5 ರಿಂದ 7 ದಿನಗಳಿಗೆ ಇಳಿದಿದೆ. ತರಬೇತು ಬಹುವಾಗಿ ಉಪನ್ಯಾಸ ರೂಪದಲ್ಲಿ ನಡೆಯುತ್ತಿದೆ. ಒಂದು ಕಡೆಯಲ್ಲಿ ನಡೆದದ್ದು ಹೀಗೆ. ಒಬ್ಬ ಉಪನ್ಯಾಸಕರು ವ್ಯವಸಾಯದ ಬಗ್ಗೆ ಒಂದು ಗಂಟೆಯ ಕಾಲ ಭಾಷಣ ಕುಟ್ಟಿದ್ದರು. ತಮ್ಮ ಭಾಷಣದ ಬಗ್ಗೆ ತಾವೇ ಪ್ರಶಂಸೆ ಮಾಡಿಕೊಂಡರು. ಆದರೆ, ಕೇಳಿದ್ದು ಅನ್ನ ಕೊಟ್ಟದ್ದು ಕಲ್ಲು ಎಂಬಂತೆ ಗ್ರಾಮಸ್ಥರಿಗೆ ಬೇಕಾದುದ್ದು ಸಕಾಲಕ್ಕೆ ಬೀಜ ಮತ್ತು ಗೊಬ್ಬರ. ಆದರೆ ಅವುಗಳ ಬಗ್ಗೆ ಉಪನ್ಯಾಸ ಬೇಕಿರಲಿಲ್ಲ. ಕಾರಣ ಅದು ರೈತರಿಗೆ ಮೊದಲೇ ತಿಳಿದಿತ್ತು. ಇನ್ನು ಕೆಲವು ಕಡೆಗಳಲ್ಲಿ ತರಗತಿಗಳು ಪ್ರಾರಂಭವಾದ ಎಷ್ಟೋ ದಿನದ ನಂತರ ತರಬೇತಿ ಪ್ರಾರಂಭ. ವಿದ್ಯುಚ್ಛಕ್ತಿಯ ಸ್ವಿಚ್ ಒತ್ತಿದ ತಕ್ಷಣ ದೀಪ ಬಂದಂತೆ ಒಂದೇ ದಿನ ಜಿಲ್ಲಾದ್ಯಂತ ನೂರಾರು ತರಗತಿಗಳ ಸ್ಥಾಪನೆ. ಕೈಹುಣ್ಣಿಗೆ ಕನ್ನಡಿ ಬೇಕೆ ಎಂಬಂತೆ ಇದಕ್ಕೆ ಮೌಲ್ಯಮಾಪನೆ ಬೇರೆ ಬೇಕೆ ?

ಆಡಳಿತ

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯನ್ನು ಕಾರ್ಯಗತಮಾಡಲು ವಿವಿಧ ಹಂತಗಳಲ್ಲಿ ಹೊಸ ಸಂಸ್ಥೆಗಳನ್ನು ರಚಿಸುವ ಬದಲು ಹಾಲಿ ಇರುವ ಸಂಸ್ಥೆಗಳನ್ನೇ ಬಲ ಪಡಿಸಲು ನಿರ್ಧರಿಸಲಾಯ್ತು. ಕೇಂದ್ರಮಟ್ಟದಲ್ಲಿ ರಾಷ್ಟ್ರೀಯ ಕೇಂದ್ರ ವಯಸ್ಕರ ಶಿಕ್ಷಣ ನಿರ್ದೇಶನಾಲಯ ಇದೆ. ವಯಸ್ಕರ ಶಿಕ್ಷಣ ವಿಚಾರದಲ್ಲಿ ರಾಜ್ಯ ಸರಕಾರಗಳಿಗೆ ಸಲಹೆ ಹಾಗೂ ಅವುಗಳ ಕಾರ್ಯಪರಿಶೀಲನೆ ನಿರ್ದೇಶನಾಲಯದ ಜವಾಬ್ದಾರಿ. ಈ ಸಂಸ್ಥೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಯುನೆಸ್ಕೊ ಮುಂತಾದ ಸಂಸ್ಥೆಗಳಿಂದ ತಾಂತ್ರಿಕ ಜ್ಞಾನ ಮತ್ತು ನೆರವು ಪಡೆಯುತ್ತಿದೆ.

ವಯಸ್ಕರ ಶಿಕ್ಷಣದ ಬಗ್ಗೆ ಸಲಹೆ ನೀಡಲು ಕೇಂದ್ರ ಮತ್ತು ರಾಜ್ಯಮಟ್ಟಗಳಲ್ಲಿ ಸಲಹಾ ಮಂಡಳಿಗಳಿವೆ, ಕೆಲವು ಸಲಹಾ ಮಂಡಲಿಗಳಲ್ಲಿ ವಯಸ್ಕರ ಶಿಕ್ಷಣ ತಜ್ಞರ ಕೊರತೆ ಕಂಡು ಬಂದಿದೆ. ಕೇಂದ್ರದಂತೆ ರಾಜ್ಯಮಟ್ಟದಲ್ಲೂ ವಯಸ್ಕರ ಶಿಕ್ಷಣ ನಿರ್ದೇಶ ನಾಲಯವಿದೆ. ಅದರ ನಿರ್ದೇಶನದಲ್ಲಿ ಜಿಲ್ಲಾ ಕಾರ್ಯಕರ್ತರು ಸೇವೆ ಸಲ್ಲಿಸುವರು. ಜಿಲ್ಲಾ ವಯಸ್ಕರ ಶಿಕ್ಷಣ ಕಾರ್ಯಕರ್ತರಿಗೆ ಸಲಹೆ ನೀಡಲು ಹಾಗೂ ಇಡೀ ಜಿಲ್ಲೆಯ ವಯಸ್ಕರ ಶಿಕ್ಷಣ ಕಾರ್ಯ ಮೇಲ್ವಿಚಾರಣೆ ನಡೆಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿ ಇರಬೇಕೆಂದು ನಿಗದಿಯಾಗಿದೆ. ಆದರೆ ರಾಜಾಸ್ಥಾನ ಮತ್ತು ಗುಜ ರಾತ್ ರಾಜ್ಯಗಳು ವಿನಹ ಉಳಿದ ರಾಜ್ಯಗಳಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣ ಸಲಹಾ ಮಂಡಲಿಗಳು ಇನ್ನೂ ರಚಿತವಾಗಿಲ್ಲ. ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಮತ್ತು ಗುಜರಾತಿನಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣ ಅಧಿಕಾರಿಗಳ ನೇಮಕ ಆಗಿದೆ. ವಯಸ್ಕರ ಶಿಕ್ಷಣ ಕೇಂದ್ರಗಳು ಬೇಡುವ ತಾಂತ್ರಿಕ ಸಲಹೆ ಸೌಕರ್ಯ ಗಳನ್ನು ನೀಡಲು ಅಭಿವೃದ್ಧಿ ಇಲಾಖೆಗಳು ಒಪ್ಪಿವೆ.

ವಯಸ್ಕರ ಶಿಕ್ಷಣ ಕೇಂದ್ರಗಳ ಮೇಲ್ವಿಚಾರಣೆ ನಡೆಸಲು ಅನೇಕ ರಾಜ್ಯಗಳಲ್ಲಿ ಮೇಲ್ವಿಚಾರಕರ ನೇಮಕ ಆಗಿಲ್ಲ. ಅಂತಹ ರಾಜ್ಯಗಳ ಪೈಕಿ ಕರ್ನಾಟಕವೂ ಸಹ ಒಂದು.

ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಗಮನ ನೀಡಬೇಕೆಂದು ಭಾರತ ಸರಕಾರದ ಆಶಯ. ಆದರೂ ಸಾಕಷ್ಟು ಮಹಿಳಾ ಕೇಂದ್ರಗಳು ಆರಂಭವಾಗಿಲ್ಲದಿರುವುದು ಶೋಚ ನೀಯ. ಮಹಿಳಾ ಕೇಂದ್ರಗಳನ್ನು ತೆರೆಯಲು ಅನೇಕ ಕಡೆಗಳಲ್ಲಿ ಮಹಿಳಾ ಮೇಲ್ವಿ ಚಾರಕರ ನೇಮಕವಾಗಿಲ್ಲ. ಕಾರಣ, ಅವರು ಈ ಕಾರ್ಯಕ್ಕೆ ಮುಂದೂ ಬರುತ್ತಿಲ್ಲ ಎಂಬುದು. ಗ್ರಾಮಾಂತರ ಪ್ರದೇಶಗಳಲ್ಲಿ ಅವರು ಒಂಟಿಯಾಗಿ ಪ್ರವಾಸ ಮಾಡಲು ತೊಂದರೆ. ಆದ್ದರಿಂದ ಅವರ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಕಡಿಮೆ ಮಾಡಿ ಹೆಚ್ಚು ಮಂದಿ ಮಹಿಳಾ ಕಾರ್ಯಕರ್ತರನ್ನು ನೇಮಕಮಾಡಬಹುದು. ಪ್ರತಿ ಹತ್ತು ಇಲ್ಲವೇ 5 ತರಗತಿಗಳಿಗೆ ಒಬ್ಬರಂತೆ ಮಹಿಳಾ ಮೇಲ್ವಿಚಾರಕರನ್ನು ನೇಮಕ ಮಾಡಿದರೆ ಒಳ್ಳೆಯದು.

ಈಗ ಮಹಿಳಾ ಕಾರ್ಯಕರ್ತರ ನೇಮಕದ ಬಗ್ಗೆ ನೀತಿ ನಿಯಮಗಳನ್ನು ಸಡಿಲಿಸಿ ಹೆಚ್ಚು ಮಂದಿ ಮಹಿಳೆಯರು ಈ ಕ್ಷೇತ್ರಕ್ಕೆ ಬರುವಂತೆ ಆಕರ್ಷಿಸಬೇಕು. ಪ್ರತಿ 30 ತರಗತಿಗಳಿಗೆ ಒಬ್ಬ ಗಂಡಸು ಮೇಲ್ವಿಚಾರಕ ಎಂಬ ನಿಯಮ ಮಹಿಳಾ ಕೇಂದ್ರಗಳ ಬಗ್ಗೆ ಸಲ್ಲದು.

ಒಬ್ಬನಿಗೆ ವಯಸ್ಕರ ಶಿಕ್ಷಣ ನೀಡಲು ತಗಲುವ ವೆಚ್ಚ ಸರಾಸರಿ 80 ರೂಪಾಯಿ. ಜನತಾ ಚಳುವಳಿಯಾದ ಮಹಾರಾಷ್ಟ್ರ ಗ್ರಾಮಶಿಕ್ಷಣ ಮೊಹೀಂನಲ್ಲಿ ಸರಾಸರಿ ವೆಚ್ಚ ಕೇವಲ ಒಂದು ರೂಪಾಯಿ. ಇಷ್ಟೊಂದು ಹಣ ಖರ್ಚಾಗುವಾಗ ವ್ಯವಸ್ಥೆ ಮತ್ತು ಶ್ರದ್ಧೆಯಿಂದ ಕಾರ್ಯ ನಡೆಯಬೇಕೆಂದು ನಿರೀಕ್ಷಿಸುವುದು ತಪ್ಪಾಗದು. ಅಕ್ಷರ ಪ್ರಚಾರದಲ್ಲಿ ಸುಳ್ಳು ಅಂಕಿಸಂಖ್ಯೆಗಳು ನುಸುಳುತ್ತವೆ ಎಂಬ ದೂರಿದೆ. ಇದು ಕೇವಲ ಅಕ್ಷರ ಪ್ರಚಾರಕ್ಕೆ ಸೀಮಿತವಾಗಿಲ್ಲ ಎಂಬುದನ್ನು ಮನಗಾಣುವುದು ಒಳ್ಳೆಯದು. ಪ್ರಾಮಾಣಿಕವಾದ ಪ್ರಗತಿಯ ವರದಿ ಹಾಗೂ ಪ್ರಗತಿಯನ್ನು ಸಾಧಿಸಲು ಇರುವ ಸಮಸ್ಯೆಗಳನ್ನು ಕಾರ್ಯಕರ್ತರು ಮತ್ತು ಸಂಘಸಂಸ್ಥೆಗಳು ನಿಸ್ಸಂಕೋಚವಾಗಿ ಮತ್ತು ನಿರ್ಭಯವಾಗಿ ತಿಳಿಸಬೇಕೆಂದು ಭಾರತ ಸರಕಾರ ಆಶಿಸಿದೆ. ಸುಳ್ಳು ವರದಿಗಳು ಕಾರ್ಯಕ್ರಮದ ಯಶಸ್ಸಿಗೆ ಮಾರಕವಲ್ಲವೆ ? ಆದ್ದರಿಂದ ಪ್ರತಿಯೊಬ್ಬ ಕಾರ್ಯಕರ್ತನು ತನ್ನ ಕಾರ್ಯದ ಬಗ್ಗೆ ತನ್ನ ಅಂತರಾತ್ಮವನ್ನು ಕೇಳಬೇಕು. ಈ ತೆರನಾದ ವೈಜ್ಞಾನಿಕ ಪರಿಶೀಲನೆಯ ಮನೋಭಾವ ಕಾರ್ಯಕರ್ತರಲ್ಲಿ ಮೂಡಿದ ಹೊರತು ಕಾರ್ಯ ಯಶಸ್ವಿಯಾಗಲಾರದು ಹಾಗೂ ಹಣದ ಪೋಲು ತಪ್ಪದು.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

ಮಾನವಿಕ ಕರ್ಣಾಟಕ

ವಿಜ್ಞಾನ ಕರ್ಣಾಟಕ

ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬